
ಸಂಪುಟ 22 ಸಂಚಿಕೆ 3
ಜನವರಿ 16, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ಮತ್ತೆ ಹೆಡೆಯಾಡುತ್ತಿರುವ ಕೋಮುವಾದಿ ವಿಷನಾಗರ



ಕೃಷ್ಣಾ ಕಣಿವೆಯ ರೈತರ ನೋವುಗಳು

ಕ್ರಿಸ್‌ಮಸ್‌ಗೂ ದೆವ್ವಗಳ ಕಾಟ

ಧರ್ಮನಿರಪೇಕ್ಷ ಶಕ್ತಿಗಳು ಎಚ್ಚರಗೊಳ್ಳಬೇಕು

ಚಿಕ್ಕಮಗಳೂರು ಪ್ರಕ್ಷುಬ್ಧವಾಗಿದೆ. ಕೋಮುಸೌಹಾರ್ದತೆ, ಶಾಂತಿ-ಸಾಮರಸ್ಯಕ್ಕೆ ಭಂಗ ತರುವ ಘಟನೆಗಳು ನಡೆಯುತ್ತಿವೆ. ಹಿಂದೂ-ಮುಸ್ಲಿಂರ ನಡುವೆ ಸಾಮರಸ್ಯದ ಪರಂಪರೆಯ ನೆಲೆವೀಡಾದ ಈ ಪ್ರದೇಶದಲ್ಲಿ ಕೋಮುಸಂಘರ್ಷವನ್ನು ಹುಟ್ಟುಹಾಕಲಾಗುತ್ತಿದೆ. ಜನವರಿ ೬ ರಂದು ಗೋಲಿಬಾರ್ ನಡೆದು ಕನಿಷ್ಟ ೮ ಜನರು ಗಾಯಗೊಂಡಿದ್ದಾರೆಂದು ವರದಿಯಾಗಿದೆ. ಇದೊಂದು ಅತ್ಯಂತ ಆತಂಕದ- ಖಂಡನೀಯ ಸಂಗತಿ.

ಈ ಘಟನೆಗೆ ಹಿನ್ನೆಲೆಯೇನೆಂದರೆ ಚಿಕ್ಕಮಗಳೂರಿನ ವಿಜಯಪುರದ ಬಡಾವಣೆಯ ದೇವಸ್ಥಾನದ ಮೇಲಿರುವ ಹನುಮಾನ್‌ಗೆ ಯಾರೋ ಚಪ್ಪಲಿಹಾರ ಹಾಕಿದ್ದಾರೆ ಎಂಬುದು. ಈ ಸುದ್ದಿ ಹಬ್ಬುತ್ತಲೇ (ಹಬ್ಬಿಸುತ್ತಲೇ) ಕಾಯುತ್ತಾ ಕುಳಿತಿದ್ದ ಕೋಮುವಾದಿ ಗಳಾದ ಬಜರಂಗದಳ, ವಿಶ್ವ ಹಿಂದೂ ಪರಿಷತ್ ಮತ್ತು ಆರ್.ಎಸ್.ಎಸ್., ಬಿಜೆಪಿ ಯವರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಇನ್ನೊಂದು ಕೋಮುವಿನ ವಿರುದ್ಧ ಘೋಷಣೆ ಕೂಗಿದ್ದಲ್ಲದೇ ಪೂಜಾ ಮಂದಿರದ ಬಳಿ ಚಪ್ಪಲಿ ತೂರಾಟದಂತಹ ಪ್ರಚೋದಾತ್ಮಕ ಕೃತ್ಯಗಳನ್ನು ಮಾಡಲಾಗಿದೆ. ಹೀಗೆ ಹೊತ್ತಿಕೊಂಡ ಬೆಂಕಿ ನಗರದ ಜನಜೀವನವನ್ನು ಬೇಯಿಸತೊಡಗಿದೆ. ಅಲ್ಪಸಂಖ್ಯಾತರು ರಂಜಾನ್ ಹಬ್ಬದ ಆಚರಣೆಗೆ ಸಿದ್ಧರಾಗುತ್ತಿರುವಂತೆಯೇ ಈ ಘಟನೆ ನಡೆದಿರುವುದು ಗಮನಾರ್ಹ.

ಈಚೆಗೆ ಕೆಲವೇ ವಾರಗಳ ಹಿಂದೆ ಬೀದರನಲ್ಲಿಯೂ 'ಹನುಮಾನ್'ನ ಮೂರ್ತಿಗೆ ಬೂದಿ ಬಳಿದರೆಂದು ಇದೇ ಸಂಘ ಪರಿವಾರದವರು ಪ್ರತಿಭಟನೆ ನಡೆಸಿ, ಅವ್ಯಾಚ್ಯವಾಗಿ ಬೈಯ್ದಾಡಿ ಅಲ್ಪಸಂಖ್ಯಾತರ ಅಂಗಡಿ-ಮುಂಗಟ್ಟುಗಳಿಗೆ ಗಣನೀಯ ಹಾನಿ ಮಾಡಿದ್ದಾರೆ.

ಈ ಘಟನೆಯ ವಿವರಗಳನ್ನು ಪರಿಶೀಲಿಸಿದರೆ, ಕೆಲವು ಸಾಮಾನ್ಯ ಅಂಶಗಳು ಕಂಡುಬರುತ್ತವೆ. ಬೀದರ್ ಮತ್ತು ಚಿಕ್ಕಮಗಳೂರಿನಲ್ಲಿ 'ಅಪಮಾನಕ್ಕೆ' ಈಡಾದ ಮೂರ್ತಿ 'ಹನುಮಾನ್'. 'ಹನುಮಾನ್' ಬಜರಂಗದಳದ ಆರಾಧ್ಯ ದೈವ(?) ಎಂಬುದು. ಎರಡನೆಯದಾಗಿ ಬೀದರ್ ಜಿಲ್ಲೆಯಲ್ಲಿ ಬಿಜೆಪಿ ಸಂಸತ್ ಸದಸ್ಯರಿದ್ದರೂ ಹಿಂದೆ ಇರದಂತಹ ಐದು ಶಾಸಕರು ಈ ಬಾರಿ ಆಯ್ಕೆಯಾಗಿದ್ದಾರೆ. ಚಿಕ್ಕಮಗಳೂರು ಸಹ ಬಿಜೆಪಿಯ ಸಂಸತ್ ಸದಸ್ಯರನ್ನು ಆಯ್ಕೆ ಮಾಡಿದೆ. ಮೂರನೆಯದಾಗಿ ಮೂರ್ತಿ ಅಪಮಾನದ ಬಳಿಕ ಪ್ರತಿಭಟನೆ ಹಾಗೂ ಅವರ ದಾಳಿಗೆ ಗುರಿಯಾಗುವವರು ಅಲ್ಪಸಂಖ್ಯಾತರು. ಈ ಎರಡೂ ಕಡೆ ರಾಜ್ಯದ ಹೊರಗಿನಿಂದ ಬಂದ ತರಬೇತಿ ಪಡೆದ

ಸಂಪಾದಕೀಯ

ಕಾರ್ಯಕರ್ತರು ತಳವೂರಿದ್ದಾರೆ. ಒಟ್ಟು ಘಟನೆಗಳನ್ನು ಆಳವಾಗಿ, ಸೂಕ್ಷ್ಮವಾಗಿ ಪರಿಶೀಲಿಸಿದರೆ ಇವೆಲ್ಲಾ ಪೂರ್ವಯೋಜಿತವಾಗಿರುವುದು ಕಂಡುಬರುತ್ತದೆ. ಚಿಕ್ಕಮಗಳೂರನ್ನು ಮುಖ್ಯವಾಗಿ ಬಾಬಾ ಬುಡನ್‌ಗಿರಿಯನ್ನು ಮತ್ತೊಂದು ಅಯೋಧ್ಯೆ ಮಾಡುವುದಾಗಿ ಬಹಿರಂಗವಾಗಿಯೇ ಸಂಘಪರಿವಾರವು ಸಾರುತ್ತಿವೆ. ದತ್ತ ಜಯಂತಿ ಯಂದು ನಡೆದ ವಿದ್ಯಮಾನಗಳು ಮತ್ತು ಅದೇ ಸಂದರ್ಭ ಉಪಯೋಗಿಸಿ ರಾಜ್ಯದಲ್ಲಿ ೧೦೮ ಪ್ರದೇಶಗಳಲ್ಲಿ ದತ್ತಹೋಮ ಮಾಡಿದುದು ಜಾಥಾಗಳು, ಮತ್ತು ಪ್ರಚಾರದ ಯೋಜನೆ ಪ್ರಮಾಣ, ಸುಳ್ಳು ದಾಖಲೆಗಳ ಸೃಷ್ಟಿ ಇವೆಲ್ಲಾ ಮುಂಬರುವ ಗಂಡಾಂತರವನ್ನು ಎತ್ತಿ ತೋರಿಸುತ್ತಿವೆ. ಆ ರಾಕ್ಷಸೀ ಒಳಸಂಚಿನ ಮುಂದುವರಿಕೆಯಂತಿವೆ ಬೀದರ ಹಾಗೂ ಚಿಕ್ಕಮಗಳೂರಿನ ಹಿಂಸಾಕಾಂಡಗಳು.

ಕೋಮುವಾದಿ ಹಿಂಸಾಕಾಂಡದಲ್ಲಿ ತಕ್ಷಣದ ಹೆಜ್ಜೆಯಾಗಿ ದೃಢವಾದ ಆಡಳಿತಾತ್ಮ ಕ್ರಮಗಳು, ಸರ್ಕಾರದ ರಾಜಕೀಯ ಇಚ್ಛಾ ಶಕ್ತಿ ಪ್ರಧಾನ ಪಾತ್ರ ವಹಿಸುತ್ತವೆ. ರಾಜ್ಯ ದಲ್ಲಿ ಆಡಳಿತ ನಡೆಸುತ್ತಿರುವ ಅಲ್ಪಸಂಖ್ಯಾತರ ಮತಗಳು ಆಧಾರದ ಮೇಲೆ ಆಯ್ಕೆಯಾಗಿ ಬಂದಿರುವ ರಾಜ್ಯ ಸರ್ಕಾರ ಗೋಲಿಬಾರ್ ನಂತಹ ಕ್ರಮ ಕೈಗೊಂಡಿದ್ದರೂ ಕೂಡ ದೃಢವಾದ ಇಚ್ಛಾಶಕ್ತಿಯನ್ನು ತೋರಿಸುವುದರಲ್ಲಿ ಹಿಂದೆ ಬೀಳುತ್ತಿದೆ. ಈ ಪಾತಕದಲ್ಲಿ ಭಾಗಿಯಾದವರ ಮೇಲೆ ಕಠಿಣ, ನಿಷ್ಠುರ ಕ್ರಮ ವಹಿಸಬೇಕು. ಈ ಘಟನೆಗಳ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವ ಅಡ್ವಾಣಿಯವರನ್ನು ರಾಜ್ಯದ ಮುಖ್ಯಮಂತ್ರಿ ಭೇಟಿಯಾಗಿದ್ದಾರೆ. ಕೇಂದ್ರ ಸರ್ಕಾರಕ್ಕೆ ಅದರ ನಾಯಕರಿಗೆ ಅವರ ಪರಿವಾರ ನಡೆಸುತ್ತಿರುವ ದಾಂಧಲೆಗಳನ್ನು ನಿಲ್ಲಿಸುವ ಸೂಚನೆ ನೀಡುವಂತ ಎಚ್ಚರಿಕೆ ನೀಡಿದ್ದು ಪತ್ರಿಕೆಗಳಲ್ಲಿ ವರದಿಯಾಗಿಲ್ಲ.

ಇದಕ್ಕಿಂತ ಹೆಚ್ಚಿನದು ರಾಜಕೀಯ ಕ್ರಮ. ಕೋಮುವಾದಿಗಳ ನಿಜ ಬಣ್ಣ ಬಯಲುಗೊಳಿಸಿ, ಆ ವಿಚಾರಧಾರೆಗಳನ್ನು ಸೈದ್ಧಾಂತಿಕವಾಗಿ, ಸಂಘಟನಾತ್ಮಕವಾಗಿ ಎದುರಿಸಿ ಜನತೆಯನ್ನು ಕೋಮು ವಿಷದಿಂದ ಉಳಿಸಬೇಕು ಮತ್ತು ಅದರ ವಿರುದ್ಧ ಹೋರಾಡುವ ಶಕ್ತಿ ತುಂಬಬೇಕು. ಅದಕ್ಕೆ ನಾಯಕತ್ವ ನೀಡಬೇಕು. ಆದರೆ ಎಡ ಪಕ್ಷಗಳನ್ನು ಬಿಟ್ಟರೆ ಬಹುತೇಕ ಪ್ರಮುಖ ಪಕ್ಷಗಳು ಈ ಸವಾಲನ್ನು ಸಮರ್ಥವಾಗಿ ಎದುರಿಸಲು ವಿಫಲವಾಗಿವೆ ತಢವರಿಸುತ್ತಿದೆ. ಇಷ್ಟೆಲ್ಲಾ ಅಟ್ಟಹಾಸ ನಡೆಯುತ್ತಿರುವಾಗ ಅದನ್ನು ಬಹಿರಂಗವಾಗಿ ವಿರೋಧಿಸಲು ಮುಂದೆ ಬಂದಿಲ್ಲ. ಅಲ್ಪಸಂಖ್ಯಾತರ ಹಾಗೂ ಧರ್ಮನಿರಪೇಕ್ಷ ಶಕ್ತಿಗಳ ಮತ ಪಡೆದು ಅಧಿಕಾರಕ್ಕೇರಿರುವ ಕಾಂಗ್ರೆಸ್ ಸರ್ಕಾರ ಇದನ್ನು ಕೇವಲ ಒಂದು ಆಡಳಿತಾತ್ಮಕ ಸಮಸ್ಯೆ ಎಂಬಂತೆ ನೋಡುತ್ತಿದೆ. ದತ್ತ ಜಯಂತಿ ಬಂದಾಗಲೋ ಅಥವಾ ಈಗಿನಂತಹ ಹಿಂಸಾತ್ಮಕ ಘಟನೆಗಳು ಘಟಿಸಿದಾಗ ಒಂದು ಕಸರತ್ತು ನಡೆಸುವುದನ್ನು ಬಿಟ್ಟರೆ, ಕೋಮುವಾದಿಗಳ ಹೂಂಕಾರವನ್ನು ಪರಿಣಾಮಕಾರಿಯಾಗಿ ಎದುರಿಸಲು ಕ್ರಿಯಾಶೀಲ ಪಾತ್ರ ವಹಿಸುತ್ತಿಲ್ಲ. ಹಾಗೆ ನೋಡಿದರೆ ಬಾಬ್ರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ಕಾಂಗ್ರೆಸ್ ಅಧ್ಯಕ್ಷ, ಪ್ರಧಾನಿ ಪಿ.ವಿ.ನರಸಿಂಹ ರಾವ್‌ರ 'ಅರ್ಥಪೂರ್ಣ ಮೌನ'ವನ್ನು ಟೀಕಿಸುತ್ತಿದ್ದೇವೆ, ಅದೊಂದು ತಪ್ಪು ಎಂದೆಲ್ಲಾ ಹೇಳಿಕೊಳ್ಳುವ ಕಾಂಗ್ರೆಸ್ ನಾಯಕರು, ಬಾಬಾ ಬುಡನ್‌ಗಿರಿ ವಿಚಾರದಲ್ಲಿಯೂ ಅಂತಹುದೇ ಪಾತ್ರಕ್ಕೆ ಸಜ್ಜಾಗುತ್ತಿದ್ದಾರೆಯೇ ಎಂದು ಪ್ರಶ್ನಿಸಬೇಕಾಗುತ್ತದೆ. ಅವರ ಚುನಾವಣಾ ಪ್ರಚಾರದಲ್ಲಿಯೂ ಕೋಮುವಾದಿಗಳಿಗೆ ತಕ್ಕ ಉತ್ತರ ಹೇಳದೇ ತನ್ನ ಸೈದ್ಧಾಂತಿಕ ದಿವಾಳಿತನ ಪ್ರದರ್ಶಿಸಿತು. ಆದರೆ ರಾಜ್ಯದ ಜನತೆ-ಅದರಲ್ಲಿಯೂ ಅಲ್ಪಸಂಖ್ಯಾತರು, ಹಿಂದುಳಿದ ಜಾತಿ, ದಲಿತ ಜಾತಿಗಳ ಜನರು ಕರ್ನಾಟಕವನ್ನು ಕೋಮುವಾದಿಗಳ ನೆಲೆಬೀಡಾಗದಂತೆ ಧರ್ಮನಿರಪೇಕ್ಷಿತವಾಗಿ ಕಾಂಗ್ರೆಸ್‌ಗೆ ಮತ ನೀಡಿದರು. ಆದರೆ ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿ ತನಗೆ ಜನ ನೀಡಿ ಆದೇಶಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತಿಲ್ಲ. ರಾಜಕೀಯವಾಗಿ ನೇರವಾಗಿ ಕೋಮು ವಾದಿ ಶಕ್ತಿಗಳನ್ನು ಎದುರಿಸಲು ಮುಂದಾಗುತ್ತಿಲ್ಲ. ಇದೇ ನೀತಿ ಮುಂದುವರೆದರೆ ಜನತೆಯ ಆದೇಶಕ್ಕೆ ವಿರುದ್ಧವಾಗಿ ವರ್ತಿಸಿ ಜನರ ಶಿಕ್ಷೆಗೊಳಗಾಗಬೇಕಾಗುತ್ತದೆ. ಇನ್ನುಳಿದ ಜನತಾದಳ, ಮತ್ತಿತರ ರಾಜಕೀಯ ಪಕ್ಷಗಳು ಸಹ ಕ್ರಿಯಾಶೀಲರಾಗಬೇಕು. ಹೀಗಾಗದಿರುವುದು ಕೋಮುವಾದಿಗಳ ವಾದಗಳಿಗೆ ತಲೆದೂಗುವ, ಅಥವಾ ಅಸಹಾಯ ಕತೆ ವ್ಯಕ್ತಪಡಿಸುವ ಸ್ಥಿತಿಯನ್ನು ತೋರಿಸುತ್ತಿದೆ. ಜನತೆಯನ್ನು ಅದಕ್ಕೆ ದೂಡಲಿದೆ.

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೂ ಮತ್ತು ಸಂಘ ಪರಿವಾರದ ವ್ಯಾಪಕ ಚಟುವಟಿಕೆಗಳು ಇನ್ನೂ ಗಂಭೀರ ಸ್ಥಿತಿಯನ್ನು ಎತ್ತಿ ತೋರಿಸುತ್ತಿವೆ. ಬೀದರ್, ಬಾಬು ಬುಡನ್ ಗಿರಿ ಚಿಕ್ಕಮಗಳೂರಿನ ಘಟನೆಗಳಿಂದ ಈ ದೇಶದ ಕೋಮುಸೌಹಾರ್ದತೆ, ಪ್ರಗತಿ ಮತ್ತು ಧರ್ಮನಿರಪೇಕ್ಷತೆಯ ಮೌಲ್ಯಗಳಿಗೆ ಬದ್ಧವಾಗಿರುವ ಸಮಾಜದ ಸ್ವಾಸ್ಥ್ಯವನ್ನು ಬಯಸುವ ಎಲ್ಲರೂ ಎಚ್ಚರಗೊಳ್ಳಬೇಕು. ವಿಶಾಲನೆಲೆಯಲ್ಲಿ ಈ ಕೂಟವೇ ಕ್ರಿಯಾಶೀಲವಾಗಬೇಕು. ಇಲ್ಲವಾದಲ್ಲಿ ಎರಡೂ ಕಡೆಯ ಮೂಲಭೂತವಾದಿಗಳು ಅಟ್ಟಹಾಸದಿಂದ ಮೆರೆಯಲು ಪರಸ್ಪರ ನಾಶಗೊಳಿಸಲು, ಅವರ

ಖಂಡನಾ ಸಭೆಗೆ ಕಾಲು ಹಿಡಿಯುವ ಭೂಪರು......

"ದಿನಕ್ಕೊಂದು ವಿಸ್ತೀರ್ಣ ಚಿಗುರುವೀ" ನೆಲದಲ್ಲಿ ಅಲ್ಲಾಡದೆ, ಕುರುಗೋಡಿನ ಕಲ್ಲುಗುಡ್ಡಕ್ಕೆ ಆತುಕೊಂಡಿರುವ ಓಣಿ ಉಜ್ಜಾಳಪೇಟೆ. ಸದಾ ಮುದಿರುಕೊಂಡು ತಾನಾಯ್ತು, ತನ್ನದಾಯ್ತು ಎನ್ನುವ ಸಭ್ಯಸ್ತನಂತೆ ಕಂಡರೂ - ಖ್ಯಾತ ಕಾದಂಬರಿ 'ಮೈಲಾ ಆಂಚಲ್' ನಲ್ಲಿ ಕಂಡುಬರುವ ಅನೇಕ ವ್ಯಕ್ತಿತ್ವಗಳು ಇಲ್ಲಿವೆ. ಜಾತಿಯ ಗಮ್ಮತ್ತು ಸಾಲ ಕೊಡುವ ಖರಾವುತ್ತುಗಳನ್ನು ಒಟ್ಟುಗೂಡಿಸಿಕೊಂಡವರ ಬಾಹುಬಂಧನದಲ್ಲಿ ಈ ಓಣಿ ಸಣಕಲಾಗಿ ನರಳುತ್ತಿದೆ. ಉಸಿರು ಕಟ್ಟಿಕೊಂಡ ಜನ ಆಗಾಗ ನಿರರ್ಗಳವಾಗಿ ಉಸಿರಾಡಲು ಒಟ್ಟಾಗುತ್ತಾರೆ. ಈ ಪ್ರಯತ್ನಕ್ಕೆ ಕೃಷಿ ಕೂಲಿಕಾರರ ಸಂಘ ಬೆಂಬಲಿಸುತ್ತಿದೆ.

ತಮ್ಮವರೆಂದು ನಂಬಿ ಕೂತಿದ್ದ ಜನಕ್ಕೆ 'ಮೊಸಳೆ ಪ್ರೀತಿ'ಯ ಈ ನಾಯಕ ಮಣಿಗಳು ತೋರಿದ ನಿಯತ್ತು ಎಂತಹದು ಗೊತ್ತೆ? ಉಜ್ಜಾಳಪೇಟೆಯ ಕೂಲಿಕಾರರು 8,10 ವರ್ಷಗಳಿಂದ ಗುಡಿಸಲು ಹಾಕಿ ಜೀವಿಸುತ್ತಿದ್ದರೂ ವಾಸಿಸುವ ಸ್ಥಳಕ್ಕೆ ಖಾಯಂ ಇಲ್ಲ. ಪಟ್ಟಾ ಇಲ್ಲ. ಕೂಲಿಕಾರರ ಸಂಘದಡಿ ಒಂದಾಗಿ 5 ತಿಂಗಳ ಹಿಂದೆ ಪಟ್ಟಾ ಕೊಡಬೇಕೆಂದು ನಾಡ ಕಾರ್ಯಾಲಯದ ಎದುರು ಸತ್ಯಾಗ್ರಹ ನಡೆಸಿದರು. ಈ ನಾಯಕ ಮಣಿಗಳಿಗೆ ಇದ್ದಕ್ಕಿದ್ದಂತೆ ತಲೆ ಸಿಡಿತ...... ! ಜನ ಇವರನ್ನೇ ಕೇಳಬೇಕೆಂದಂತೆ, ಜನ ಕೇಳಿದಾಗಲೇ ಇವರಿಗೆ ಗೊತ್ತಾಗುವುದಂತೆ. ಪಂಚಾಯ್ತಿ ಸದಸ್ಯರಾಗಿ 5 ವರ್ಷ ಕಳೆಯುತ್ತಿದ್ದರೂ ಇವರಿಗೆ ಈ ಸಮಸ್ಯೆ ತಿಳಿಯಲಿಲ್ಲವಂತೆ. ತಾವಿಲ್ಲದೇ ಜನ ಪಟ್ಟಾ ಹೇಗೆ ಪಡೆಯುತ್ತಾರೆ ಎಂಬ ಸವಾಲು ಬೇರೆ.

ಸಣ್ಣಪುಟ್ಟ ಜಗಳದಲ್ಲಿ ಪೋಲೀಸ್ ಠಾಣೆಗೆ ಹೋದ್ರೆ ಬೇಲ್‌ಮೇಲೆ ಹೊರಗೆ ಬರಲು ಕನಿಷ್ಠ ಮನೆ ಪಟ್ಟನಾದ್ರು ಬೇಕಲ್ಲವೇ? ಪಟ್ಟಾ ಇಲ್ಲದಿದ್ದಾಗ ಇವರ ಹತ್ತಿರವೇ ಜನ ಹೋಗಬೇಕು. ಪೋಲೀಸರಿಗಿಂತ ಹೆಚ್ಚಿನ ಪಟ್ಟು ಇವರೇ ಜನರನ್ನು ಹೆದರಿಸಿ "ನೋಡು ನಾನು ಬಂದಿದ್ದಕ್ಕೆ ಪಾರಾದೆ" ಎಂದು ತಮ್ಮ ಹೆಗ್ಗಳಿಕೆ ಹೇಳಿಕೊಂಡು ತಮ್ಮ ನಾಯಕಗಿರಿಯನ್ನು ಖಾಯಂಗೊಳಿಸಿಕೊಳ್ಳುವುದು ಸುಲಭವಲ್ಲವೇ? ಅಷ್ಟೇ ಏಕೆ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಇವರ ಮನೆಕಟ್ಟೆ ಮೇಲೆ ನಡೆಯಬೇಕು. ಕೆಳಗಿಳಿದರೆ ಕೋಪ! ಇದಕ್ಕೆ ಕುರುಗೋಡಿನ ಪೋಲೀಸ್ ಠಾಣೆ ಸದಾ ಬೆಂಬಲ. ಏಕೆಂದರೆ ಮಾಮೂಲು ಯಾರಿಗೂ ಕಾಣದೆ ಸಲೀಸಾಗಿ ಮನೆಬಾಗಿಲು ತಟ್ಟಿ ಒಳಕ್ಕೆ ಬರುತ್ತದೆ. ಅದೇನೇ ಇರಲಿ, ಪಟ್ಟಾಕ್ಕಾಗಿ ನಡೆಸಿದ ಸತ್ಯಾಗ್ರಹದಿಂದ ಮೇಲಾಧಿಕಾರಿಗಳಿಂದ ಹಿಡಿದು ಸದಸ್ಯರೂ ಸೇರಿ ಕೂಲಿಕಾರ ಸಂಘದ ಮುಖಂಡರೂ ವಾದ್ಯಾಡಿ, ವಾದ್ಯಾಡಿ ಕೊನೆಗೆ 1500 ರೂ. ಕಟ್ಟಬೇಕೆಂಬ ತೀರ್ಮಾನ ಸಡಿಲಗೊಳಿಸಿ 450 ರೂ. ಗೆ ಚಿರಾಡಕಟ್ಟಲು ತೀರ್ಮಾನವಾದದ್ದೇ ತಡ - (250/- ರೂ ಪಂಚಾಯ್ತಿಗೆ, 200/- ರೂ ವಿಶ್ವಬ್ಯಾಂಕ್ ಯೋಜನೆಗೆ) ಶ್ರೀಮಾನ್ ನಾಯಕ ಮಣಿಗಳು ತಾವೇ ಖುದ್ದಾಗಿ "ಜನ ಎಂದರೆ ಎಷ್ಟು ಕಾಳಜಿ" ಎಂಬಂತೆ ನಟಿಸಿ 450/- ರೂ.ಗಳನ್ನು ಪ್ರತಿಮನೆಯಿಂದ ಸಂಗ್ರಹಿಸಿ ರಶೀದಿಕೊಡಿಸಿ ತಮ್ಮ ನಾಯಕಗಿರಿಯನ್ನು ಎತ್ತಿಹಿಡಿಯಲು ಸತತ ಪ್ರಯತ್ನ ಮಾಡಿದರು. ಹೋರಾಟ ಮಾಡಿದ ಜನರಿಗೆ ಗೊತ್ತಿದೆ. ಇದೆಲ್ಲ ಸಂಘದ ಮಹಿಮೆ ಎಂಬುದು. ಇವರ ಈ 'ಜನಪರ ಕಾಳಜಿ'ಯನ್ನು ಅಲ್ಲಿನ ಘಟಕ ವೀಕ್ಷಿಸುತ್ತಲೇ ಇತ್ತು. ಪುನಃ 5 ತಿಂಗಳ ನಂತರ ಘಟಕದ ಸಭೆಯಲ್ಲಿ ಕೂಲಿಕಾರರು ತಮ್ಮ ಮನೆಯ ರಶೀದಿಯನ್ನು ತಂದು ಚರ್ಚಿಸಿದರು. ಕೊಟ್ಟಿದ್ದು 450 ರೂ. ರಶೀದಿ ಪಡೆದದ್ದು 250 ರೂ. ಗೆ ಮಾತ್ರ ಇನ್ನು 200 ರೂ. ಏನಾಯ್ತು? ಎಲ್ಲರಿಗೂ ಇದೇ 250 ರೂ. ರಶೀದಿ. 74 ಗುಡಿಸಲುಗಳ 200 ರೂ. ಏನಾಯ್ತು. ವಿಶ್ವಬ್ಯಾಂಕ್ ಯೋಜನೆ ಹಣ ಏನಾಯ್ತು. ಓಣಿಯಲ್ಲಿ ಗದ್ದಲವೋ ಗದ್ದಲ. ಈ ಸಂದರ್ಭದಲ್ಲಿ ಪಂಚಾಯ್ತಿ ಗ್ರಾಮ ಸಭೆ. ಸಭೆಯಲ್ಲಿ ಕೂಲಿಕಾರರ ಸಂಘದ ಕಾರ್ಯಕರ್ತರು ತಕರಾರು ಸಲ್ಲಿಸಿದರು. 200 ರೂ. ರಶೀದಿ ಏಕೆ ಕೊಟ್ಟಿಲ್ಲ. ವಿಶ್ವಬ್ಯಾಂಕ್ ಯೋಜನೆಗೆ ಏಕೆ ಕಟ್ಟಿಲ್ಲ. ಒಟ್ಟು 14,800 ರೂ ಏನಾಯ್ತು? ಸಭೆಯಲ್ಲಿದ್ದ ನಾಯಕ ಮಣಿಗಳು ಗಪ್ಪಾಗಿ ಪಲಾಯನ, ಓಟ! ಬೇರೆ ಸದಸ್ಯರು "ನೀವು ಯಾರಿಗೆ ಹಣ ಕೊಟ್ಟಿದ್ದೀರಿ ಅವರನ್ನೇ ಕೇಳಿ" ಇನ್ನೂ ಕೆಲವರು "ಯಾವಾನು ತಿಂದಾನೋ ಅವನ್ನ ಕೇಳ್ರಿ" ಪಂಚಾಯ್ತಿ ಕಾರ್ಯದರ್ಶಿ "ಅದಕ್ಕೂ ನನಗೂ ಯಾ... ಸಂಬಂಧ ಇಲ್ಲ" ವೆಂಬ ಹಾರಿಕೆ ಉತ್ತರ.

ಪಂಚಾಯ್ತಿ ಸದಸ್ಯರೇ ಈ ಕೆ... ಮಾಡಿರುವ ದರಿಂದ ಪಂಚಾಯ್ತಿಯೇ ಹೊ... 'ಅಧ್ಯಕ್ಷ ಕಾರ್ಯ ದರ್ಶಿಯವರ... ಹೊಣೆಗಾರರು" ಎಂಬುದು ಸಂಘದ ಪ... ಈ ಅವ್ಯವಹಾರದ ಬಗ್ಗೆ ನಿಮ್ಮ ಪಂಚಾ... ಸದಸ್ಯರು ಹಾಗೂ ಸಂಘದ ಮುಖಂಡರ... ವಿಶ್ವ ಬ್ಯಾಂಕ್ ಯೋಜನೆಗೆ ಸಂಬಂಧ... ಪ್ರತಿನಿಧಿಗಳನ್ನು ಸೇರಿಸಿ ತನಿಖಾ ಸಮಿ... ರಚಿಸಿರಿ. ಸಮಿತಿ ವರದಿಯ ಮೇಲೆ ಶಿ... ಕ್ರಮ ಜರುಗಿಸಿ ಎಂದು ಸಂಘವು ... ಬೇಡಿಕೆಗಳನ್ನು ಮುಂದಿಟ್ಟಿತು.

ಅಂದೇ ರಾತ್ರಿ, ಉಜ್ಜಾಳ ಪೇಟೆಯ... ಖಂಡನಾ ಸಭೆ ಹಾಗೂ ಪ್ರತಿಭಟ... ಮೆರವಣಿಗೆಗೆ ಸಜ್ಜಾಗಲು ಬೃಹತ್ ಬಹಿರ... ಸಭೆಯನ್ನು ನಡೆಸಲಾಯ್ತು. ಖಂಡನಾ ಸ... ಈ ನಾಯಕ ಮಣಿಗಳು ಕಾ... ಹಿಡಿದುಕೊಂಡು 'ದಯಮಾಡಿ ಕ್ಷಮಿ... ಏನೋ ತಪ್ಪಾಗಿದೆ, ನಾಳೆಯ... ರಶೀದಿಕೊಡುತ್ತೇವೆ" ಎಂದು ತಪ್ಪು... ಒಪ್ಪಿಕೊಂಡಿದ್ದಲ್ಲದೇ ರಾತ್ರಿ ಓಣಿಗೆ ... ಕೊಡುವ ಧಣಿಯ ಮುಖಂಡತ್ವದಲ್ಲಿ ... ಕೂಲಿಕಾರರ ಮನೆಗಳಿಗೆ ಕೈಮುಗಿಯು... ಭೇಟಿ ನೀಡಿ ಮೆರವಣಿಗೆ ನಡೆಸಬೇಡಿ ಎ... ಕೇಳಿಕೊಂಡರು. ಅಲ್ಲದೆ ರಾತ್ರಿ 'ಸಂಘ... ಮುಖಂಡರ ಮನೆಗಳಿಗೆ ಹೋ... ಬೇಡಿಕೊಂಡರು. ಊಳಿಗಮಾ... ಸಂಬಂಧಗಳಿಂದ ಹಾಗೂ ಬಡತನದಿ... ಜನತೆಯ ಪ್ರಜ್ಞೆ ಎಷ್ಟು ಗಾಢವಾ... ತೀಡಲ್ಪಟ್ಟಿದೆ ಎಂದರೆ, ಜನ ಬೆಳಿಗ್ಗೆ ಸಂಘ... ಸಭೆಗೆ ಬಂದು 'ತಪ್ಪೊಪ್ಪಿ ಕೊಂಡಿದ... ಮೆರವಣಿಗೆ ಬೇಡ, ಅಲ್ಲದೆ ಈಗ ಕೆಲ... ಒತ್ತಡಗಳೂ ಹೆಚ್ಚಿವೆ. ಒಪ್ಪಂದದ ಕೂಲಿಗೆ ಹೋಗಲೇಬೇಕು" ಎಂಬ ಕಾರಣಗಳಿಂದ ಪ್ರತಿಭಟನಾ ಮೆರವಣಿಗೆ ನಡೆಯಲಿಲ್ಲ. ಈಗ 200 ರೂ. ರಶೀದಿ ದೊರೆತಿವೆ. ಈ ಕಾರಣಗಳನ್ನು ಮೀರಲು ಸಂಘ ಬಲಿಷ್ಟವಾಗಬೇಕೆಂಬ ವಿಮರ್ಶೆ ಘಟಕದಲ್ಲಿ ನಡೆಯಿತು.

ವರದಿ : ಶ್ರೀ. ವೆಂಕಟೇಶ್, ಕುರುಗೋಡು.

ರೆಡ್ಡಿ ಪಂಚಾಯ್ತಿ ಮಾಕೆಂದುಕಯ್ಯಾ?!

ಇಲ್ಲೊಬ್ಬನಿದ್ದಾನೆ ಬಕಾಸುರ. ಆತನ ಹೆಸರು ರಾಮಚಂದ್ರ ರೆಡ್ಡಿ. ಜರಬಾವಿ ಗ್ರಾಮ ಪಂಚಾಯ್ತಿ ಸದಸ್ಯ. ಉದ್ದಾನಕೂದಲು ಬಿಟ್ಟು ಸದಾ ಮೀಸೆ ತಿರುವುತ್ತಲೇ ಓಡಾಡುತ್ತಾನೆ. ಈ ಕ್ಯಾಂಪ್‌ನಲ್ಲಿ ಈತನ ಕೆಲಸ ಇಸ್ಪೀಟಾಡುವುದು, ಆಡುತ್ತ ಕೃಷಿ ಕೂಲಿಕಾರರ ಸಂಘದ ಬಗ್ಗೆ ಕಾರ್ಯಕರ್ತರ ಬಗ್ಗೆ ಅಪಪ್ರಚಾರ ಮಾಡುವುದು, ಕುರುಗೋಡಿನ ಉಳಿಗ ಮಾನ್ಯ ದೊರೆ ರಾಜಶೇಖರ ಗೌಡರ ಪಕ್ಕಾಶಿಷ್ಯ. ಬಿ.ಜೆ.ಪಿಯ ಭಂಟ. ಇಲ್ಲಿ ಕೂಲಿಕಾರರ ಸಂಘಕ್ಕೆ 8 ತಿಂಗಳು ಕೂಸಾಗಿರುವಾಗಲೇ ಕತ್ತು ಹಿಸುಕಬೇಕೆಂಬ ಹಠ ರೆಡ್ಡಿಯದು.

ಇದು ಕೂಸಲ್ಲ, ಅಪಾರ ಅನುಭವದ, ದೇಶದ ಎಲ್ಲಾ ಕಡೆಗಿರುವ ಬಹುದೊಡ್ಡ ಸಂಘವೆಂಬುದು ಈ ಬಕಾಸುರನಿಗೆ ತಿಳಿದಿಲ್ಲ. ಎರಡು ಸಲ ಸಂಘವನ್ನು ತಡವಿದೆ, ಮಣ್ಣು ಮುಕ್ಕಿದ. ಆದರೂ ತನ್ನದೇ ಆದ ಬಣದ ಬೆಂಬಲದಿಂದ ಮತ್ತೆ ಮತ್ತೆ ಕಾಡುತ್ತಾನೆ ಕಾಡು ಪ್ರಾಣಿಯಂತೆ. ತಮಾಷೆ ಎಂದರೆ ಈತನಿಗೂ ಹಸಿರು ಕಾರ್ಡು ಇದೆ! ಹಾಗೂ ತನ್ನ ಸಂಬಂಧಿಕರಿಗೂ ಆದರೆ ಕೂಲಿಕಾರರಿಗೆ ಇಲ್ಲ. ಈತ ಇಲ್ಲಿ ಬಡಜನತೆಯ ಏಳ್ಗೆಗೆ ದೊಡ್ಡ ಅಡ್ಡಿಯಾಗಿದ್ದಾನೆ.

ಮೊನ್ನೆ ಒಂದು ಘಟನೆ ನಡೆಯಿತು. ... ತನ್ನ ಮನೆಯ ಮುಂದೇ ನಡೆಯಬೇಕು. ಪಂಚಾಯ್ತಿಗೆ ಜಗಳ ಬೇಕಲ್ಲ. ಅದನ್ನು ಸೃಷ್ಟಿಸುತ್ತಾನೆ. ಹೇಗೆ ಅಂತೀರಾ?

ಕೂಲಿಕಾರರ ದನಗಳು ಮೇಯಲು ಅಡವಿಗೆ ಹೋದಾಗ ತನ್ನ ಭಂಟರಿಗೆ ಪುಸಲಾಯಿಸಿ ಆ ದನಗಳನ್ನು ಯಾರದೋ ಹೊಲಕ್ಕೆ ನುಗ್ಗಿಸುವುದು, ಬಿತ್ತು ನೋಡು ಜಗಳ, ರೆಡ್ಡಿ ಮನೆ ಮುಂದೆ ಪಂಚಾಯ್ತಿ. ದನ ಹೊಲಕ್ಕೆ ನುಗ್ಗಿದ್ದಕ್ಕೆ ಬಾಯಿಗೆ ಬಂದಷ್ಟು ದಂಡ. ಹಿಡಿ ಕೂಲಿಯಿಂದ ಜೀವಿಸುವ ಕೂಲಿಕಾರರಿಗೆ ಸಂಘದ ಗ್ರಾಮಘಟಕದ ಕಾರ್ಯದರ್ಶಿ ಶ್ರೀನಿವಾಸನ ಆಕಳನ್ನು ಯಾರದೊ ಹೊಲಕ್ಕೆ ನುಗ್ಗಿಸಿದ ಪಂಚಾಯ್ತಿ ಸೇರಿತು. ದಂಡ ವಿಧಿಸಲು ಮುಂದಾ ದಾಗ ದಂಡ ಯಾಕೆ? ನಿನಗೆ ಯಾಕೆ ಕೊಡಬೇಕು? ಗ್ರಾಮ ಪಂಚಾಯ್ತಿ ಎಷ್ಟು ಹೇಳುತ್ತದೆಯೋ ಅಷ್ಟು ಕಟ್ತೇವೆ? ನಿನಗೆ ದಂಡ ಕಟ್ಟಿದರೆ ರಶೀದಿ ಕೊಡ್ತೀಯಾ? ಇಲ್ಲ ಅಲ್ಲಿ ರಶೀದಿ ಪಡೆಯುತ್ತೇವೆ. ಹೀಗೆ ಗದ್ದಲವಾಗಿ ರೆಡ್ಡಿ ಪಂಚಾಯ್ತಿ ಬಂದ್ ಆಯ್ತು. ಕೂಲಿಕಾರರೆಲ್ಲಾ "ಮಾಕೆಂದುಕಯ್ಯ ರೆಡ್ಡಿ ಪಂಚಾಯ್ತಿ" ಅಂದು ಕೊಂಡರು.

ಅದೇ ದಿನ ರಾತ್ರಿ ಕೂಲಿಕಾರರ ಸಭೆ ನಡೆಯಿತು. ಇಲ್ಲಿಯವರೆಗೂ ಗ್ರಾಮ ಪಂಚಾಯಿ ಮಾರುತಿ ... ತೀರ್ಮಾನಿಸಿತು. ಅಲ್ಲದೆ ಗ್ರಾಮ ಪಂಚಾಯ್ತಿ ದನದ ದೊಡ್ಡಿಯನ್ನು ಕಟ್ಟಿಸಬೇಕು ಎಂಬ ತೀರ್ಮಾನವನ್ನು ತೆಗೆದುಕೊಳ್ಳಲಾಯ್ತು. ಮರುದಿನ 30 ಜನ ಕೃಷಿಕೂಲಿಕಾರರು ಜರಬಾವಿ ಗ್ರಾಮ ಪಂಚಾಯ್ತಿ ಎದುರು ಧರಣಿ ಕೂತರು. ಬಡವರಿಗ... ಬಂದ ಎಲ್ಲಾ ಸೌಲಭ್ಯಗಳನ್ನು ರೆಡ್ಡಿಯೇ ನು... ನೀರು ಕುಡಿದಿದ್ದಾನೆ ಎಂಬ ಸತ್ಯವ... ಕೂಲಿಕಾರರು ಮನಗಂಡರು. 5 ವರ್ಷದಿ... ಯಾವ ಸೌಲಭ್ಯವನ್ನು ಕೊಡದೇ ಇದ... ಪಂಚಾಯತಿ ಅಧ್ಯಕ್ಷ, ಸದಸ್ಯರಿಗೆ ಧಿಕ್... ಹಾಕಲಾಯ್ತು. ಕೊನೆಗೆ 5 ಮನೆ... ಭಾಗ್ಯಜ್ಯೋತಿ ಯೋಜನೆಗಳನ್ನು ಸಂಘ ಹೇ... ಬಡವರಿಗೆ ಕೊಡುವುದಾಗಿ ಹಾಗೂ ದ... ದೊಡ್ಡಿ ಕಟ್ಟಿಸಲು ಮುಂದಿನದಿನಗ... ಪ್ರಯತ್ನಿಸುವುದಾಗಿ ಆಶ್ವಾಸನೆ ದೊರೆಯಿ... ಮುಖಂಡತ್ವವನ್ನು ವಿಭಾಗೀಯ ಸಮಿತಿ... ಕಾರ್ಯದರ್ಶಿ ಹೆಚ್.ಎಂ. ವಿಶ್ವನಾಥ ಸ್ವಾ... ಅಧ್ಯಕ್ಷ ಕಾಂ. ಇಮಾಂಸಾಬ್, ಗ್ರಾಮ ಘ... ಅಧ್ಯಕ್ಷ ಕಾಂ. ಸಂಜೀವ ಮೂ... ಕಾರ್ಯದರ್ಶಿ ಶ್ರೀನಿವಾಸ್ ವಹಿಸಿದ್ದ...

ದುಡಿಯುವ ಜನತೆ ಒ...

ಬಂದಿದೆ, ಬರುತಲಿದೆ ಹೊಸ ಸಹಸ್ರಮಾನ ಕುದಿಗೊಂಡ ಜನರ ಎದೆಗಳಲ್ಲಿ

ಕಳೆದ ಸಂಚಿಕೆಯಿಂದ

ಜಿ.ಎನ್. ನಾಗರಾಜ್

ಕ್ರೂರ, ಶೋಷಕ ಜಾತಿ ವ್ಯವಸ್ಥೆಯ ವಿರುದ್ಧ ಕರ್ನಾಟಕದಲ್ಲಿ ಎದ್ದ ಶರಣ ಚಳುವಳಿ ಕರ್ನಾಟಕದಲ್ಲಿ ಮಾನವ ಸಮುದಾಯ ಎರಡನೇ ಸಹಸ್ರಮಾನದಲ್ಲಿ ಹಾಕಿದ ದೊಡ್ಡ ಹೆಜ್ಜೆ ಎಂಬುದನ್ನು ಗುರುತಿಸಿದ್ದೇವೆ. ಈ ಚಳುವಳಿ ಕರ್ನಾಟಕದಸಾಹಿತ್ಯ ಸೃಷ್ಟಿಯಲ್ಲಿ ಬಡ ಜನ ವಿಭಾಗಗಳನ್ನು-ಮಾದಾರ, ಡೋಹರ, ಮಡಿವಾಳ, ಜೇಡರ, ಗೋವಳ, ಒಕ್ಕಲಿಗ ದುಡಿಯುವ ಜನರೂ ಸೇರಿದಂತೆ 230 ಕ್ಕಿಂತ ಹೆಚ್ಚು ಜನರನ್ನು ಒಳಗೊಂಡಿದ್ದು, ಅದರಲ್ಲಿ 230 ಜನ ಮಹಿಳೆಯರು ಕವಯತ್ರಿಯರಾಗಿ ಮೌಲಿಕ ಕಾಣಿಕೆ ನೀಡಿದ್ದಾರೆ ಎಂಬುದು ಇಡೀ ಭಾರತದಲ್ಲಿಯೇ ಎದ್ದುಕಾಣುವ ಬೆಳವಣಿಗೆ. ಶರಣ ಚಳುವಳಿಯೂ ಸೇರಿದಂತೆ ಇತರ ಭಕ್ತಿ ಪಂಥದ ಚಳುವಳಿಗಳು ಕರ್ನಾಟಕದ ಸಾಹಿತ್ಯ, ಸಂಸ್ಕೃತಿಗಳ ಮೇಲೆ ಪ್ರಭಾವ ಬೀರಿದವು.

ಕರ್ನಾಟಕದಲ್ಲಿ ಸ್ಥಾಪಿತವಾಗಿದ್ದ ರಾಜಶಾಹಿ, ಪುರೋಹಿತಶಾಹಿ ಸಂಪ್ರದಾಯವಾದಿಗಳು ಈ ಚಳುವಳಿಯ ಮೇಲೆ ಧಾಳಿ ಮಾಡಿ ಅದನ್ನು ತುಂಡು ಗಡಿಯುವುದರಲ್ಲಿ ಯಶಸ್ವಿಯಾದರೂ ರಾಜಕೀಯ, ಆರ್ಥಿಕ ವ್ಯವಸ್ಥೆಗಳ ಮೇಲೆ ಅಂಶಿಕ ಪರಿಣಾಮ ಬೀರುವುದನ್ನು ತಡೆಯುವುದಾಗಲಿಲ್ಲ.

ಅಭಿವೃದ್ಧಿ: 'ಮಾದರಿ ಮೈಸೂರು ಸ್ಥಾಪನೆ'


ಈ ಸಹಸ್ರಮಾನದಲ್ಲಿ ಜನಸಮುದಾಯದ ಮತ್ತೊಂದು ಪ್ರಮುಖ ಕೊಡುಗೆಯೆಂದರೆ 'ಮಾದರಿ ಮೈಸೂರು' ಅದರ ಸಾರ್ವಜನಿಕ ವಲಯದ ಮೂಲಕ ಕೈಗಾರೀಕರಣ ಮತ್ತು ಯೋಜಿತ ಅಭಿವೃದ್ಧಿಯ ಪರಿಕಲ್ಪನೆ. ಇದು ಕನ್ನಡಿಗರ ಒಂದು ಗಣನೀಯ ವಿಭಾಗದ ಜನಸಮುದಾಯವನ್ನು ಬೆಳವಣಿಗೆಯ ಮೇಲಿನ ಹಂತಕ್ಕೆ ಕೊಂಡೊಯ್ಯಲು ಸಹಾಯಕವಾಗುವಂತೆ ಭಾರತಕ್ಕೆ ಮುಂದಿನ ಅಭಿವೃದ್ಧಿಯ ದಾರಿಯ ತೋರುಬೆರಳಾಯಿತು.

ಈ ಮಾದರಿ ಮೈಸೂರಿನ ಮೂಲಬೇರುಗಳು ಇರುವುದು ಹೈದರಾಲಿ-ಟಿಪ್ಪು ಸುಲ್ತಾನರ ರಾಜ್ಯ ವಿಸ್ತಾರದಲ್ಲಿ. ಮೈಸೂರು ಸಂಸ್ಥಾನದ ಒಳಗೂ-ಹೊರಗೂ ಅಗಣಿತವಾದ ಪಾಳೆಯಗಾರಿ ಮಧ್ಯವರ್ತಿಗಳನ್ನು ತೆಗೆದುಹಾಕಿ ಮೈಸೂರು ಸಂಸ್ಥಾನವನ್ನು ವಿಸ್ತಾರಗೊಳಿಸಿತು. ಜೊತೆಗೆ ಟಿಪ್ಪುವಿಗಿದ್ದ ಫ್ರೆಂಚ್ ಕ್ರಾಂತಿಕಾರಿ ವಿಚಾರಗಳ ಸಂಪರ್ಕ ರಾಜ್ಯದಲ್ಲಿ ಕೈಗಾರಿಕೀಕರಣ ಮತ್ತು ಆಧುನಿಕ ಕೃಷಿ ಪದ್ಧತಿ ಅಳವಡಿಸುವಂತೆ ಮಾಡಿತು.

ಮುಂದೆ ಟಿಪ್ಪುವಿನ ಮರಣದ ನಂತರ ಅಂದಿದ್ದ ರಾಜ್ಯವನ್ನು ಬ್ರಿಟಿಷರು, ಮರಾಠರು, ನಿಜಾಮರು ಹಂಚಿಕೊಂಡು ಉಳಿದ ಮೈಸೂರು ಸಂಸ್ಥಾನವನ್ನು ಮೈಸೂರು ರಾಜರಿಗೆ ಒಪ್ಪಿಸಿದ ಮೇಲೂ ಮತ್ತೆ ಪಾಳೆಯಗಾರಿ ಮಧ್ಯವರ್ತಿ ಪದರಗಳು ತಲೆಯೆತ್ತಲಾಗಲಿಲ್ಲ. ಇದರಿಂದ ರೈತರು ಮತ್ತು ಸರ್ಕಾರದ ನಡುವೆ ನೇರ ಸಂಪರ್ಕದಿಂದಾಗಿ ರಾಜ್ಯದ ಆದಾಯ ಅಪಾರವಾಗಿ ಹೆಚ್ಚಾಯಿತು. ಈ ಆದಾಯವನ್ನು ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಎಂ.ವಿಶ್ವೇಶ್ವರಯ್ಯನವರ ಜೋಡಿ ಮೈಸೂರಿನ ಆಧುನೀಕರಣಕ್ಕೆ ಸಮರ್ಥವಾಗಿ ಬಳಸಿಕೊಂಡಿತು. ಸರ್ಕಾರದ ನೇರ ಉಸ್ತುವಾರಿಯಲ್ಲಿ ರೈಲ್ವೆ ಮಾರ್ಗಗಳು, ರಸ್ತೆ-ಸೇತುವೆಗಳು, ಕೆರೆಗಳು, ಮುಂದೆ ನೀರಾವರಿ ಆಣೆಕಟ್ಟು, ವಿದ್ಯುತ್‌ನಂತಹ ಮೂಲಭೂತ ಸೌಕರ್ಯಗಳ ನಿರ್ಮಾಣದಲ್ಲಿ ತೊಡಗಿಸಿತು. ಕೈಗಾರಿಕೆಗಳಿಗೆ ಉತ್ತೇಜನ ನೀಡಿತು. ಆಧುನಿಕ ವಾಣಿಜ್ಯ ಪದ್ಧತಿ, ಬ್ಯಾಂಕಿಂಗ್ ಪದ್ಧತಿಗಳನ್ನು ಏರ್ಪಡಿಸಿತು. ಮೈಸೂರು ಬ್ಯಾಂಕ್ ಸ್ಥಾಪನೆ, ಮೈಸೂರು ಹತ್ತಿ ಗಿರಣಿ ಸ್ಥಾಪನೆ, ಉಕ್ಕಿನ ಕಾರ್ಖಾನೆ, ಗಂಧದ ಎಣ್ಣೆ, ಸಾಬೂನಿನ ಕಾರ್ಖಾನೆ ಮತ್ತಿತರ ಘಟಕಗಳು ಮೈಸೂರನ್ನು ಕೈಗಾರಿಕೀಕರಣದ ಹಂತಕ್ಕೆ ಒಯ್ದವು. ಜೊತೆ ಜೊತೆಗೆ ಪ್ರಾಥಮಿಕ ಹಂತದಿಂದ ವಿದ್ಯಾಭ್ಯಾಸದ ಬೆಳವಣಿಗೆ, ಕೈಗಾರಿಕಾ ಶಿಕ್ಷಣ, ಶಾಲೆಗಳು, ಕೃಷಿ ಶಾಲೆಗಳು ಕಾಲೇಜುಗಳು ಹಾಗೂ 1916 ರಲ್ಲಿ ವಿಶ್ವ ವಿದ್ಯಾಲಯದ ಸ್ಥಾಪನೆ ಒಂದು ಕಡೆ ಕೈಗಾರಿಕರಣಕ್ಕೆ ಇಂಬು ಕೊಟ್ಟರೆ, ಮತ್ತೊಂದು ಕಡೆ ಆಧುನಿಕ ಚಿಂತನೆಗಳ ಹರಡುವಿಕೆಗೆ ಉತ್ತೇಜನ ನೀಡಿದವು. ಅನೇಕ ಪತ್ರಿಕೆಗಳು ಆರಂಭವಾದವು. ಅವುಗಳ ಮೂಲಕ ಮೈಸೂರಿನ ಆರ್ಥಿಕ, ಸಾಮಾಜಿಕ ಬೆಳವಣಿಗೆಯ ಬಗ್ಗೆ ರಾಜಕೀಯ ಚರ್ಚೆ ವಾದ ವಿವಾದಗಳು ಆರಂಭವಾದವು.

ಶಿಕ್ಷಣ: ಹೊಸ ಎಚ್ಚರಕ್ಕೆ ನಾಂದಿ

20ನೇ ಶತಮಾನದ ಆರಂಭ ಕಾಲ - ಎರಡನೆಯ ಸಹಸ್ರಮಾನದ ಕೊನೆಯ ಶತಮಾನದಲ್ಲಿ ಆಧುನಿಕ ಶಿಕ್ಷಣ ಪಡೆದ, ಪ್ರಜಾಪ್ರಭುತ್ವದ ಮಾನವ ಕಲ್ಪನೆಯನ್ನು ಮೈಗೂಡಿಸಿಕೊಂಡ ಆಧುನಿಕ ಬುದ್ಧಿಜೀವಿವರ್ಗವನ್ನು ಸೃಷ್ಟಿಸಿತು. ಇದು ಒಂದೆಡೆ ಇಡೀ ಭಾರತದಲ್ಲಿ ನಡೆಯುತ್ತಿದ್ದ ಪ್ರಕ್ರಿಯೆಯ ಭಾಗವಾಗಿ ಸ್ವಾತಂತ್ರ್ಯದ ಕನಸುಗಳನ್ನು ಮೂಡಿಸಿತು. ಬ್ರಿಟಿಶ್ ಭಾರತದ ಭಾಗವಾಗಿದ್ದ ಬೆಳಗಾಂ-ಧಾರವಾಡ ಜಿಲ್ಲೆಗಳಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ರೂಪಿಸಿತು. ಕರ ನಿರಾಕರಣೆಯ ಹೋರಾಟವಂತೂ ಹಳ್ಳಿ ಹಳ್ಳಿಗಳಿಗೂ ವ್ಯಾಪಿಸಿತು. ಕೆಳಸ್ತರಗಳ ನಿರಕ್ಷರೀ ಜನಗಳನ್ನು - ಮಹಿಳೆಯರನ್ನು ಸೆಳೆಯಿತು. ಹೊಸ ಎಚ್ಚರದ ನಾಂದಿಯಾಯಿತು.




ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ಮೈಸೂರು ಸಂಸ್ಥಾನದ ಏಳ್ಗೆಯ ಕಾರಣಕರ್ತರಾದ ಸರ್. ಎಂ.ವಿಶ್ವೇಶ್ವರಯ್ಯನವರು

ಸಾಹಿತ್ಯ: ದುಡಿವ ಜನರೂ ಸಾಹಿತ್ಯದವಸ್ತು

ಕನ್ನಡ ಸಾಹಿತ್ಯದಲ್ಲಿಯೂ ನವೋದಯ ಮುಂಜಾವದ ಕೋಳಿಗಳು ಕೂಗಿ ಜನರಲ್ಲಿ ಹೊಸ ಭಾವನೆ, ಕನಸುಗಳನ್ನು ತುಂಬತೊಡಗಿದವು. ಸಾಮಾನ್ಯ ದುಡಿಯುವ ಜನಗಳು ಸಾಹಿತ್ಯದ ವಸ್ತುಗಳಾದರು. ಅವರ ಜೀವನಸ್ಥಿತಿ ಓದುಗರ - ಒಳ ಗಣ್ಣಿಗೆ ತೆರೆಯುಂತಾಯಿತು. ಮಾನವರಲ್ಲಿನ ಮೂಲಭೂತ ಸಮಾನತೆಯ ಬಗ್ಗೆ, ಜಾತಿ ಪದ್ಧತಿಯ ಮೇಲುಕೀಳಿನ ವಿರುದ್ಧ ವಿಚಾರಗಳು ನಿಧಾನವಾಗಿಯಾದರೂ ಸಾಹಿತ್ಯದಲ್ಲಿ ಮೂಡಲಾರಂಭಿಸಿದವು. ಸ್ವಾತಂತ್ರ್ಯದ ಸಮಾನತೆಯ ತುಡಿತವನ್ನು ಬಿತ್ತಿದವು ಬೆಳಿಸಿದವು.

ಆದರೆ ಈ ಕ್ರಿಯೆ ನಮ್ಮ ಸಮಾಜದ ಪುರೋಹಿತಶಾಹಿ, ಪಾಳೆಯಗಾರಿ ವಿಚಾರಗಳ ದಾಸ್ಯವನ್ನು ಪೂರ್ಣವಾಗಿ ಕಿತ್ತೊಗೆಯುವಷ್ಟು ಬಲಶಾಲಿಯಾಗಲಿಲ್ಲ. ಸಮಾಜದ ಕೆಳವರ್ಗಗಳನ್ನೆಲ್ಲವನ್ನು ವ್ಯಾಪಿಸಿ ಅವರ ಚಿಂತನೆಗಳನ್ನು ಮೇಲಕ್ಕೆತ್ತುವ ಸಾಮರ್ಥ್ಯ ಗಳಿಸಲಿಲ್ಲ. ನಮ್ಮ ಸಮಾಜದಲ್ಲಿನ ಅಸಮಾನತೆ, ಜಾತಿ ಪದ್ಧತಿ; ಅಸ್ಪೃಶ್ಯತೆ, ಸ್ವತ್ತುಗಳ ಹಂಚಿಕೆಯಲ್ಲಿ ವಿಷಮತೆ ಆಧುನೀಕರಣ ಕ್ರಿಯೆಗೆ ಅಡ್ಡಗಲ್ಲಾಗಿ ನಿಂತವು. **ಮೈಸೂರು, ಹೈದರಾಬಾದ್ ಮೊದಲಾದ ಸಂಸ್ಥಾನ ಪ್ರದೇಶದಲ್ಲಿ ಏಳುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ಅಲೆಗಳಿಗೆ ಕಾಂಗ್ರೆಸ್ ಪಕ್ಷವೇ ಹಾಕಿದ ತಡೆ ಕೆಳಸ್ತರಗಳ ಜನರು ಸ್ವಾತಂತ್ರ್ಯ ಚಳುವಳಿಗೆ ಮಹಾಪೂರದಂತೆ ಹರಿದುಬರಲು ಆರಂಭವಾಗುತ್ತಿದ್ದಂತೆಯೇ ಅದಕ್ಕೆ ಅರ್ಧ ವಿರಾಮ, ಪೂರ್ಣ ವಿರಾಮ ಹಾಕಿ ಅವರ ದೊಡ್ಡ ವಿಭಾಗವನ್ನು ದೂರವಿಟ್ಟದ್ದು, ಅಡ್ಡಗಲ್ಲುಗಳನ್ನು ಕಿತ್ತೆಸೆಯುವ ಜನರ ಕೈಯನ್ನು ಹಿಂದೆಳೆದವು. ಜಾತಿ ಪದ್ಧತಿ, ಪಾಳೆಯಗಾರಿ ಪುರೋಹಿತ ಶಾಹಿಯ ವಿರುದ್ಧ ಸ್ವಾತಂತ್ರ್ಯ ಚಳುವಳಿಯ**

ಪುಟ 4 ಕ್ಕೆ



"21ನೇ ಶತಮಾನ ಸಮಾಜವಾದದ್ದು"

ಸುರ್ಜಿತ್

20ನೇ ಶತಮಾನ ಇತಿಹಾಸದ ಪುಟಗಳನ್ನು ಸೇರಿದೆ. ಮಾನವೇತಿಹಾಸದಲ್ಲೇ ಅತ್ಯಂತ ಕ್ಷಿಪ್ರ ಬದಲಾವಣೆಗಳನ್ನು ಕಂಡ ಶತಮಾನ ಇದು. ಬಂಡವಾಳಶಾಹಿ ತನ್ನ ಅಂತಿಮ ಘಟ್ಟವಾದ ಸಾಮ್ರಾಜ್ಯಶಾಹಿಯಾಗಿ ಬೆಳೆದ, ಅದೇ ರೀತಿ ಈ ದಮನಕಾರಿ, ಶೋಷಣಕಾರಿ ವ್ಯವಸ್ಥೆಗೆ ಪರ್ಯಾಯವನ್ನು ಕಂಡು ಹಿಡಿಯಲು ಪ್ರಯತ್ನಗಳು ನಡೆದ ಶತಮಾನ ಇದು. ಒಂದು ಕಡೆ ಲಾಭದಾಹೀ ಸಾಮ್ರಾಜ್ಯಶಾಹಿ ಎರಡು ಭೀಕರ ಯುದ್ಧಗಳನ್ನು ಹೇರಿದರೆ, ಇನ್ನೊಂದು ಕಡೆ ಬಂಡಾಯದ, ಕ್ರಾಂತಿಯ, ಸ್ವಾತಂತ್ರ್ಯದ ಬಾವುಟವನ್ನು ಹಲವು ದೇಶಗಳಲ್ಲಿ ಎತ್ತಿಹಿಡಿದ ಶತಮಾನ ಇದು. ವಸಾಹತುಶಾಹಿಯ ಯಜಮಾನಿಕೆ ಕೊನೆಗೊಂಡಿದೆ ನಿಜ, ಸಾಮ್ರಾಜ್ಯಶಾಹಿಯ ಯಜಮಾನಿಕೆಯಿಂದ ಇನ್ನೂ ಮುಕ್ತವಾಗಿಲ್ಲ.

ಈ ಶತಮಾನದ ಸುಮಾರು 80 ವರ್ಷಗಳನ್ನು ಕಣ್ಣಾರೆ ಕಂಡಿರುವವರು, ಸ್ವತಃ ಭಾಗವಹಿಸಿರುವವರು ಭಾರತದ ಹಿರಿಯ ಕಮ್ಯುನಿಸ್ಟರಾದ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು. ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ವಿಶ್ವ 2000 ನೇ ಇಸ್ವಿಗೆ ಕಾಲಿಡುವ ಸಂದರ್ಭದಲ್ಲಿ 20ನೇ ಶತಮಾನದ ಬೆಳವಣಿಗೆಗಳ ಬಗ್ಗೆ ಸುರ್ಜಿತ್‌ರವರೊಡನೆ ಒಂದು ಸಂದರ್ಶನ ನಡೆಸಿತು. ಆ ಸಂದರ್ಶನದ ಕೊನೆಯಲ್ಲಿ 21ನೇ ಶತಮಾನದ ಬಗ್ಗೆ ಕೇಳಿದಾಗ ಅವರು ನೀಡಿದ ಉತ್ತರವನ್ನು ಮುಂದೆ ಕೊಡಲಾಗಿದೆ.

20ನೇ ಶತಮಾನದ ನಮ್ಮ ಅನುಭವದ ಆಧಾರದಲ್ಲಿ 21 ನೇ ಶತಮಾನದ ಬಗ್ಗೆ ನಾವು ಏನಾದರೂ ಹೇಳಲು ಸಾಧ್ಯವೇ?

ಸುರ್ಜಿತ್: ಈ ಶತಮಾನದ ಆರಂಭದಲ್ಲಿ ರಶ್ಯಾದಲ್ಲಿ ಮೊದಲ ಸಮಾಜವಾದಿ ಪ್ರಭುತ್ವ ಸ್ಥಾಪನೆಯಾಯಿತು. ರಶ್ಯನ್ ಕ್ರಾಂತಿ ವಿಶ್ವಾದ್ಯಂತ ಸ್ವಾತಂತ್ರ್ಯ ಹೋರಾಟಗಳಿಗೆ ಬಲ ನೀಡಿತು. ಇದು ಒಂದು ... ನ್ಯೂನ್ಯತೆಗಳಿದ್ದವು. ತಪ್ಪುಗಳು ಸಂಭವಿಸಿದವು. ಈ ದೌರ್ಬಲ್ಯಗಳನ್ನು ಬಳಸಿಕೊಂಡು 20ನೇ ಶತಮಾನದ ಕೊನೆಯ ದಶಕದಲ್ಲಿ ಸಾಮ್ರಾಜ್ಯಶಾಹಿ ಸೋವಿಯತ್ ಒಕ್ಕೂಟವನ್ನು ಒಳಗಿನಿಂದ ಒಡೆಯುವಲ್ಲಿ ಯಶಸ್ವಿಯಾಯಿತು. ಇದು ಈ ಆಂದೋಲನಕ್ಕೆ ಒಂದು ಹಿನ್ನಡೆ ಮಾತ್ರವೇ ಅಲ್ಲ, ಎರಡು ಧ್ರುವಗಳ ವಿಶ್ವ ಸನ್ನಿವೇಶವನ್ನು ಮುಗಿಸಿಬಿಟ್ಟಿತು. ಇದು ವಿಶ್ವ ಸನ್ನಿವೇಶದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಸಾಮ್ರಾಜ್ಯಶಾಹಿ ಎಲ್ಲೆಡೆಗಳಲ್ಲೂ ಮಧ್ಯ ಪ್ರವೇಶ ಮಾಡುತ್ತಿದೆ. ಅದಕ್ಕೆ ಪ್ರತಿರೋಧವೂ ಬೆಳೆಯುತ್ತಿದೆ. ಕಳೆದ ದಶಕದಲ್ಲಿ ನಾವಿದನ್ನು ನೋಡಿದ್ದೇವೆ. ವಾಸ್ತವತೆಯೆಂದರೆ ಈ 20ನೇ ಶತಮಾನದ ಅಂತ್ಯದ ವೇಳೆಗೆ ವೈರುಧ್ಯಗಳು ತೀಕ್ಷ್ಣಗೊಂಡಿರುವುದರ ಜತೆಗೆ ಈ ಪ್ರತಿಕೂಲ ಅವಧಿಯನ್ನು ತಳಿಕೆಳಗಾಗಿಸುವ ಪ್ರಕ್ರಿಯೆಯೂ ಆಗಲೇ ಆರಂಭವಾಗಿದೆ.

ಕಳೆದ ಶತಮಾನ ಸಾಮ್ರಾಜ್ಯಶಾಹಿಯ ವಿರುದ್ಧ ... ಈ ಶತಮಾನದ ಅಂತ್ಯದ ವೇಳೆಗೂ ವಿಶ್ವಾದ್ಯಂತ ಅದೇ ಕತೆ. ಸಮಾಜವಾದಿ ವಿಚಾರಗಳು ವಾಸ್ತವ ರೂಪ ಪಡೆದ ಶತಮಾನ ಇದು. ಈ ಶತಮಾನ 70 ವರ್ಷಗಳ ಕಾಲ ಮೊದಲ ಸಮರವಾಗಿ ಪ್ರಭುತ್ವ ವಿಶ್ವ ರಾಜಕಾರಣದಲ್ಲಿ ಒಂದು ಮಹತ್ವದ ಪಾತ್ರ ವಹಿಸಿದ್ದನ್ನು ಕಂಡಿತು. ಈ ಶತಮಾನದಲ್ಲಿ ಎಷ್ಟೇ ಸಮಸ್ಯೆಗಳಿದ್ದರೂ ವಿಯೆಟ್ನಾಂ , ಕ್ಯೂಬಾ, ಚೀನಾ, ಕೊರಿಯಾ ಸಮಾಜವಾದಿ ಬಾವುಟ ಆಗಸದಲ್ಲಿ ಹಾರುತ್ತಿರುವಂತೆ ಮಾಡಿವೆ.

ಈ ಶತಮಾನ ವಿಜ್ಞಾನ ಮತ್ತು ತಂತ್ರಜ್ಞಾನ ಅಪಾರ ಬೆಳವಣಿಗೆಗಳನ್ನು ಕಂಡ ಶತಮಾನ. ಇದು ಬಂಡವಾಳಶಾಹಿಯ, ಮಾರುಕಟ್ಟೆಯ ವಿಸ್ತರಣೆಯ ಶತಮಾನವಷ್ಟೇ ಅಲ್ಲ, ಮಾಧ್ಯಮಗಳ ಮೂಲಕ ಕಟು ವಾಸ್ತವತೆಗಳನ್ನು ಮುಚ್ಚಿಟ್ಟು, ಶತಮಾನ, ಬಂಡವಾಳಶಾಹಿಯ ವಿರುದ್ಧ ಹೋರಾಟ ಉಲ್ಬಣಗೊಂಡ ಶತಮಾನ. ಮಾಧ್ಯಮ ಮತ್ತು ಇತರ ಸೌಲಭ್ಯಗಳ ಮೂಲಕ ವಿಚಾರಗಳನ್ನು ಬದಲಿಸಲು ಬಳಸಿದ ಶತಮಾನ.

ಸೋವಿಯತ್ ಒಕ್ಕೂಟವನ್ನು ಕಳಚಿಹಾಕಿದ ನಂತರ ಸಾಮ್ರಾಜ್ಯಶಾಹಿ ತಂತ್ರಗಳನ್ನು ಚೀನಾ, ಕ್ಯೂಬಾ, ವಿಯೆಟ್ನಾಂ, ಕೊರಿಯಾ ಇತ್ಯಾದಿಗಳು ವಿಫಲಗೊಳಿಸಿದ್ದನ್ನು ಎಲ್ಲರೂ ನೋಡಿದ್ದಾರೆ.

ಒಂದು ಸುಧಾರಿತ ಸಮಾಜವಾದಿ ಪ್ರಭುತ್ವವನ್ನು ಪುನರುಜ್ಜೀವನಗೊಳಿಸಬೇಕೆಂಬ ದನಿ ಬಲಿಷ್ಠವಾಗುತ್ತಿರುವ ರೀತಿ, ಸಮಾಜವಾದಿ ವ್ಯವಸ್ಥೆಗಳಿದ್ದ ದೇಶಗಳಲ್ಲಿ ಸಮಾಜವಾದಿ ಶಕ್ತಿಗಳು ಮತ್ತೆ ತಲೆ ಎತ್ತುತ್ತಿರುವ ರೀತಿ ಹೇಳುವ ಸಂಗತಿ ಒಂದೇ - ಮುಂದಿನ ಶತಮಾನ ಸಮಾಜವಾದದ್ದು.

...... ಅದೇ ಮೊದಲ ಬಾರಿಗೆ ಕಾಂಗ್ರೆಸ್-ವಿರೋಧಿ ಪ್ರತಿಪಕ್ಷರಂಗವೊಂದು ಅಸ್ತಿತ್ವಕ್ಕೆ ಬಂತು.

143 ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ರಂಗ ನಿರ್ಧರಿಸಿತು. ಆ ಪೈಕಿ ಕಮ್ಯುನಿಸ್ಟ್ ಪಕ್ಷದ 71 ಯುನೈಟೆಡ್ ಸೋಷಲಿಸ್ಟ್ ಆರ್ಗನೈಸೇಷನ್(ಯುಎಸ್‌ಓ) ನ 72 ಹುರಿಯಾಳುಗಳಿದ್ದರು. ಲೋಕಸಭೆ ಚುನಾವಣೆಯಲ್ಲಿ ಒಟ್ಟು 17 ಜನರನ್ನು ಕಣಕ್ಕಿಳಿಸಲಾಯಿತು; ಆದರಲ್ಲಿ ಕಮ್ಯುನಿಸ್ಟ್ ಪಕ್ಷದ ಒಂಬತ್ತು, ಯುಎಸ್‌ಓ ದ ಎಂಟು ಅಭ್ಯರ್ಥಿಗಳಿದ್ದರು.

ಯುಎಸ್‌ಓ ಮತ್ತು ಕಮ್ಯುನಿಸ್ಟ್ ಪಕ್ಷ ಒಟ್ಟಾಗಿ ಮತದಾರರ ಬಳಿ ಹೋಗಬೇಕಂತಲೂ ಸ್ಥಾನ ಹೊಂದಾಣಿಕೆ ಇರಬೇಕೆಂತಲೂ ನಿರ್ಧಾರವಾಯಿತು. ಈ ಹೇಳಿಕೆಗೆ ಯುಎಸ್‌ಓ ಪರವಾಗಿ ಅಶೋಕ ಘೋಷ್ ಮತ್ತು ಕಮ್ಯುನಿಸ್ಟ್ ಪಕ್ಷದ ಪರವಾಗಿ ನಾನು ಸಹಿ ಮಾಡಿದೆ.

ವಿಜ್ಞಾನಿಯ ಗೆಲವು

ಆರ್.ಎಸ್.ಪಿ. ಕೂಡ ರಂಗವನ್ನು ಸೇರಬೇಕೆಂದು ನಮ್ಮ ಇಚ್ಛೆಯಾಗಿತ್ತು, ಆದರೆ ಯಶಸ್ವಿಯಾಗಲಿಲ್ಲ. ಏನಿದ್ದರೂ ಬೆಹ್ರಂಪುರ ಲೋಕಸಭೆ ಕ್ಷೇತ್ರದಲ್ಲಿ ಆರ್‌ಎಸ್‌ಪಿ ಅಭ್ಯರ್ಥಿ ತಿದಿಬ್ ಚೌಧರಿ ಅವರಿಗೆ ನಾವು ಬೆಂಬಲ ಕೊಟ್ಟೆವು. ಕಲ್ಕತ್ತ ವಾಯುವ್ಯ ಕ್ಷೇತ್ರದಲ್ಲಿ ಖ್ಯಾತ ವಿಜ್ಞಾನಿ ಡಾ. ಮೇಘನಾದ ಸಹಾ ಆರ್.ಎಸ್.ಪಿ. ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಅವರ ಪರವಾಗಿ ನಾವೆಲ್ಲರು ಒಟ್ಟಾಗಿ ಕೆಲಸ ಮಾಡಿದೆವು. ಡಾ. ಸಹಾ ಗೆದ್ದರು. ದುರಾದೃಷ್ಟವಶಾತ್, ಆರ್‌ಎಸ್‌ಪಿ ವಿನಾಕಾರಣ ತನಗೆ ಗೆಲ್ಲುವ ಅವಕಾಶ ಇಲ್ಲದಿದ್ದರೂ ಅನೇಕ ಕಡೆ ರಂಗದ ವಿರುದ್ಧ ಅಭ್ಯರ್ಥಿಗಳನ್ನು ನಿಲ್ಲಿಸಿತು.

ಉದಾಹರಣೆಗೆ ನಾನು ಅಭ್ಯರ್ಥಿಯಾಗಿದ್ದ ಬಾರಾನಗರ್ ವಿಧಾನಸಭೆ ಕ್ಷೇತ್ರದಲ್ಲಿ ಆರ್‌ಎಸ್‌ಪಿ ತನ್ನ ಒಬ್ಬ ಉನ್ನತ ನಾಯಕನನ್ನು ಕಣಕ್ಕಿಳಿಸಿತು. ಆದೇ ರೀತಿ ಕಲ್ಕತ್ತ ಈಶಾನ್ಯ ಲೋಕಸಭೆ ಕ್ಷೇತ್ರದಲ್ಲಿ ಆರ್‌ಎಸ್‌ಪಿ ತನ್ನ ಅಭ್ಯರ್ಥಿಯನ್ನು ಹೂಡಿತು. ಅಲ್ಲಿ ಕಮ್ಯುನಿಸ್ಟ್ ಪಕ್ಷದ ಹಿರೇನ್ ಮುಖರ್ಜಿ 71,760 ಮತಗಳನ್ನು ಪಡೆದು ಕಾಂಗ್ರೆಸ್‌ನ್ನು ಧೂಳೀಪಟ ಮಾಡಿದರು. ಕಾಂಗ್ರೆಸ್ ಪಕ್ಷಕ್ಕೆ 36,180 ಮತಗಳು ಮಾತ್ರ ಸಿಕ್ಕವು. ಆರ್‌ಎಸ್‌ಪಿಗೆ ಸಿಕ್ಕಿದ್ದು ಕೇವಲ 5831 ಮತಗಳು, ಅದರ ಅಭ್ಯರ್ಥಿಗೆ ಠೇವಣಿ ನಷ್ಟವಾಯಿತು. ಇವೆಲ್ಲ ಆದ ಮೇಲೆ, ಚುನಾವಣೆಯ ನಂತರ ಆರ್‌ಎಸ್‌ಪಿ ಸಂಯುಕ್ತ ರಂಗವನ್ನು ಸೇರಿತು.

ಕೃಷಿಕ್ ಮಜ್ದೂರ್ ಪ್ರಜಾಪಾರ್ಟಿ(ಕೆಎಂಪಿಪಿ) ಮತ್ತು ಸೋಷಲಿಸ್ಟ್ ಪಕ್ಷದ ಜತೆ ಹೊಂದಾಣಿಕೆ ಮಾಡಿಕೊಳ್ಳಲು ನಾವು ಪ್ರಯತ್ನಿಸಿದೆವು. ಆದರೆ ಈ ಎರಡೂ ಪಕ್ಷಗಳಿಗೆ ನಮ್ಮ ಜತೆ ವೇದಿಕೆ ಹಂಚಿಕೊಳ್ಳಲು ಇಷ್ಟವಿರಲಿಲ್ಲ. ರಂಗದ ಅಭ್ಯರ್ಥಿಗಳು ಇಲ್ಲದಿರುವಲ್ಲೆಲ್ಲ ಕೆಎಂಪಿಪಿ ಮತ್ತು ಸೋಷಲಿಸ್ಟ್ ಪಕ್ಷಕ್ಕೆ ಮತ ನೀಡುವಂತೆ ನಾವು ಜನರಿಗೆ ಮನವಿ ಮಾಡಿದೆವು. ಆದರೆ ಈ ಎರಡೂ ಪಕ್ಷಗಳು ಸಾಧ್ಯವಿರುವಲ್ಲೆಲ್ಲಾ ನಮ್ಮ ವಿರುದ್ಧ ಅಭ್ಯರ್ಥಿಗಳನ್ನು ನಿಲ್ಲಿಸಿದವು.

ಕಳೆದ ಸಂಚಿಕೆಯಲ್ಲಿ ಕಾಂಗ್ರೆಸ್ ವಿರೋಧಿ ಕೂಟವನ್ನು ರೂಪಿಸುವ ಅಗತ್ಯದಿಂದಾಗಿ ಫಾರ್ವರ್ಡ್ ಬ್ಲಾಕ್, ಶರತ್ ಬೋಸ್ ಸ್ಥಾಪಿಸಿದ ಸೋಷಲಿಸ್ಟ್ ರಿಪಬ್ಲಿಕನ್ ಪಾರ್ಟಿ, ಬೋಲ್ಶೆವಿಕ್ ಪಾರ್ಟಿ ಆಫ್ ಇಂಡಿಯಾ, ಐ.ಎನ್.ಎ, ಪೀಪಲ್ಸ್ ಮೂವ್‌ಮೆಂಟ್ ಮತ್ತಿತರ ಗುಂಪುಗಳು ಮತ್ತು ವ್ಯಕ್ತಿಗಳು ಒಂದಾಗಿ ಸಂಯುಕ್ತ ಸಮಾಜವಾದಿ ಸಂಘಟನೆ ರಚಿತವಾಯಿತು. ಈ ರೀತಿಯಾಗಿ ಪ್ರಥಮ ಬಾರಿಗೆ ಕಾಂಗ್ರೆಸ್ ವಿರೋಧಿ ಪ್ರತಿಪಕ್ಷ ರಂಗವೊಂದು ಉದಯವಾಯಿತು. ಮುಂದೆ ಓದಿ....

ಬಲಿಷ್ಟಗೊಂಡ ಸಂಯುಕ್ತ ರಂಗ

ಪ್ರಥಮ ಚುನಾವಣೆ ಸಭೆ

1951 ಡಿಸೆಂಬರ್ 15 ರಂದು ನಮ್ಮ ಪ್ರಥಮ ಚುನಾವಣಾ ಸಭೆಯನ್ನು ನಡೆಸಿದೆವು. ಕಲ್ಕತ್ತದ ಬೀದಿಗಳಲ್ಲಿ ಸುತ್ತಾಡಿದ ಮೆರವಣಿಗೆ ಬೃಹತ್ ರ್‍ಯಾಲಿಯಾಗಿ ಪರಿವರ್ತನೆಗೊಂಡಿತು. ಅಜಯ ಘೋಷ್ ಮತ್ತು ಫಾರ್ವರ್ಡ್ ಬ್ಲಾಕ್ (ಮಾರ್ಕ್ಸಿಸ್ಟ್) ನಾಯಕ ಸತ್ಯಪ್ರಿಯ ಬ್ಯಾನರ್ಜಿ ಮಾತನಾಡಿದರು.

ಡಿಸೆಂಬರ್ 8 ರಂದು ಕಾಂಗ್ರೆಸ್ ಸರಕಾರ 17 ರಾಜಕೀಯ ಕೈದಿಗಳನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಿತು. ಎಲ್ಲಾ ಬಂಧಿಗಳನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳ ಘಟಕ ಅದೇ ದಿನ ಹೇಳಿಕೆಯೊಂದನ್ನು ಹೊರಡಿಸಿತು. ಪೆರೋಲ್ ಮೇಲೆ ಬಿಡುಗಡೆಯಾದ ಎಲ್ಲರೂ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳಾಗಿದ್ದರು. ಇದು ಚುನಾವಣೆ ಪ್ರಚಾರದಲ್ಲಿ ತುಂಬಾ ನೆರವಾಯಿತು.

ಪರ್ಯಾಯ ಸರಕಾರದ ಪ್ರಸ್ತಾವ

ಸರಕಾರ ರಚಿಸುವ ಅವಕಾಶವಿದೆ ಎಂದಾಗಲೀ ರಚಿಸುವ ಉದ್ದೇಶವಿದೆ ಎಂದಾಗಲೀ ಒಂದೇ ಒಂದು ಪದವೂ ಇಲ್ಲದಿದ್ದರೂ ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕೆಂಬುದಕ್ಕೆ ನಮ್ಮ ಪ್ರಣಾಳಿಕೆ ಒತ್ತು ನೀಡಿತ್ತು. ಏನಿದ್ದರೂ ಕಾಂಗ್ರೆಸ್ ಪಕ್ಷ ಯಾವುದೇ ರಾಜ್ಯದಲ್ಲಿ ಅಲ್ಪಮತಕ್ಕೆ ಇಳಿದರೆ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಪರ್ಯಾಯ ಸರಕಾರವನ್ನು ರಚಿಸುವ ಅವಕಾಶವನ್ನು ಪರಿಶೀಲಿಸಲಾಗುವುದು ಎಂದು ಅಜಯ ಘೋಷ್ ಹೇಳಿದ್ದರು. ಆದರೆ ಅಂಥ ಸರಕಾರದಲ್ಲಿ ಕಮ್ಯುನಿಸ್ಟ್ ಪಕ್ಷ ಭಾಗವಹಿಸುತ್ತದೆಯೋ ಇಲ್ಲವೋ ಎಂದು ಅವರು ಹೇಳಿರಲಿಲ್ಲ.

ಜನತಾ ಸರ್ಕಾರದ ಸ್ಥಾಪನೆಯ ಪ್ರತಿಪಾದನೆ

ರಂಗದ ಸಾಮಾನ್ಯ ಕನಿಷ್ಟ ಕಾರ್ಯಕ್ರಮವಲ್ಲದೆ ಈ ಕೆಳಗಿನ ಗುರಿಗಳನ್ನು ಸಾಧಿಸಲು ಜನತಾ ಸರಕಾರವೊಂದನ್ನು ಸ್ಥಾಪಿಸುವುದು ಅಗತ್ಯ ಎಂದು ಕಮ್ಯುನಿಸ್ಟ್ ಪಕ್ಷ ಪ್ರತ್ಯೇಕ ಪ್ರಣಾಳಿಕೆಯಲ್ಲಿ ಪ್ರತಿಪಾದಿಸಿತು.

- ವ್ಯಕ್ತಿ ಸ್ವಾತಂತ್ರ್ಯ
- ಎಲ್ಲರಿಗೆ ಕನಿಷ್ಟ ಕೂಲಿ
- ಆಹಾರ ಬಿಕ್ಕಟ್ಟಿಗೆ ಕೊನೆ
- ರೈತರ ಸಾಲ ಮನ್ನಾ
- ಕಡಿಮೆ ಬಡ್ಡಿಯ ಸರಕಾರಿ ಸಾಲ ಮತ್ತು ಸೂಕ್ತ ನೀರಾವರಿ ವ್ಯವಸ್ಥೆ
- ನಿರುದ್ಯೋಗ ಸಮಸ್ಯೆಯ ಪರಿಹಾರ
- ಅವಶ್ಯಕ ಸಾಮಗ್ರಿಗಳ ಬೆಲೆ ಇಳಿಕೆ
- ಭ್ರಷ್ಟಾಚಾರಕ್ಕೆ ಇತಿಶ್ರೀ
- ಕೈಗಾರಿಕೆಗಳ ವ್ಯಾಪಕ ಸ್ಥಾಪನೆ
- ಭೂಮಾಲಕರಿಗೆ ಪರಿಹಾರ ನೀಡದೆ ಜಮೀನ್ದಾರಿ ವ್ಯವಸ್ಥೆಗೆ ಕೊನೆ ಹಾಗೂ ಬಡ ರೈತರು ಮತ್ತು ಕೃಷಿಕರಿಗೆ ಉಚಿತವಾಗಿ ಜಮೀನು ವಿತರಣೆ.
- ಕಾಮನ್‌ವೆಲ್ತ್‌ನೊಂದಿಗೆ ಸಂಬಂಧ ಕಡಿತ ಮತ್ತು ಭಾರತದಲ್ಲಿರುವ ಬ್ರಿಟಿಶ್ ಆಸ್ತಿಯ ಸ್ವಾಧೀನ
- ಸಮಾನತೆಯ ಆಧಾರದಲ್ಲಿ ಸೋವಿಯತ್ ಒಕ್ಕೂಟ ಮತ್ತು ಚೀನಾದಂಥ ದೇಶಗಳ ಜೊತೆ ವ್ಯಾಪಾರ ಸಂಪರ್ಕ ಸ್ಥಾಪನೆ.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ:

ಈ ಅಂಶಗಳನ್ನು ಒಳಗೊಂಡ ಪ್ರಣಾಳಿಕೆ 1951 ಡಿಸೆಂಬರ್ 8 ರ 'ಸ್ವಾಧೀನತಾ'ದಲ್ಲಿ ಪ್ರಕಟವಾಯಿತು.

ಬಂಗಾಳಾದ್ಯಂತ ಪ್ರವಾಸ

ಪಶ್ಚಿಮ ಬಂಗಾಳದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ನಾನು ಪ್ರವಾಸ ಮಾಡಬೇಕಾಯಿತು ಮತ್ತು ಕಮ್ಯುನಿಸ್ಟ್ ಪಕ್ಷ ಹಾಗೂ ಸಂಯುಕ್ತ ರಂಗದ ಸಭೆಗಳಲ್ಲಿ ಮಾತನಾಡಬೇಕಿತ್ತು.

ಚುನಾವಣೆ ಪ್ರಚಾರಕ್ಕಾಗಿ ನಾನು ಪಶ್ಚಿಮ ಬಂಗಾಳದ ಹೊರಗೂ ಹೋಗಬೇಕಾಗುತ್ತಿತ್ತು. ಮಲಬಾರ್‌ನಲ್ಲಿ ನವೆಂಬರ್ 4 ರಂದು ಒಂದು ಲಕ್ಷದಷ್ಟು ಜನರಿದ್ದ ಸಭೆಯಲ್ಲಿ ಮಾತನಾಡಿದೆ. ಪ್ರಖ್ಯಾತ ಕಮ್ಯುನಿಸ್ಟ್ ನೇತಾರ ಕಾಮ್ರೇಡ್ ಎ.ಕೆ.ಗೋಪಾಲನ್ ನನ್ನ ಜತೆಗಿದ್ದರು. ಈ ರ್‍ಯಾಲಿಯೊಂದಿಗೆ ಪಕ್ಷದ ಪ್ರಚಾರ ಆರಂಭವಾಯಿತು.

ನವೆಂಬರ್ 24 ರಂದು ಮಿಡ್ನಾಪುರ ಜಿಲ್ಲೆಯ ತುಮಲುಕ್‌ನಲ್ಲಿ 15 ಸಾವಿರ ಜನರು ಪಾಲ್ಗೊಂಡಿದ್ದ ಸಭೆಯಲ್ಲಿ ನಾನು ಭಾಷಣ ಮಾಡಿದೆ. ಆ ರ್‍ಯಾಲಿಯಲ್ಲಿ ಕಾಕಾಬಾಬು ಮತ್ತು ವಿಶ್ವನಾಥ ಮುಖರ್ಜಿ ಕೂಡ ಮಾತನಾಡಿದರು. ತ್ರಿಪುರಾದಲ್ಲಿ ಡಿಸೆಂಬರ್ 7 ರಂದು 15 ಸಾವಿರ ಜನ ಭಾಗವಹಿಸಿದ್ದ ರ್‍ಯಾಲಿಯಲ್ಲಿ ನಾನು ಮಾತನಾಡಿದೆ.

24 ಪರಗಣ ಜಿಲ್ಲೆಯ ಬಾರಾನಗರ ಅಸೆಂಬ್ಲಿ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಪಕ್ಷ ನನಗೆ ಸೂಚಿಸಿತು.

(ಮುಂದುವರಿಯುವುದು)

ಬಂದಿದೆ, ಬರುತಲಿದೆ ಹೊಸ ಸಹಸ್ರಮಾನ............

ಪುಟ 3 ರಿಂದ

ಪುರೋಹಿತಶಾಹಿ ಪಾಳೆಯಗಾರಿ ಬಂಡವಾಳ ಶಾಹಿಗಳು ಬಾಯಿ ತೆರೆಯದ್ದರಿಂದ ಭಾರತದ, ಕರ್ನಾಟಕದ ಜನರ ವಿಮೋಚನೆಯನ್ನು ಅರೆಬರೆಯಾಗಿಸಿತು.

ಸ್ವಾತಂತ್ರ್ಯ: ಮೂಡಿಬಂದ ಹೊಸ ಉತ್ಸಾಹ

ಇಡೀ ಭಾರತವೇ ಹಂಬಲಿಸಿ ಪಡೆದ ಸ್ವಾತಂತ್ರ್ಯ ಕರ್ನಾಟಕದಲ್ಲಿಯೂ ಹೊಸ ಉತ್ಸಾಹವನ್ನು ಮೂಡಿಸಿತು. ಮೈಸೂರು ಸಂಸ್ಥಾನ, ಹೈದರಾಬಾದ್ ಸಂಸ್ಥಾನಗಳಲ್ಲಿ ಹೋರಾಟದ ಹೊಸಅಲೆಯನ್ನು ಮೂಡಿಸಿತು. ಜವಾಬುದಾರಿ ಸರ್ಕಾರಕ್ಕಾಗಿ 'ಮೈಸೂರು ಚಲೋ' ನಡೆದರೆ, ಹೈದರಾಬಾದ್ ಸಂಸ್ಥಾನದಲ್ಲಿ ಸ್ವಾತಂತ್ರ್ಯ ದಿನೋತ್ಸವನ್ನು ಆಚರಿಸುವುದೇ ಸ್ವಾತಂತ್ರ್ಯ ಚಳುವಳಿಯಾಗಿ ಪರಿವರ್ತಿತವಾಯಿತು. ಸಾವಿರಾರು ವರ್ಷಗಳಿಂದ ರಾಜ್ಯವನ್ನು ಆಳುತ್ತಿದ್ದ ರಾಜ-ಮಹಾರಾಜರುಗಳ ಶೋಷಕ ಆಡಳಿತಕ್ಕೆ ಕೊನೆಯಾಯಿತು.

ಏಕೀಕರಣ: ಭಾಷಿಕಸ್ತಿತ್ವದ ಅರಳುವಿಕೆ

ಸ್ವಾತಂತ್ರ್ಯಕ್ಕೆ ಮೊದಲೇ ಸಾಹಿತ್ಯದ ನವೋದಯದೊಂದಿಗೆ ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣದ ಚಳುವಳಿ ಆರಂಭವಾಗಿತ್ತು. ಭಾರತಕ್ಕೆ ಸ್ವಾತಂತ್ರ್ಯವೆಂಬ ಭಾರತೀಯ ಭಾವನೆಯ ಜೊತೆಗೆ, ಕರ್ನಾಟಕ ಒಂದಾಗಬೇಕೆಂಬ ಭಾವನೆಯ ಮೂಲಕ ಜಾತಿ, ಧರ್ಮಗಳು ಮಾತ್ರವೇ ಮಾನವನ ಅಸ್ತಿತ್ವದ ಗುರುತಾಗಿದ್ದ ಕನ್ನಡಿಗರ ಮನಸ್ಸಿನಲ್ಲಿ ಭಾಷಿಕ ಅಸ್ತಿತ್ವವೊಂದು ಅರಳತೊಡಗಿತ್ತು. ಆದರೆ ಸ್ವಾತಂತ್ರ್ಯದ ಜೊತೆಗೆ ಕರ್ನಾಟಕದ ...

ಕನ್ನಡಿಗರ ನಂಬಿಕೆ ಹುಸಿಯಾಯ್ತು.

ಮತ್ತೆ ಹತ್ತು ವರ್ಷಗಳ ನಂತರ ಸಾಧಿಸಿದ ಏಕೀಕರಣ 'ವಿಶಾಲ ಮೈಸೂರು' ರಾಜ್ಯವಾಗಿ 1956 ರಲ್ಲಿ ರೂಪುದಳೆಯಿತು. ಕನ್ನಡಿಗರ ಬೆಳವಣಿಗೆಯ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಮೊದಲಬಾರಿಗೆ ಕನ್ನಡ ಮಾತನಾಡುವ ಜನರದೇ ಆದ ಒಂದು ರಾಜ್ಯದಲ್ಲಿ ಜನರ ಭಾಷೆಯಲ್ಲಿಯೇ ಆಡಳಿತ ನಡೆಸುವ, ಶಿಕ್ಷಣ ಪಡೆಯುವ ಅವಕಾಶ ಲಭ್ಯವಾಯಿತು.



ಸರ್.ಎಂ.ವಿ.ಯವರ ಭಾವಚಿತ್ರವನ್ನು ಅನಾವರಣ

ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣ ಕರ್ನಾಟಕದಲ್ಲಿ ಶಾಲೆಗಳನ್ನು, ನೀರಾವರಿ, ಕೈಗಾರಿಕೆಯನ್ನು ಪಡೆಯುವ ಅವಕಾಶ ಕಲ್ಪಿಸಿತು. ಅನೇಕ ಕೆಳಸ್ತರದ - ಹಿಂದುಳಿದ - ದಲಿತ ಜಾತಿಗಳ ಜನ, ಮಹಿಳೆಯರು, ಶಿಕ್ಷಣದ ಅವಕಾಶ ಪಡೆದದ್ದು ಕರ್ನಾಟಕದ ಜನಸಮುದಾಯದ ಬೆಳವಣಿಗೆಯಲ್ಲಿ ಒಂದು ಅಂಶಿಕ ಮುನ್ನೆಗೆತವಾಯಿತು ಆದರೆ 'ಇರುವೆಲ್ಲವನು ಎಲ್ಲ ಜನಕೆ ತೆರವಾಗಿಸುವ ಸಮಸುಖದ ಸಮದುಃಖದ ಸಾಮರ್ಸ್ಯ ಸಾಮಗಾನ ಲಹರಿಯ ಮೇಲೆ ತೇಲಿ ಬರಲಿದೆ ನೋಡು ನಮ್ಮ ನಾಡು' ಎಂಬ ಕರ್ನಾಟಕದ ಜನತೆಯ ಕನಸು ನನಸಾಗಲಿಲ್ಲ.

ಕರ್ನಾಟಕ: ಬದಲಾದ ಹೊಸ ಸಾಹಿತ್ಯದ ರೂಪ

ಈ ಪ್ರಕ್ರಿಯೆ ಮುಂದುವರೆದು ಹಿಂದುಳಿದ ಜಾತಿಗಳು ಆಡಳಿತದಲ್ಲಿಯೂ ಹೆಚ್ಚು ಅವಕಾಶ ಪಡೆದದ್ದು ಸ್ವಾತಂತ್ರ್ಯದ ಎರಡು ದಶಕಗಳ ತರುವಾಯ ದೇವರಾಜ ಅರಸರ ಆಡಳಿತದಲ್ಲಿ. ಸ್ವಾತಂತ್ರ್ಯದ ನಂತರ ರಾಜಕೀಯದಲ್ಲಿ ಆಡಳಿತದ ಇತರ ಅಂಗಗಳಲ್ಲಿ ಹಂತಗಳಲ್ಲಿ ಕೆಳಸ್ತರದ ಜನ ಹೆಚ್ಚು ಅವಕಾಶಗಳನ್ನು ಪಡೆದದ್ದು ರಾಜಕೀಯದಲ್ಲಿ ವಿಭಜನೆಯನ್ನು ತಂದಂತೆಯೇ ಸಾಹಿತ್ಯದಲ್ಲಿಯೂ ವಿಭಜನೆಯನ್ನು ತಂದಿತು. ಪ್ರಗತಿಪರ ಹಾಗೂ ಪ್ರತಿಗಾಮಿ ವಿಚಾರಗಳು ಸಾಹಿತ್ಯದಲ್ಲಿ ಕೂಡ ಮೂಡಿದವು.

ಸ್ವತಂತ್ರ ಚಳುವಳಿಯ ಕಾಲದಲ್ಲಿ ಮೂಡಿದ್ದ ಕನಸುಗಳು ಸ್ವಾತಂತ್ರ್ಯ ನಂತರ ನನಸಾಗದೇ ಹೋದಾಗ ನವೋದಯದ ... ಸಮಾಜದ ಮೇಲು ವರ್ಗದ ಭಾಗವಾಗಿ ಅತ್ಯುತ್ತಮ ಸ್ಥಿತಿಯಲ್ಲಿದ್ದ ಕೆಲವರಲ್ಲಿ ಕೆಳಸ್ತರಗಳ ಜನ ತಮ್ಮ ಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ ಎಂಬ ಭಯವನ್ನು ಮೂಡಿಸಿತು. ಈ ಭಯ, ನಿರಾಶೆ, ಅತೃಪ್ತಿಗಳು ನವ್ಯ ಸಾಹಿತ್ಯ ಕೃತಿಗಳ ಸೃಷ್ಟಿಗೆ ಕಾರಣವಾದವು. ಜನಸಾಮಾನ್ಯರಿಗೆ ತೆರೆದುಕೊಂಡ ನವೋದಯಕ್ಕಿಂತ ಭಿನ್ನವಾಗಿ ವಿದ್ಯಾವಂತರು ವಿದ್ಯಾವಂತರಿಗಾಗಿಯೇ ಬರೆದು ಕೊಂಡಂತೆ ಆಂತರಿಕ ಲೋಲುಪ್ತಿ ಹಾಗೂ ಕೊಡಗಿನಲ್ಲಿ ಮುಳುಗಿಹೋದವು.

ಆದರೆ ಅದೇ ಸಮಯದಲ್ಲಿಯೇ ಜನರ ಬದುಕನ್ನು, ಕಾಳಜಿಗಳನ್ನು ಸಾಹಿತ್ಯದಲ್ಲಿ ಮೂಡಿಸುವ ತಹ ತಹ ಪ್ರಗತಿಶೀಲ ಸಾಹಿತ್ಯದ ಕಿರುತೊರೆಯಾಗಿ ಕಾಣಿಸಿಕೊಂಡು ಸ್ವಾತಂತ್ರ್ಯ ನಂತರದ ಶಿಕ್ಷಣದ ಫಲವನ್ನುಂಡ ಕೆಳಸ್ತರದ ಜನ ಸಾಹಿತ್ಯ ಲೋಕವನ್ನು ಪ್ರವೇಶಿಸಿದಂತೆ ಬಂಡಾಯ ಸಾಹಿತ್ಯ ಚಳುವಳಿಯ ಹೊಳೆಯಾಗಿ ಹರಿಯಿತು. ನವೋದಯ ಸಾಹಿತ್ಯದ ಜನಪರ ಆಶಯಗಳನ್ನು ಮುಂದುವರೆಸಿ ಬೆಳೆಸಿತು. ಸ್ವಾತಂತ್ರ್ಯ ನಂತರವೂ ಸ್ವಾತಂತ್ರ್ಯ ಫಲವನ್ನು ಪಡೆಯದ ಕೆಳಸ್ತರಗಳ ಜನರ ಬದುಕನ್ನು ಕರ್ನಾಟಕದ ಸಮಸ್ತ ಜನರ ಮುಂದೆ ತೆರೆಯಿತು. ಕೆಳವರ್ಗ, ಜಾತಿಗಳ ಜನರ ಸ್ವಾತಂತ್ರ್ಯದ ಬಯಕೆಗೆ ಧ್ವನಿಯಾಯಿತು. ಸ್ವಾತಂತ್ರ್ಯ ನಂತರ ಮುಂದುವರಿದ ಸ್ವಾತಂತ್ರ್ಯ ಹೋರಾಟದ ಧ್ವನಿಯಾಯಿತು.

ಹೀಗೆ ಸ್ವಾತಂತ್ರ್ಯನಂತರವೂ ಸ್ವಾತಂತ್ರ್ಯದ ಫಲಕ್ಕಾಗಿ ಹೋರಾಟ ಮುಂದುವರೆದಿದೆ. ಸ್ವಾತಂತ್ರ್ಯವನ್ನು ಕೆಲವರಿಗೆ ಸೀಮಿತಗೊಳಿಸುವ ಆಳುವವರ್ಗಗಳ ಸ್ವಾತಂತ್ರ್ಯವನ್ನು ಎಲ್ಲರಿಗೂ ವಿಸ್ತರಿಸುವ ಆಶಯದ ಜನಸಮುದಾಯದ ಹೋರಾಟ ...

ಸಿಟಿಬಿಟಿಗೆ ಸಹಿ ಹಾಕುವ ನಾಚಿಕೆಗೇಡಿನ ಕೆಲಸ ಬೇಡ

ಭಾರತ ಸರಕಾರ 'ಸಮಗ್ರ ಪರೀಕ್ಷಣಾ ...ಷೇಧ ಸಂಧಿ'(ಸಿಟಿಬಿಟಿ) ಯ ಬಗ್ಗೆ ...ೇಶದೊಳಗೆ ಒಂದು ಒಮ್ಮತ ರೂಪಿಸಿದ ...ಂತರ ಅದಕ್ಕೆ ಸಹಿ ಹಾಕುವುದಾಗಿ ...ೂಚಿಸಿದೆ. ಈ 'ಒಮ್ಮತ' ...ೂಪಿಸುವುದಕ್ಕಾಗಿ ಪ್ರಧಾನಮಂತ್ರಿಗಳು ...ುತ್ತಿತರ ಸರಕಾರೀ ಮುಖಂಡರು ವಿವಿಧ ...ಾಜಕೀಯ ಪಕ್ಷಗಳ ಮುಖಂಡರನ್ನು ...ೇಟಿ ಮಾಡುತ್ತಿದ್ದಾರೆ. ಡಿಸೆಂಬರ್ 22 ರಂದು ಅವರು ಸಿಪಿಐ(ಎಂ) ಮುಖಂಡರನ್ನು ಭೇಟಿಯಾದರು. ಪ್ರಧಾನ ಕಾರ್ಯದರ್ಶಿ ...ರ್ಕಿಶನ್ ಸಿಂಗ್ ಸುರ್ಜಿತ್‌ರವರ ನೇತೃತ್ವದಲ್ಲಿನ ಸಿಪಿಐ(ಎಂ) ನಿಯೋಗ ಸಿ.ಟಿ.ಬಿ.ಟಿ.ಗೆ ಸಹಿ ಹಾಕುವ ವಿಚಾರವನ್ನು ವಿರೋಧಿಸುತ್ತಾ ...ಲ್ಲಿ ಕೇಂದ್ರ ಪ್ರಶ್ನೆ ಪರಮಾಣು ಶಸ್ತ್ರೀಕರಣದ್ದು ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಬಿಜೆಪಿ ನೇತೃತ್ವದ ಸರಕಾರ ಮೇಲೆ 1998 ರಲ್ಲಿ ...ರಮಾಣು ಶಸ್ತ್ರಗಳನ್ನು ತಯಾರಿಸದಿರುವ ಭಾರತದ ದೀರ್ಘಕಾಲದ ನೀತಿಯನ್ನು ಕೈಬಿಟ್ಟುದರ ಪರಿಣಾಮವಾಗಿ ಈಗ ಸಿಟಿಬಿಟಿ ಗೆ ...ಹಿಹಾಕುವ ಬಗ್ಗೆ ಮಾತನಾಡಬೇಕಾದ ಪರಿಸ್ಥಿತಿ ಬಂದಿದೆ. ಆದ್ದರಿಂದ ಈ ಪರಮಾಣು ಶಸ್ತ್ರೀಕರಣದ ದಾರಿಯನ್ನು ಬಿಟ್ಟು ಮತ್ತೆ ...ತಂತ್ರ, ಶಾಂತಿಯ ಧೋರಣೆ ಅಂಗೀಕರಿಸಬೇಕು ಎಂದು ಸಿಪಿಐ(ಎಂ) ನಿಯೋಗ ಸೂಚಿಸಿತು. ಸಿಪಿಐ(ಎಂ) ಮತ್ತು ಇತರ ಎಡ, ...ೇಶಪ್ರೇಮಿ ಶಕ್ತಿಗಳು ಸಿಟಿಬಿಟಿಗೆ ಸಹಿಹಾಕುವುದನ್ನು ಏಕೆ ವಿರೋಧಿಸುತ್ತಿವೆ? ಈ ಬಗ್ಗೆ ಸಿಪಿಐ(ಎಂ) ನಿಯೋಗ ಸರಕಾರಕ್ಕೆ ಸಲ್ಲಿಸಿದ ...ಪ್ಪಣಿಯಲ್ಲಿ ವಿವರಿಸಲಾಗಿದೆ. ಅದರ ಮುಖ್ಯ ಅಂಶಗಳನ್ನು ಮುಂದೆ ಕೊಡಲಾಗಿದೆ.

ವಿಶ್ವದಲ್ಲಿ ಪರಮಾಣು ಯುದ್ಧದ ಭೀಕರ ಸನ್ನಿವೇಶ ...ಂಟಾಗಬಾರದು ಎಂಬ ಜನಗಳ ಸಹಜ ಆತಂಕದ ...ನ್ನೆಲೆಯಲ್ಲಿ ಸಂಪೂರ್ಣ ನಿಶ್ಶಸ್ತ್ರೀಕರಣದ ಕೂಗು ...ಶ್ವದಲ್ಲೆಲ್ಲಾ ಕೇಳಿ ಬಂತು. ಆದರೆ ಪರಮಾಣು ಶಸ್ತ್ರಸಜ್ಜಿತ ...ೇಶಗಳು ಈ ಕೂಗನ್ನು ತಮ್ಮ ಪ್ರಾಬಲ್ಯವನ್ನು ...ತಗೊಳಿಸಲಿಕ್ಕೆ ಉಪಯೋಗಿಸಿಕೊಂಡಿದ್ದಾರೆ. ...ರಮಾಣು ಪ್ರಸರಣ ನಿಷೇಧ ಸಂಧಿ(ಸಿಟಿಬಿಟಿ) ...ೀಲ್ನೋಟಕ್ಕೆ ಪರಮಾಣು ಶಸ್ತ್ರಗಳು ಹರಡದಂತೆ ...ಡೆಯುವಂತೆ ಕಂಡರೂ ವಾಸ್ತವವಾಗಿ ಇದುವರೆಗೆ ...ರಮಾಣು ಶಸ್ತ್ರಾಸ್ತ್ರಗಳನ್ನು ಹೊಂದದ ದೇಶಗಳು ಮಾತ್ರ ...ದನ್ನು ಇನ್ನು ಮುಂದೆ ಎಂದೆಂದೂ ಹೊಂದದಂತೆ ...ಡೆಯುವ ಒಂದು ಸಂಧಿ. ಪರಮಾಣು ಶಸ್ತ್ರಾಸ್ತ್ರಗಳನ್ನು ...ಗಾಗಲೇ ಹೊಂದಿರುವ ದೇಶಗಳು ತಮ್ಮ ಶಸ್ತ್ರಾಸ್ತ್ರವನ್ನು ...ಮೂರ್ಲಲಮಾಡುವ ಬಗ್ಗೆ ಈ ಸಂಧಿ ಏನೂ ...ೇಳುವುದಿಲ್ಲ. ಈ ಸಂಧಿಗೆ ಪೂರಕವಾಗಿಯೇ ...ಂದಿರುವಂತದ್ದು ಸಿಟಿಬಿಟಿ. ಪರಮಾಣು ಶಸ್ತ್ರಾಸ್ತ್ರಗಳ ...ಕವಣೆಗೆಗೆ ಕಾರಣವಾಗಿರುವ ಪರೀಕ್ಷಣೆಗಳನ್ನು ...ಪೂರ್ಣವಾಗಿ ನಿಲ್ಲಿಸಬೇಕು ಎಂಬುದು ಇದರ ...ುದ್ದೇಶವಾದರೂ ಕೂಡಾ ವಾಸ್ತವವಾಗಿ ಇದೂ ...ಕ್ಷಪಾತಪೂರ್ಣವಾದ, ನಿಶ್ಶಸ್ತ್ರೀಕರಣದ ಗುರಿಯನ್ನು ...ಡೇರಿಸದ, ಭಾರತದ ಭದ್ರತೆಯನ್ನು ನೀಡಲಾರದ ...ಂಧಿಯೆಂಬ ಕಾರಣದಿಂದಲೇ ಸೆಪ್ಟೆಂಬರ್ 1996 ರಲ್ಲಿ ...ಈ ಸಂಧಿಯನ್ನು ಸಹಿಗೆ ತೆರೆದಾಗ ಇದಕ್ಕೆ ಸಹಿ ಹಾಕಲು ...ಾರತ ಸರ್ಕಾರ ನಿರಾಕರಿಸಿತು. ಭಾರತ ಸರಕಾರ ಈ ...ರಾಕರಣೆಗೆ ಕೊಟ್ಟ ಕಾರಣಗಳು ಈಗಲೂ ಅಷ್ಟೇ ಪ್ರಸ್ತುತ. ...ವಾಗಿರುವಾಗ ಆಗ ಈ ಬಗ್ಗೆ ದೇಶದಲ್ಲಿ ಇದ್ದ ಒಮ್ಮತಕ್ಕೆ ...ರುದ್ಧವಾಗಿ ಈಗ ಅದಕ್ಕೆ ಸಹಿ ಹಾಕಲು 'ಒಮ್ಮತ' ...ೂಪಿಸುವ ಪ್ರಯತ್ನವೇಕೆ?

ಭಾರತ 3 ವರ್ಷಗಳ ಹಿಂದೆ ಈ ಸಂಧಿಗೆ ಸಹಿ ...ಕಲು ನಿರಾಕರಿಸಲು ಕಾರಣಗಳೇನು ಎಂದು ...ನಪಿಸಿಕೊಳ್ಳೋಣ. ಐದು ಪ್ರಮುಖ ಕಾರಣ ಗಳಿಗಾಗಿ ...ಗ ಸಹಿ ಹಾಕಲು ನಿರಾಕರಿಸಲಾಯಿತು.

1. ಈ ಸಂಧಿ ಪಕ್ಷಪಾತಪೂರ್ಣವಾದದ್ದು: ...ರಮಾಣು ಶಸ್ತ್ರ ಹೊಂದಿದ ಅಮೆರಿಕಾ ನೇತೃತ್ವದ ...ೇಶಗಳು ಈ ಕ್ಷೇತ್ರದಲ್ಲಿ ತಮ್ಮ ಮೇಲುಗೈಯನ್ನು ...ಶ್ವತಗೊಳಿಸಲು ಕಟಿಬದ್ಧವಾದಂತಿವೆ. 200 ಕ್ಕೂ ಹೆಚ್ಚು ...ರಮಾಣು ಸ್ಫೋಟಗಳನ್ನು ನಡೆಸಿ, ಜಗತ್ತನ್ನು ಒಂದಲ್ಲ ...ಲವುಬಾರಿ ಧ್ವಂಸ ಮಾಡುವಷ್ಟು ಪರಮಾಣು ಶಸ್ತ್ರಗಳನ್ನು ...ೇರಿಸಿಟ್ಟುಕೊಂಡ ಮೇಲೆ ಇನ್ನು ಸ್ಫೋಟಗಳ ...ಗತ್ಯವಿಲ್ಲವೆಂಬ ನಿರ್ಣಯಕ್ಕೆ ಅವು ಬಂದಿವೆ. ಆದರೆ ...ದು ಪರಮಾಣು ಶಸ್ತ್ರಹೊಂದಿದ ರಾಷ್ಟ್ರಗಳ ...ಜಮಾನಿಕೆಯನ್ನು ಉಳಿಸಿಕೊಳ್ಳಲೆಂದೇ ರೂಪಿಸಿದ ಸಂಧಿ ...ಂಬ ಕಾರಣಕ್ಕಾಗಿಯೇ ಭಾರತ ಇದನ್ನು 3 ವರ್ಷಗಳ ...ಂದೆ ವಿರೋಧಿಸಿತ್ತು. ಆದರೆ ಈಗ ಇದು ...ಕ್ಷಪಾತಪೂರ್ಣ ಸಂಧಿಯಲ್ಲ, ಏಕೆಂದರೆ ಇದಕ್ಕೆ ಸಹಿ ...ಕಿದ ಎಲ್ಲಾ ದೇಶಗಳ ಮೇಲೂ ಸಮಾನ ಬಾಧ್ಯತೆಗಳಿವೆ ...ಂದು ಹೇಳಲಾಗುತ್ತಿದೆ. ಆದರೆ ಇದು ಸರಿಯಲ್ಲ. ...ರಮಾಣು ಶಸ್ತ್ರಗಳನ್ನು ಹೊಂದಿದ, ಹೊಂದುವ ...ಂತದಲ್ಲಿರುವ ಮತ್ತು ಹೊಂದಿರದ ದೇಶಗಳ ಮೇಲೆ ... ಬಾಧ್ಯತೆಗಳ ಪ್ರಭಾವ ಭಿನ್ನ-ಭಿನ್ನ ವಾಗಿರುತ್ತದೆ. ...ರಮಾಣು ಶಸ್ತ್ರಗಳನ್ನು ಹೊಂದಿರದ ದೇಶಗಳು ಅದನ್ನು ...ನ್ನು ಮುಂದೆ ಹೊಂದದಂತೆ ವಿಧಿಸುವ ಈ ಸಂಧಿ ...ಗಾಗಲೇ ಅದನ್ನು ಹೊಂದಿರುವವರು ಇನ್ನು ...ಂದೆಯೂ ಹೊಂದಿರಲು ಅವಕಾಶ ನೀಡುತ್ತದೆ. ಇದು ...ಪಾತವಲ್ಲದೆ ಇನ್ನೇನು?

2. ಒಂದು ಸಮಯ ಮಿತಿಯೊಳಗೆ ನಿಶ್ಶಸ್ತ್ರೀಕರಣದ ಎನ್ನುವವರು ಈಗಿರುವ ಪರಮಾಣು ಶಸ್ತ್ರಾಸ್ತ್ರಗಳನ್ನೆಲ್ಲಾ ಒಂದು ನಿರ್ದಿಷ್ಟ ಸಮಯದೊಳಗೆ ನಾಶ ಮಾಡಿ ಜಗತ್ತನ್ನು ಪರಮಾಣು ಶಸ್ತ್ರ ಮುಕ್ತಗೊಳಿಸುತ್ತೇವೆ ಎಂದು ಭರವಸೆ ನೀಡಲು ನಿರಾಕರಿಸುತ್ತಾರೆ. ಏಕೆ? ಸಿಟಿಬಿಟಿಗೆ ಮೂರು ವರ್ಷಗಳ ಸಮಯಮಿತಿ ಹಾಕಿರುವವರು ಎನ್.ಪಿ.ಟಿ.ಗೆ ಅಂದರೆ ಪರಮಾಣು ಪ್ರಸರಣ ನಿಷೇಧ ಸಂಧಿಗೆ ಅಂತಹ ಮಿತಿಯನ್ನೇನೂ ಹಾಕಲಿಲ್ಲ. ಆದ್ದರಿಂದಲೇ ಸಿಟಿಬಿಟಿ "ಪರಮಾಣು ಶಸ್ತ್ರಾಸ್ತ್ರಗಳನ್ನು ವಿಸ್ತರಿಸಲು ಒಂದು ಲೈಸೆನ್ಸ್" ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ರಾಯಭಾರಿ ಪ್ರಕಾಶ್ ಶಾಹ 1996 ರಲ್ಲಿ ಈ ಕುರಿತು ನಡೆದ ಸಮ್ಮೇಳನದಲ್ಲಿ ಟಿಪ್ಪಣಿಮಾಡಿದರು. ಈಗಲೂ ಕೂಡಾ ಒಂದು ನಿರ್ದಿಷ್ಟ ಅವಧಿಯೊಳಗೆ ಜಗತ್ತಿನಲ್ಲಿರುವ ಪರಮಾಣು ಅಸ್ತ್ರಗಳನ್ನೆಲ್ಲಾ ನಿರ್ಮೂಲ ಮಾಡಲಾಗುವುದು. ಅಂದರೆ ಸಂಪೂರ್ಣ ಪರಮಾಣು ನಿಶ್ಶಸ್ತ್ರೀಕರಣ ತರಲಾಗುವುದು ಎಂಬ ಭರವಸೆಯನ್ನು ಪರಮಾಣು ಶಸ್ತ್ರ ಸಂಪನ್ನ ದೇಶಗಳು ಹೇಳಲು ಸಿದ್ಧರಿಲ್ಲ. ಈ ಮೂರು ವರ್ಷಗಳಲ್ಲಿ ಆಗಿರುವ ಒಂದೇ ವ್ಯತ್ಯಾಸವೆಂದರೆ ಭಾರತಕ್ಕೂ ಪರಮಾಣು ಅಸ್ತ್ರಗಳ ಪ್ರಸರಣವನ್ನು ಹೆಚ್ಚಿಸಲು 'ಲೈಸೆನ್ಸ್' ದೊರೆತಿದೆ ಎಂಬುದು. ಆದರೆ ಭಾರತ 1994 ರಿಂದ 1996 ರ ವರೆಗೆ ಈ ಕುರಿತು ನಡೆದ ಚರ್ಚೆಯಲ್ಲಿ ಸಿಟಿಬಿಟಿಗೂ ಎಲ್ಲಾ ಪರಮಾಣು ಶಸ್ತ್ರಗಳ ನಿರ್ಮೂಲನಕ್ಕೂ ಪರಸ್ಪರ ಸಂಬಂಧವಿದೆ ಎಂದು ಸತತವಾಗಿ ಹೇಳಿಕೊಂಡು ಬಂದದ್ದನ್ನು ಈಗ ಮರೆಯಲು ಸಾಧ್ಯವೇ?

. ಸಂಧಿಯಲ್ಲಿ ಪರಮಾಣು ಅಸ್ತ್ರ ಸಂಪನ್ನ ದೇಶಗಳಿಗೆ ತಮ್ಮ ಶಸ್ತ್ರಾಸ್ತ್ರಗಳನ್ನು ಉತ್ತಮಗೊಳಿಸಲು ಅವಕಾಶ ಕೊಡುವಂತಹ 'ಮಾತು'ಗಳನ್ನು ಇಡಲಾಗಿದೆ ಎಂಬುದು ಭಾರತ ಸರಕಾರ ಮೂರು ವರ್ಷಗಳ ಹಿಂದೆ ಎತ್ತಿದ ಮೂರನೇ ಆಕ್ಷೇಪ. ವಿಶೇಷವಾಗಿ ಅಮೆರಿಕಾ ತನ್ನ ಪರಮಾಣು ಶಸ್ತ್ರ ಭಂಡಾರವನ್ನು ಉಳಿಸಿಕೊಂಡೇ ತನ್ನ ಪರಿಕ್ಷಾ ಸ್ಥಳಗಳಲ್ಲಿ, ಪ್ರಯೋಗಾಲಯಗಳಲ್ಲಿ ಪರಮಾಣು ಶಸ್ತ್ರಗಳನ್ನು ಇನ್ನಷ್ಟು ಪರಿಷ್ಕರಿಸಲು, ಅಭಿವೃದ್ಧಿಪಡಿಸಲು ಅವಕಾಶ ಈ ಸಿಟಿಬಿಟಿ ಸಂಧಿ ಪರೋಕ್ಷವಾಗಿ ಒದಗಿಸಿದೆ. ಪರೀಕ್ಷಾ ಸ್ಫೋಟದ ಪ್ರಮಾಣ ಶೂನ್ಯಕ್ಕಿಂತ ಹೆಚ್ಚಿದ್ದರೆ ಮಾತ್ರ ಸಿಟಿಬಿಟಿ ಅನ್ವಯವಾಗುತ್ತದೆ. ಇದರಿಂದಾಗಿ ಇದಕ್ಕಿಂತ ಕೆಳಮಟ್ಟದ ಪ್ರಯೋಗಗಳನ್ನು, ಕಂಪ್ಯೂಟರ್‌ಗಳ ನೆರವಿನಿಂದ ಪರಮಾಣು ಶಸ್ತ್ರಾಸ್ತ್ರಗಳನ್ನು ಪರಿಷ್ಕರಿಸಲು, ಅಭಿವೃದ್ಧಿಪಡಿಸಲು, ಆ ಮೂಲಕ ತಮ್ಮ ಪರಮಾಣು ಶಸ್ತ್ರ ಭಂಡಾರವನ್ನು ಇನ್ನಷ್ಟು ತೀಕ್ಷ್ಣಗೊಳಿಸಲು ಸಂಪೂರ್ಣ ಅವಕಾಶ ಉಳಿಯುತ್ತದೆ. ಹಾಗಿರುವಾಗ ಇಂತಹ ಸಂಧಿಯಿಂದ ಪರಮಾಣು ಯುದ್ಧದ ಭಯ ತೊಲಗುವ ಸಾಧ್ಯತೆ ಖಂಡಿತಾ ಇಲ್ಲ.

ಪೋಖ್ರಾನ್ ಸ್ಫೋಟದ ನಂತರ ಈ ಪಕ್ಷಪಾತಕಾರೀ ಅಂಶ ನಮ್ಮ ಪರವಾಗಿದೆ ಎಂದು ಸರಕಾರ ವಾದ ಹೂಡುತ್ತಿದೆ. ಇದನ್ನು ನಂಬುವಂತಿಲ್ಲ.

4. ನಮ್ಮ ಸಾರ್ವಭೌಮತೆಯನ್ನೇ ಪ್ರಶ್ನಿಸುವ ಒಂದು ಕಲಮು ಇದರಲ್ಲಿದೆ ಎಂಬುದು 1996ರಲ್ಲಿ ಭಾರತ ಮುಂದಿಟ್ಟ ಒಂದು ಬಲವಾದ ಆಕ್ಷೇಪ. ಎನ್.ಪಿ.ಟಿ. ಸಂಧಿಗೆ ಸಹಿ ಹಾಕಲು ಕಾಲಮಿತಿಯೇನೂ ಹಾಕಿಲ್ಲ. ಆದರೆ ಸಿಟಿಬಿಟಿಗೆ ಸೆಪ್ಟೆಂಬರ್ 24, 1999 ರೊಳಗೆ ಸಹಿ ಹಾಕಬೇಕು ಎಂಬ ಸಮಯಮಿತಿ ಹಾಕಲಾಗಿತ್ತು. ಆ ವೇಳೆಗೆ ಭಾರತದಂತಹ ದೇಶಗಳು ಸಹಿಹಾಕದಿದ್ದರೆ ಆದಾಗಲೇ ಸಹಿ ಹಾಕಿದ ದೇಶಗಳು ಒಂದು ಸಮ್ಮೇಳನ ನಡೆಸಿ 'ಈ ಸಂಧಿ ಬೇಗನೇ ಜಾರಿಯಾಗುವಂತೆ ಮಾಡಲು ಅಂತರ್‍ರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ ಏನು ಕ್ರಮಗಳನ್ನು ತಗೊಳ್ಳಬಹುದು" ಎಂದು ನಿರ್ಧರಿಸುವುದಾಗಿ ಈ ಸಂಧಿಯಲ್ಲಿದೆ. ಅಂದರೆ ಈ ಸಂಧಿ ಜಾರಿಗೆ ... ಹೊಣೆ ಎಂಬ ಅತ್ಯಂತ ದಮನಕಾರಿಯಾದ ಅಂಶವನ್ನೊಳಗೊಂಡ ಸಂಧಿಯಿದು.

5. ಭಾರತದ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದಲೂ ಈ ಸಂಧಿಗೆ ಸಹಿ ಹಾಕಲು ಹೇಳಿತ್ತು. ಈ ಸಂಧಿಯಲ್ಲಿ ನಿಶ್ಶಸ್ತ್ರೀಕರಣದ ಉದ್ದೇಶವಿಲ್ಲ. ಪರಮಾಣು ಶಸ್ತ್ರಾಸ್ತ್ರಗಳನ್ನು ಈಗ ಹೊಂದಿರುವುದು ಬಿಟ್ಟು, ಇತರರಿಗೂ ಅದನ್ನು ಹೊಂದಬಾರದು ಎಂಬುದಷ್ಟೇ ಇದರ ಉದ್ದೇಶವಾದ್ದರಿಂದ ನಮ್ಮ ರಾಷ್ಟ್ರೀಯ ಭದ್ರತೆಯ ಬಗ್ಗೆ ಇರುವ ಕೆಲವು ಆತಂಕಗಳಿಂದಾಗಿ ಇದಕ್ಕೆ ಸಹಿ ಹಾಕಲು ಸಾಧ್ಯವಿಲ್ಲ ಎಂದು ಆಗ ವಿದೇಶಾಂಗ ಮಂತ್ರಿಯಾಗಿದ್ದ ಐ.ಕೆ.ಗುಜ್ರಾಲ್ ಹೇಳಿದರು. "1974 ರ ಪರಮಾಣು ಸ್ಫೋಟದ ನಂತರ ನಾವು ಪರಮಾಣು ಶಸ್ತ್ರ ಹೊಂದುವ ಸಾಧ್ಯತೆಯಿದ್ದರೂ ಅದನ್ನು ಹೊಂದಿರಲು ನಿರ್ಧರಿಸಿ ಅಭೂತಪೂರ್ವ ಸಂಯಮವನ್ನು ತೋರಿದ್ದೇವೆ. ಆದರೆ ಪರಮಾಣು ಶಸ್ತ್ರ ಸಂಪನ್ನ ದೇಶಗಳು ತಮ್ಮ ಭದ್ರತೆಗೆ ಪರಮಾಣು ಶಸ್ತ್ರ ಭಂಡಾರಗಳನ್ನು ಅವಲಂಬಿಸಿರುವವರೆಗೆ ನಮ್ಮ ಈ ಆಯ್ಕೆಯ ಮೇಲೆ ಯಾವುದೇ ರೀತಿಯಲ್ಲಿ ಮಿತಿ ಹಾಕುವುದನ್ನು ನಾವು ಒಪ್ಪಲು ಸಾಧ್ಯವಿಲ್ಲ" ಎಂದು ಗುಜ್ರಾಲ್ ಸ್ಪಷ್ಟಪಡಿಸಿದ್ದರು.

ವಾಜಪೇಯಿ ಸರಕಾರವೇ ಕಾರಣ

ಹೀಗೆ ಮೂರು ವರ್ಷಗಳ ಹಿಂದೆ ಭಾರತದಲ್ಲಿ ಸಿಟಿಬಿಟಿಗೆ ಸಹಿ ಹಾಕದಿರಲು ಬಿಜೆಪಿಯೂ ಸೇರಿದಂತೆ ಎಲ್ಲರ ಸಮ್ಮತಿಯಿದ್ದರೂ ಈಗ ಅದಕ್ಕೆ ಸಹಿ ಹಾಕುವ ಮಾತು ಎಳಲು ಬಿಜೆಪಿ ನೇತೃತ್ವದ ಸರಕಾರವೇ ಹೊಣೆ. ಮೇ1998 ರಲ್ಲಿ ಐದು ಪೋಖ್ರಾನ್ ಸ್ಫೋಟ ನಡೆಸಿ ಅದು ನಮ್ಮ ಸ್ವತಂತ್ರ ಪರಮಾಣು ತಂತ್ರಜ್ಞಾನದ ಸಾಮರ್ಥ್ಯವನ್ನು ಉಳಿಸಿಕೊಳ್ಳುತ್ತಲೇ ಪರಮಾಣು ಶಸ್ತ್ರಗಳನ್ನು ತಯಾರಿಸದೇ ಇರುವ, ಹೊಂದದೇ ಇರುವ ಸಂಯಮದ ದೀರ್ಘಕಾಲದ ನೀತಿಯನ್ನು ಕೈಬಿಟ್ಟುದರ ದುಷ್ಪರಿಣಾಮವೇ ಈಗಿನ ಪರಿಸ್ಥಿತಿ. ಆದ್ದರಿಂದ ಇಲ್ಲಿ ಮುಖ್ಯಪ್ರಶ್ನೆ ಸಿಟಿಬಿಟಿಗೆ ಸಹಿ ಹಾಕುವುದಲ್ಲ, ಪರಮಾಣು ಶಸ್ತ್ರೀಕರಣವೇ ಮುಖ್ಯ ಪ್ರಶ್ನೆ. ಇದರಿಂದಾಗಿಯೇ ಈ ಸರಕಾರದ ವಿದೇಶಾಂಗ ಮಂತ್ರಿ, ಅಮೆರಿಕಾದೊಂದಿಗೆ ಹಲವು ಸುತ್ತುಗಳ ಗುಪ್ತ ಮಾತುಕತೆ ನಡೆಸಬೇಕಾದಾಗ, ಅದರೊಂದಿಗೆ ಒಂದು ಒಪ್ಪಂದಕ್ಕೆ ಬರಬೇಕಾದ ಸ್ಥಿತಿ ತಂದುಕೊಂಡಿತು. ಜಾಗತಿಕ ಪರಮಾಣು ನಿಶ್ಶಸ್ತ್ರೀಕರಣದ ತನ್ನ ಮೂಲ ಉದ್ದೇಶವನ್ನು ಕೈಬಿಟ್ಟರೆ ಭಾರತ ಈಗ ಒಂದು 'ಕನಿಷ್ಠ ವಿಶ್ವಾಸಾರ್ಹ ಪರಮಾಣು ತಡೆ'ಯನ್ನು ಅಂದರೆ ಪರಮಾಣು ಶಸ್ತ್ರಾಸ್ತ್ರವನ್ನು ಹೊಂದಲು ತಾನು ಪರವಾನಗಿ ನೀಡುತ್ತೇನೆ ಎಂಬ ಅಮೆರಿಕಾದ ಬೆದರಿಕೆಗೆ ತಲೆಬಾಗಲು ಈ ಸರಕಾರ ಈಗ ಮುಂದಾಗಿದೆ.

ಹೀಗೆ ಸಿಟಿಬಿಟಿಗೆ ತಲೆಬಾಗಿ ಒಂದು ಅತ್ಯಂತ ಪಕ್ಷಪಾತಪೂರ್ಣ ವಿಶ್ವ ವ್ಯವಸ್ಥೆಯಲ್ಲಿ ಪಕ್ಷಪಾತ ನಡೆಸುವವರ ಹಿಂಬಾಲಕರಾಗುವ ಹೀನ ಸ್ಥಿತಿಗೆ ವಾಜಪೇಯಿ ಸರಕಾರ ಭಾರತವನ್ನು ತಳ್ಳಿದೆ.

ಪರ್ಯಾಯ ದಾರಿಯೇನು?

ಈ ಹೀನ ಪರಿಸ್ಥಿತಿಯಿಂದ ಭಾರತ ಹೊರಬರಬೇಕಾದರೆ ವಾಜಪೇಯಿ ಸರಕಾರ ತನ್ನ ನಿಲುವನ್ನು ಹಿಂತೆಗೆದುಕೊಂಡು ಪರಮಾಣು ಶಸ್ತ್ರಗಳನ್ನು ತಯಾರಿಸುವ, ನೆಲೆಗೊಳಿಸುವ ಪ್ರಯತ್ನವನ್ನು ನಿಲ್ಲಿಸಿ ಮತ್ತೆ ಭಾರತ ಒಂದು ಸ್ವತಂತ್ರವಾದ, ಶಾಂತಿಪರವಾದ ಪರಮಾಣು ಧೋರಣೆಯನ್ನು ಅಂಗೀಕರಿಸಬೇಕು. ಈ ನಿಟ್ಟಿನಲ್ಲಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು -

1. ಪರಮಾಣು ಶಸ್ತ್ರಾಸ್ತ್ರಗಳನ್ನು ನೆಲೆಗೊಳಿಸುವುದಿಲ್ಲ, ಸೇರಿಸುವುದಿಲ್ಲ ಎಂಬ ಬಗ್ಗೆ ಒಂದು ರಾಷ್ಟ್ರೀಯ ಭರವಸೆ
2. ಪರಮಾಣು ಸ್ಫೋಟ ಪರೀಕ್ಷಣೆಗಳನ್ನು ಇನ್ನು ಮುಂದೆ ನಡೆಸುವುದಿಲ್ಲ ಎಂಬ ಬಗ್ಗೆ ಒಂದು ರಾಷ್ಟ್ರೀಯ ಭರವಸೆ. ಇದಕ್ಕಾಗಿ ಮೊದಲು ಸಂಸತ್ತಿನ ಎರಡೂ ಸದನಗಳಲ್ಲಿ ಒಂದು ಒಮ್ಮತದ ನಿರ್ಣಯ ಅಂಗೀಕರಿಸಿ, ನಂತರ ಆದಷ್ಟು ಬೇಗನೇ ಇದಕ್ಕೆ ಸಂಸತ್ತಿನ ಶಾಸನದ ರೂಪ ಕೊಡುವುದು. ಅತ್ಯಂತ ವಿಶಿಷ್ಟ ಪರಿಸ್ಥಿತಿಗಳಲ್ಲಿ ಸಂಸತ್ತಿನಲ್ಲಿ ಪೂರ್ಣಪ್ರಮಾಣದ ಚರ್ಚೆಯ ನಂತರವೇ ಪರಮಾಣು ಪರೀಕ್ಷಣೆ ನಡೆಸದಿರುವ ಈ ಅಂಶದ ಬಗ್ಗೆ ಪುನರಾಲೋಚನೆ ಮಾಡುವಂತಹ ಅಂಶವೂ ಈ ಶಾಸನದಲ್ಲಿ ಇರಬೇಕು.
3. ಮುಂದೆ ಅಮೆರಿಕಾ ಮತ್ತಿತರ ಪರಮಾಣು ಶಸ್ತ್ರಸಂಪನ್ನ ದೇಶಗಳು ಒಂದು ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ಪರಮಾಣು ಶಸ್ತ್ರಾಸ್ತ್ರಗಳ ನಿರ್ಮೂಲನಕ್ಕೆ ಒಂದು ನಿರ್ದಿಷ್ಟ ಸಮಯಮಿತಿಗೆ ಬದ್ಧರಾದಾಗ ಮಾತ್ರವೇ ಸಿಟಿಬಿಟಿಗೆ ಸಹಿ ಹಾಕುವುದನ್ನು ಭಾರತ ಪರಿಶೀಲಿಸಬೇಕು.
4. ಪ್ಲುಟೋನಿಯಂ, ಯುರೇನಿಯಂ ಮುಂತಾದ ಪರಮಾಣು ಶಸ್ತ್ರಾಸ್ತ್ರಗಳಲ್ಲಿ ಬಳಕೆಯಾಗುವ ವಸ್ತುಗಳ ದಾಸ್ತಾನುಗಳನ್ನು ಪರಮಾಣು ಶಸ್ತ್ರಾಸ್ತ್ರಗಳಾಗಿ ಪರಿವರ್ತಿಸುವುದಿಲ್ಲ ಎಂಬ ಬಗ್ಗೆ ಸಂಸತ್ತಿನ ಎರಡೂ ಸದನಗಳಲ್ಲಿ ಒಂದು ಸರ್ವಾನುಮತದ ನಿರ್ಣಯದ ಮೂಲಕ ರಾಷ್ಟ್ರೀಯ ಭರವಸೆ. ಆ ನಂತರ ಇದಕ್ಕೂ ಶಾಸನದ ರೂಪ ಕೊಡಬೇಕು.
5. ಪರಮಾಣು ತಡೆ ಸಾಧ್ಯ ಎಂಬ ಸಿದ್ಧಾಂತವನ್ನು 'ಕನಿಷ್ಠ ವಿಶ್ವಾಸಾರ್ಹ ಪರಮಾಣು ತಡೆ' ಎಂಬ ಹೆಸರಿನಲ್ಲಿ ಅದಕ್ಕೆ ಬಿಜೆಪಿ ಕೊಟ್ಟಿರುವ ಭಾರತೀಯ ರೂಪವನ್ನು ತ್ಯಜಿಸಬೇಕು. ಏಕೆಂದರೆ ಈ ಹೆಸರಲ್ಲಿ ಭಾರತ ಮತ್ತು ಪಾಕಿಸ್ತಾನ ಪರಮಾಣು ಅಸ್ತ್ರಗಳನ್ನು ಹೊಂದಿ ತಪ್ಪಿನಿಂದಾದರೂ ಬಳಸಿದರೂ ಎರಡೂ ದೇಶಗಳ ನಾಶ ಖಂಡಿತ. ಆದ್ದರಿಂದ ಇಂತಹ ವಿನಾಶಕಾರಿ ಸಿದ್ಧಾಂತಗಳನ್ನು ಕೈಬಿಟ್ಟು ಇತರ ಮೂರನೇ ಜಗತ್ತಿನ ದೇಶಗಳೊಂದಿಗೆ, ಪರಮಾಣು ಅಸ್ತ್ರಗಳನ್ನು ಹೊಂದಿರದ ದೇಶಗಳೊಂದಿಗೆ ಸೇರಿಕೊಂಡು ಮತ್ತೆ ಭಾರತ ಸಕ್ರಿಯವಾಗಿ ಜಾಗತಿಕ ಪರಮಾಣು ನಿಶ್ಶಸ್ತ್ರೀಕರಣದ ಪ್ರತಿಪಾದನೆಗೆ ಮುಂದಾಗಬೇಕು.

ಒಂದು ಸ್ವತಂತ್ರ, ಸ್ವಾಭಿಮಾನಿ, ಶಾಂತಿಪ್ರಿಯ ದೇಶದ ಮುಂದಿರುವ ಪರ್ಯಾಯ ಇದು. ಅಮೆರಿಕನ್ ಸಾಮ್ರಾಜ್ಯಶಾಹಿಗಳೆದುರು ಮಂಡಿಯೂರಲು ಸಿದ್ಧವಾಗಿರುವ ವಾಜಪೇಯಿ ಸರಕಾರ ಈ ಪರ್ಯಾಯವನ್ನು ಸ್ವೀಕರಿಸುವ ಧೈರ್ಯ ತೋರಬಲ್ಲುದೇ? ಅಂತಹ ಒತ್ತಡ ಅವರ ಮೇಲೆ ತರಬೇಕಾಗಿದೆ.



ಮತ್ತೆ ಹೆಡೆಯೆತ್ತಲಾ

ಕರ್ನಾಟಕದಲ್ಲಿ ಎರಡನೇ ಬಾರಿಗೆ ಬಿಜೆಪಿ ರಾಜ್ಯ ಸರ್ಕಾರದ ಗಾದಿಯನ್ನೇರುವ ಪ್ರಯತ್ನದಲ್ಲಿ ಗ... ಮತ್ತೆ ಪ್ರೂತ್ಕರಿಸತೊಡಗಿದೆ. ಹಿಂದೆ ಹುಬ್ಬಳ್ಳಿಯಲ್ಲಿ ಕಕ್ಕಿದ ವಿಷದಿಂದ ನೂರಾರು ಜನರ ಜೀವನ ಬ... ಬಾರಿ ಹುಬ್ಬಳ್ಳಿ-ಧಾರವಾಡದ ಸಮಸ್ತ ಜನತೆಯನ್ನು ಬಂಧನಕ್ಕೊಳಪಡಿಸಿದ್ದರಿಂದ ನಿರಂತರವಾಗಿ ... ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಪಡೆಯದ ಯಶಸ್ಸು ತಲೆಗೇರಿದೆ. ಮತ್ತೆ ರಾಜ್ಯದೆಲ್ಲೆಡೆ ... ಬೀದರ್‌ನಲ್ಲಿ ಚಿಕ್ಕಮಗಳೂರಿನಲ್ಲಿ ಹನುಮಾನ್ ವಿಗ್ರಹಗಳ ಅವಮಾನವೆಂಬ ನೆಪಗಳನ್ನು ಬಳ... ಜೀವಂತವಾಗಿರಿಸಿ ಜನ ಅಭಿವೃದ್ಧಿಯ, ಪ್ರಗತಿಪರ ಚಳುವಳಿಗಳಲ್ಲಿ ತೊಡಗದಂತೆ, ವ್ಯವಸ್ಥಿತ ಪ್ರಯತ್ನ... ಸುದ್ದಿ ಹರಡಿಸುವ' ಒಂದು ಪಡೆಯನ್ನೇ ಹುಟ್ಟುಹಾಕಿದ್ದಾರೆ. ಇದರ ಪ್ರಭಾವದಿನಾಶಕಾರಿಯಾದ... ಬೀದರದ ಎರಡು ಘಟನೆಗಳ ಬಗ್ಗೆ ಒಂದು ವರದಿ ಇಲ್ಲಿದೆ.

ಬಾಬಾ ಬುಡನ್‌ಗಿರಿಯಲ್ಲಿ ಕಳೆದ ಕೆಲವು ತಿಂಗಳಿಂದ ದತ್ತ ಜಯಂತಿ ನಡೆಸಿರುವ ಬಗ್ಗೆ ಬಜರಂಗ ದಳ ಹಾಗೂ ಸಂಘ ಪರಿವಾರದವರು ಅಬ್ಬರಿಸುತ್ತಿದ್ದುದು ಈಗ ಮುಗಿದಿದೆ. ಬಾಬ್ರಿ ಮಸೀದಿಯ ಧ್ವಂಸ ನಂತರ ಈಗ ಬಾಬಾ ಬುಡನ್‌ಗಿರಿಯಲ್ಲಿ ಅಲ್ಲಿಯ ದರ್ಗಾವನ್ನು ಧ್ವಂಸಗೊಳಿಸುವ ಯೋಜನೆಯ ಕಾರ್ಯತಂತ್ರವನ್ನು ವ್ಯವಸ್ಥಿತವಾಗಿ ರೂಪಿಸುತ್ತಿದ್ದಾರೆ. ಶತಮಾನಗಳಿಂದ ಕೋಮು ಸೌಹಾರ್ದಕ್ಕೆ ಹೆಸರಾಗಿರುವ ಬಾಬಾ ಬುಡನ್‌ಗಿರಿಯಲ್ಲಿ ಹಿಂದೂಗಳು ಹಾಗೂ ಮುಸ್ಲಿಂರು ಪೂಜೆ ಸಲ್ಲಿಸುತ್ತಾ ಇಡೀ ದೇಶಕ್ಕೇ ಭಾವೈಕ್ಯತೆಯ ಮಾರ್ಗವನ್ನು ಸೂಚಿಸುತ್ತಿತ್ತು. ಆದರೆ ಕೋಮುವಾದಿಗಳು ಕೆಲವು ವರ್ಷಗಳಿಂದೀಚೆಗೆ ಅಂದರೆ ಮುಖ್ಯವಾಗಿ ಬಾಬ್ರಿ ಮಸೀದಿ ಧ್ವಂಸದ ನಂತರ ಬಾಬಾ ಬುಡನ್‌ಗಿರಿಯನ್ನು ಒಂದು ವಿವಾದದ ಕೇಂದ್ರವಾಗಿ ಪರಿವರ್ತಿಸುತ್ತಿದ್ದಾರೆ.

ಕಳೆದ ವರ್ಷ ರಾಜ್ಯ ಸರಕಾರದ ಕಟ್ಟೆಚ್ಚರದ ಪೋಲೀಸ್ ಬಂದೋಬಸ್ತಿನಿಂದ ಆಗಬಹುದಾಗಿದ್ದ ದುರ್ಘಟನೆಗಳು ತಪ್ಪಿದವು. ಕಳೆದ ಅಕ್ಟೋಬರ್ ತಿಂಗಳಲ್ಲಿ ಬಾಬಾ ಬುಡನ್ ಗಿರಿಯ ಮುಖ್ಯಸ್ಥ 'ಸಜ್ಜಾದ್ ನಶೀನ್' ಸಯದ್ ಫೀರ್ ಮೊಹಮ್ಮದ್ ಶಾಖಾದ್ರಿ ನಿಧನದ ನಂತರ ಅವರ ಕಳೇಬರ ಹೂಳುವ ಬಗ್ಗೆ (ಅವರ ಪೂರ್ವಜರ ಸಮಾದಿಯ ಸಮೀಪ) ತಕರಾರೆಬ್ಬಿಸಿ ಕೋಮು ಗಲಭೆಗೆ ಪ್ರಚೋದನೆ ನೀಡಿದ್ದರು. ಆದರೆ ಜಿಲ್ಲಾಡಳಿತದ ಮುಂಜಾಗ್ರತ ಕ್ರಮ, ಪೋಲೀಸ್ ಬಂದೋಬಸ್ತ್‌ನಿಂದಾಗಿ ಗಲಭೆ ನಡೆಯಲಿಲ್ಲ. ಆದರೆ ಅನಂತರ ಪದೇ ಪದೇ ಬಾಬಾ ಬುಡನ್‌ಗಿರಿಯಲ್ಲಿ ಅವರ ಪೂರ್ವಜರ ಪಕ್ಕದಲ್ಲಿ ಹೂಳಿರುವ ಸಮಾಧಿಯಲ್ಲಿಯ ಶಾಖಾದ್ರಿಯವರ ಕಳೇಬರವನ್ನು ಸ್ಥಳಾಂತರಿಸಲು ಸರಕಾರವನ್ನು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಇಲ್ಲದಿದ್ದರೆ ತಾವೇ ಆ ಕೆಲಸ ಮಾಡುತ್ತೇವೆಂದು ಎಚ್ಚರಿಸುತ್ತಿದ್ದಾರೆ.

ಇದೇ ಡಿಸೆಂಬರ್ 20 ರಿಂದ 22 ರವರೆಗೆ ಬಾಬಾ ಬುಡನ್‌ಗಿರಿಯಲ್ಲಿ ದತ್ತ ಜಯಂತಿಯನ್ನು ಪೂಜೆ, ಹೋಮ, ಭಜನೆ ಮೊದಲಾದ ಕಾರ್ಯಕ್ರಮದ ಮೂಲಕ ನಡೆಸಿದ್ದಾರೆ. ದತ್ತ ಜಯಂತಿಯ ಪೂರ್ವಭಾವಿಯಾಗಿ ಜಿಲ್ಲಾದ್ಯಂತ ಪ್ರಚಾರದ ಜೀಪ್ ಜಾಥಾಗಳನ್ನು ನಡೆಸಿದ್ದಾರೆ. 'ಸಮರ್ಪಣಾ', 'ಶಕ್ತಿ ಸ್ವಾಭಿಮಾನ', 'ಸಂಕಲ್ಪ' ಹಾಗೂ 'ಸಂದೇಶ' ಎಂಬ ಹೆಸರಿನಲ್ಲಿ ಚಿಕ್ಕಮಗಳೂರು ತಾಲೂಕಿನಲ್ಲಿ ಆಲ್ದೂರಿನಿಂದ, ಕೊಪ್ಪದಿಂದ, ತರಿಕೆರೆಯಿಂದ ಮತ್ತು ಮೂಡಿಗೆರೆಯಿಂದ 16 ಮತ್ತು 17 ರ ಡಿಸೆಂಬರ್‌ನಲ್ಲಿ ಜಾಥಾಗಳನ್ನು ಉದ್ಘಾಟಿಸಿದ್ದು ಈ ನಾಲ್ಕು ಜಾಥಾಗಳು ಇಡೀ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳು ಹಾಗೂ ಇತರೆಡೆ ಪ್ರಚಾರ ನಡೆಸಿ ತಾ. 21.12.99 ರಂದು ಚಿಕ್ಕಮಗಳೂರು ನಗರಕ್ಕೆ ಬಂದು ತಲುಪಿದೆ. ಈ ನಾಲ್ಕು ಜಾಥಾಗಳು ಸೇರಿ ಚಿಕ್ಕಮಗಳೂರಿನ ಮುಖ್ಯ ಬೀದಿಯಲ್ಲಿ 'ಶೋಭಯಾತ್ರೆ'ಯೆಂಬ ಹೆಸರಿನಲ್ಲಿ ಮೆರವಣಿಗೆ ನಡೆಸಿ ಆಜಾದ್ ಪಾರ್ಕ್‌ನಲ್ಲಿ ಬಹಿರಂಗ ಸಭೆ ನಡೆಸಿದ್ದಾರೆ.

ಬಹಿರಂಗ ಸಭೆಯಲ್ಲಿ ಹಾಗೂ ಜೀಪ್ ಜಾಥಾಗಳ ಉದ್ಘಾಟನೆ ಸಂದರ್ಭಗಳಲ್ಲಿ ಬಜರಂಗದಳದ ರಾಜ್ಯ ಸಂಚಾಲಕ ಪ್ರಮೋದ್ ಮುತಾಲಿಕ್, ಬಿಜೆಪಿಯ ರಾಜ್ಯ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹಾಗೂ ಕೆಲವು ಸ್ವಾಮಿಗಳು ಭಾಗವಹಿಸಿ ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆ. ತರಿಕೆರೆಯಲ್ಲಿ ಹಾಗೂ ಚಿಕ್ಕಮಗಳೂರಿನ ಸಭೆ ಮತ್ತು ಕಾರ್ಯಕ್ರಮದಲ್ಲಿ ಬಿಜೆಪಿ ಸಂಸತ್ ಸದಸ್ಯ ಡಿ.ಸಿ.ಶ್ರೀಕಂಠಪ್ಪ ಭಾಗವಹಿಸಿದ್ದಾರೆ ಮತ್ತು ಭಾಷಣ ಮಾಡಿದ್ದಾರೆ.

ದತ್ತಪೀಠ ಅನಾದಿಕಾಲದಿಂದ ಇತ್ತು, ದರ್ಗಾ ಇರುವುದು ನಾಗೇನಹಳ್ಳಿಯಲ್ಲಿರುವ ಜನ್ನತ್ ನಗರದಲ್ಲಿ ಶಾಖಾದ್ರಿ ಕೇವಲ ವ್ಯವಸ್ಥಾಪಕರು, ಮುಖ್ಯಸ್ಥರಲ್ಲ, ದತ್ತಪೀಠದೊಳಗೆ ಈಗಾಗಲೇ 3 ಅಡಿ ಎತ್ತರದ ಮೂರ್ತಿ ಸಿಕ್ಕಿದೆ. ಆದ್ದರಿಂದ ದತ್ತಪೀಠವನ್ನು ವಿಮೋಚನೆ ಮಾಡಿಕೊಡಿ. ಇಲ್ಲದಿದ್ದರೆ ನಾವೇ ವಿಮೋಚನೆ ಮಾಡುತ್ತೇವೆಯೆಂದು ಸರಕಾರಕ್ಕೆ ಎಚ್ಚರಿಕೆ ನೀಡುವ, ಅಲ್ಪಸಂಖ್ಯಾತರನ್ನು ಛೇಡಿಸುವ ಉದ್ರೇಕಿಸುವ ಭಾಷಣ ಮಾಡುತ್ತಾ ಬಂದಿದ್ದಾರೆ.

ಚಿಕ್ಕಮಗಳೂರು ತಾಲೂಕಿನ ಆಲ್ದೂರಿನಿಂದ 16.12.99 ರಂದು ಉದ್ಘಾಟನೆಗೊಂಡ ಜಾಥಾ ಸಂದರ್ಭ ಆಲ್ದೂರು ನಗರವನ್ನು ಕೇಸರಿಮಯಗೊಳಿಸಿದ್ದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಂಘಪರಿವಾರದವರ ಮುಖ್ಯ ಕೇಂದ್ರ ಆಲ್ದೂರು. ಬಿಜೆಪಿಯ ಯುವಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಇದೇ ಊರಿನವರು, ಸ್ಥಳೀಯ. ಆದ್ದರಿಂದ ಇಲ್ಲಿ ಹೆಚ್ಚಿನ ಯುವಕರು ಬಜರಂಗದಳದಲ್ಲಿದ್ದಾರೆ. ಉದ್ಘಾಟನಾ ಸಂದರ್ಭ ಬಜರಂಗದಳ-ಸಂಘ ಪರಿವಾರದ ಕಾರ್ಯಕರ್ತರು ನೂರು ಸಂಖ್ಯೆಯಲ್ಲಿ ಮಾತ್ರ ಸೇರಿದ್ದು, ಸಾರ್ವಜನಿಕರಲ್ಲಿ ಅಂತಹ ಆಸಕ್ತಿಯೇನು ಕಂಡುಬರಲಿಲ್ಲ. ಕೇವಲ ಪ್ರಚೋದನೆಕಾರಿ ಭಾಷಣಗಳಷ್ಟೇ ಆಗಿದೆ. ಇತರೆಡೆ ಸುದ್ದಿಯನ್ನು ಸಂಗ್ರಹಿಸಿದಾಗಲೂ ಅವರ ಜಾಥಾ ಉದ್ಘಾಟನೆ ಹಾಗೂ ಜಾಥಾ ಹೋದ ಕಡೆ ಸಂಘ ಪರಿವಾರದವರು ಸೇರುವುದು ಬಿಟ್ಟರೆ ಇತರೆ ಜನ ವಿಭಾಗ ಯಾವುದೇ ಆಸಕ್ತಿ ತೋರಿಸಿಲ್ಲ.

ತಾ. 22.12.99 ರಂದು ಬೆಳಿಗ್ಗೆ ಸುಮಾರು 11.30 ಕ್ಕೆ ನಾನು ಹಾಗೂ ಚಿಕ್ಕಮಗಳೂರಿನಿಂದ ಕಾಂ. ಎಂ.ಕೆ.ವಿಶ್ವನಾಥ್ ಹಾಗೂ ಇತರರು ಸೇರಿ ಜೀಪಿನಲ್ಲಿ ಬಾಬಾಬುಡನ್‌ಗಿರಿಯ ಪರಿಸ್ಥಿತಿಯನ್ನು ನೇರವಾಗಿ ವೀಕ್ಷಿಸಿ ಬರಲು ಹೊರಟೆವು. ದಾರಿಯಲ್ಲಿ ಎಲ್ಲೆಲ್ಲಿ ರಸ್ತೆಗಳು ಕೂಡುತ್ತವೆಯೋ ಅಲ್ಲಿ ಎಲ್ಲೆಡೆ ಬಿಗಿ ಪೋಲೀಸ್ ಬಂದೋಬಸ್ತ್, ಕೈಮಾರದ ಹತ್ತಿರ ಪೋಲೀಸ್ ಚೆಕ್‌ಪೋಸ್ಟ್, ಅತ್ತಿಗುಂಡಿಯಿಂದ ಮುಂದೆ ಗಿರಿಗೆ ಹೋಗುವ ಕಡೆ ವಾಹನಗಳಲ್ಲಿ ಸಂಚರಿಸುವ ಜನರ ಸಂಖ್ಯೆ, ವಾಹನಗಳ ನಂಬರ್ ಗುರುತು, ಡ್ರೈವರ್ ಹೆಸರು, ತಪಾಸಣೆ ನಡೆಯುತ್ತಿತ್ತು.

ಹಿಂದಿನ ದಿನ ಮಧ್ಯರಾತ್ರಿಯಲ್ಲಿ ಸ್ವಲ್ಪ ಸಣ್ಣಗೆ ಮಳೆ ಬಂದಿದ್ದು, ಮೋಡ ಮುಸುಕಿದ್ದು ಅತ್ತಿಗುಂಡಿ ತಿರುವಿನಿಂದ ಬಾಬಾ ಬುಡನ್‌ಗಿರಿಗೆ ಸಾಗುವುದು ಸ್ವಲ್ಪ ಕಷ್ಟದಾಯಕವಾಗಿತ್ತು. ಬಾಬಾಬುಡನ್ ಕಡೆಗೆ ಹಾಗೂ ಅಲ್ಲಿಂದ ಬರುವ ವಾಹನಗಳ ಸಂಖ್ಯೆ ಅಧಿಕವಾಗಿತ್ತು. ಅಲ್ಲಿಯ ಕೆಲವು ಕಠಿಣ ತಿರುವುಗಳಲ್ಲಿ ಕೆ.ಎಸ್.ಆರ್. ಟಿ.ಸಿ. ಬಸ್ಸುಗಳನ್ನು ತಿರುಗಿಸಲಾಗದೆ ಚಾಲಕರು ಕಷ್ಟಪಡುತ್ತಿದ್ದರು. ಅಂತು ನಾವು ಬಾಬಾ ಬುಡನ್‌ಗಿರಿ ಪ್ರವೇಶಿಸಿದೆವು. ಬಾಬಾ ಬುಡನ್‌ಗಿರಿ ಪ್ರವೇಶದಲ್ಲಿಯೇ ಮರದ ದಪ್ಪನೆಯ ಪೋಲ್ಸ್‌ಗಳ ಮುಖಾಂತರ ತಡೆಗೋಡೆಗಳನ್ನು ನಿರ್ಮಿಸಿದ್ದು, ಅಲ್ಲಿಂದ ಒಬ್ಬರ ಹಿಂದೆ ಒಬ್ಬರು ಸಾಗುವಂತೆ ಕೆಳಗಿನ ಗುಹೆಯವರೆಗೆ ತಡೆಗೋಡೆಗಳನ್ನು ನಿರ್ಮಿಸಿದ್ದರು. ನಾವು ಸಾಲಿನಲ್ಲಿ ಸ್ವಲ್ಪ ದೂರದಲ್ಲಿ ಸಾಗಿದೆವು. ಆದರೆ ಗುಹೆಯ ಹತ್ತಿರ ನಡೆಯುತ್ತಿರುವ ಹೋಮದ ಹತ್ತಿರಹೋಗುವುದು ಸರಿಯಲ್ಲವೆಂದು ತಡೆಗೋಡೆಯಿಂದ ಹೊರಬಂದು ಅಲ್ಲಿದ್ದ ಪತ್ರಿಕಾವರದಿಗಾರರೊಡನೆ ಸ್ವಲ್ಪ ಹೊತ್ತು ಕಳೆದೆವು. ಮಳೆಯ ವಾತಾವರಣದಿಂದಾಗಿ ಮೋಡಕವಿದಿದ್ದು 81-10 ಮೀಟರ್ ದೂರದಲ್ಲಿರುವವರು ಕಾಣಿಸುತ್ತಿರಲಿಲ್ಲ. ಗಡ ಗಡ ನಡುಗುವಂತೆ ಚಳಿ, ಹೊರ ಜಿಲ್ಲೆಗಳಿಂದ ಬಂದಿರುವ ಪೋಲೀಸರು ಚಳಿಯಿಂದಾಗಿ ವಿಪರೀತ ಕಷ್ಟಪಡುತ್ತಿದ್ದರು.

ದರ್ಗಾದ ಆವರಣದಲ್ಲಿ ಸಂಘ ಪರಿವಾರದ ಮುಖಂಡರುಗಳು, ವಿವಿಧ ಸಣ್ಣಪುಟ್ಟ ಮಠಗಳ ಸ್ವಾಮಿಗಳು ದೊಡ್ಡ ರೀತಿಯಲ್ಲಿ ಹೋಮ ಪ್ರವಚನಗಳನ್ನು ನಡೆಸುತ್ತಿದ್ದರು. ಅವರ ಪ್ರವಚನಗಳು ಜೋರಾಗಿ ಧ್ವನಿವರ್ಧಕದ ಮೂಲಕ ಬಿತ್ತರವಾಗುತ್ತಿದ್ದು ದೊಡ್ಡ ದೇವಾಲಯಗಳಲ್ಲಿ ನಡೆಯುವ ಪೂಜೆ ಪುರಸ್ಕಾರಗಳಂತೆ ಅಲ್ಲಿಯ ವಾತಾವರಣವಿತ್ತು. ಕೆಳಗೆ ನಾವು ಹೋಗದೆ ಇದ್ದುದರಿಂದ, ಮೋಡ ಮುಸುಕಿದ್ದುದರಿಂದ ನಿರ್ದಿಷ್ಟವಾಗಿ ಅಲ್ಲಿ ಎಷ್ಟು ಜನ ಸೇರಿದ್ದಾರೆ ಎಂದು ಗ್ರಹಿಸಲು ಸಾಧ್ಯವಾಗಲಿಲ್ಲ. ಅಲ್ಲಿಗೆ ಬರುತ್ತಿದ್ದ ಬಜರಂಗದಳದ ಯುವಕರು ಪ್ರಚೋದನಾಕಾರಿ ಘೋಷಣೆಗಳನ್ನು ಕೂಗುತ್ತಿದ್ದರು. ಹಲವರ ಕೈಯಲ್ಲಿ ಕೇಸರಿಬಾವುಟ, ಒಂದಿಬ್ಬರ ಕೈಯಲ್ಲಿ ತ್ರಿಶೂಲ, ಪರುಶುರಾಮನ ಕೊಡಲಿ ಇತ್ಯಾದಿಗಳು ಕಂಡುಬಂದವು.

ವಿಪರೀತ ಚಳಿಯ ವಾತಾವರಣದಲ್ಲೂ ಸರಕಾರ ತೆಗೆದುಕೊಂಡ ಕಟ್ಟೆಚ್ಚರದ ಫಲವಾಗಿ ಪೋಲೀಸರು ಬಿಗಿಯಾದ ಬಂದೋಬಸ್ತ್ ಕಾರ್ಯನಿರ್ವಹಿಸುತ್ತಿದ್ದರು. ಅಲ್ಲಿ ಸೇರಿದವರಲ್ಲಿ ಹಲವರು ಅಲ್ಲಿಯ ಪರಿಸ್ಥಿತಿಯನ್ನು ನೇರವಾಗಿ ನೋಡಲು ಬಂದವರಾಗಿದ್ದರು. ಮಧ್ಯಾಹ್ನದ ವರೆಗೆ ಜನ ಹೆಚ್ಚಾಗಿ ಇಲ್ಲದೆ ಇದ್ದುದರಿಂದ ಶಾಲಾ ಕಾಲೇಜುಗಳಿಂದ ಯುವಕರನ್ನು ಎರಡು ಗಂಟೆಯ ವೇಳೆಗೆ ವಾಹನಗಳಲ್ಲಿ ಕರೆದು ತಂದದ್ದು ಕಾಣುತ್ತಿತ್ತು. ಬಜರಂಗ ದಳ ಎನ್ನಿಸಿಕೊಳ್ಳುವ ಯುವಕರು ಆಲ್ದೂರಿನಿಂದ ಹೆಚ್ಚಿನವರು ಬಂದಿದ್ದು ಕಾಣುತ್ತಿತ್ತು. ಬಾಬಾ ಬುಡನ್ ಗಿರಿಯ ತಪ್ಪಲಿನ ಜನ ಸಾಮಾನ್ಯರನ್ನು ನಾವು ಕಾಣಲಿಲ್ಲ. ಅವರಿಗೆ ಈ ಬಗ್ಗೆ ಆಸ... ಇರುವಂತೆ ಕಾಣುತ್ತಿರಲಿಲ್ಲ.

ನಾವು ಎರಡು ಗಂಟೆಯ ನಂತರ ಹಿಂದಿರುಗಿದೆವು. ಅನಂತರ ಅಲ್ಲಿ ಬಜರಂಗದಳದ ಕೆಲವು ಯುವಕರು ಮಾಣಿಕ್ಯಧಾರದ ಕಡೆ ಹೋಗುವ ಹಾದಿಯಗೋರಿಗಳನ್ನು ಧ್ವಂಸಮಾಡಲು ಪ್ರಯತ್ನಿಸಿದ್ದಾಗಿಯೂ, ಪೋಲೀಸರಿಗೂ ಬಜರಂಗದಳದವರಿಗೂ ಮಾತಿನ ಚಕಮಕಿ ಇತ್ಯಾದಿಯಿಂದ ಲಾಠಿ ಚಾರ್ಜ್ ಆಗಿ ಮೂರ್‍ನಾಲ್ಕು ಯುವಕರಿಗೆ ತೀವ್ರ ಪೆಟ್ಟಾಗಿ ಆಸ್ಪತ್ರೆಗೆ ಸೇರಿಸಲಾಗಿದೆಯೆಂದು ಸುದ್ದಿ ಬಂತು. ಅಲ್ಲಿ ಮುಸ್ಲಿಂರ ಹೋಟೆಲ್‌ನ ನಾಮಫಲಕ ಕಿತ್ತು ಹಾಕಿದ್ದಾರೆಂದು, ಬಾಬಾ ಬುಡನ್ ಗಿರಿಯ ಪ್ರವೇಶ ದ್ವಾರದಲ್ಲಿದ್ದ ನಾಮಫಲಕದ ಉರ್ದು ಅಕ್ಷರಗಳನ್ನು ಅಳಿಸಿಹಾಕುವ ಪ್ರಯತ್ನಗಳು ಬಜರಂಗ ದಳ... ಕಿಡಿಗೇಡಿಯುವಕರಿಂದ ನಡೆಯಿತೆಂದು ತಿಳಿಯಿತು.

ಗುಹೆಯ ಆವರಣದಲ್ಲಿ ಮಠಗಳ ಸ್ವಾಮಿಗಳು ಹೋಮ ನಡೆಸುತ್ತಿದ್ದರೆ ದರ್ಗಾದೊಳಗೆ ದತ್ತಾತ್ರೇಯನ ಪಾದುಕೆ ... ವಿಶ್ವ ಹಿಂದು ಪರಿಷತ್‌ನವರು ಇಡೀ ದಿನ ಭಜನೆ ಮಾಡಿದ... ಅಲಿ ದೇವಸ್ಥಾನದ ವಾತಾವರಣ ರೂಪಿಸಿದಾರೆ ಎಂಬ ಸು... ಇತ್ತು.

ಬಜರಂಗದಳದ ಹಾಗೂ ಸಂಘ ಪರಿವಾರದವರ ... ರೀತಿಯ ಅತಿಕ್ರಮಣ, ಪೂಜೆ, ಹೋಮ, ಪ್ರವಚನ, ... ಉದ್ಧಟತನದ ವರ್ತನೆಗಳು ಇಲ್ಲಿಯ ಮುಸ್... ಅಲ್ಪಸಂಖ್ಯಾತರ ಮನಸ್ಸಿಗೆ ವಿಪರೀತ ನೋವನ್ನುಂ... ಮಾಡಿದುದಲ್ಲದೆ, ಅವರಿಗೆ ಅಭದ್ರತೆ ಕಾಣ... ಆರಂಭವಾಗಿದೆ.

ದತ್ತಪೀಠದ ಧಾರ್ಮಿಕ ಸಭೆಯಲ್ಲಿ ಕೆಲವು ಸ್ವಾಮಿಗಳ... ಬಜರಂಗ ದಳ ಹಾಗೂ ಸಂಘ ಪರಿವಾರದ ಇತ... ಮುಖಂಡರುಗಳು ಅಲ್ಲದೆ ಬಿಜೆಪಿಯ ಸಂಸತ್ ... ಡಿ.ಸಿ.ಶ್ರೀಕಂಠಯ್ಯ ಪ್ರಚೋದನಾಕಾರಿ ಭಾಷಣ ಮಾಡಿದ... ಈಗಾಗಲೇ ಮಂದಿರ ಹಾಗೂ ದರ್ಗಾದ ಬಗ್ಗೆ ಅವ... ನೂರಾರು ವರ್ಷಗಳ ಹಿಂದಿನ ಸರಕಾರಿ ದಾಖಲೆಗಳ... ಸಂಗ್ರಹಿಸಿರುವುದಾಗಿಯೂ, ದತ್ತಾತ್ರೆಯಪೀಠ ಮಾತ್ರ ಬಾ... ಬುಡನ್‌ಗಿರಿಯಲ್ಲಿರು ವುದಾಗಿಯೂ, ಬಾಬಾ ಬುಡ... ದರ್ಗಾ ನಾಗೇನಹಳ್ಳಿಯಲ್ಲಿರುವ ಸರ್ವೆ ನಂ. 59 ರಲ್ಲಿ ಜ... ನಗರದಲ್ಲಿದೆಯೆಂದು ಅದಕ್ಕೆ ಬೇಕಾದ ದಾಖಲಾತಿ... ತಮ್ಮಲ್ಲಿವೆಯೆಂದು, ಆದ್ದರಿಂದ ಸರಕಾರ ಬರುವ ಅಕ್ಟೋಬ... ತಿಂಗಳೊಳಗೆ ದತ್ತ ಪೀಠವನ್ನು ಮುಸ್ಲಿಮರಿಂದ ವಿಮೋಚ... ಮಾಡಿಕೊಡದೆ ಇದ್ದರೆ ತಾವು ಅದನ್ನು ಮುಂದಿನ ... ಜಯಂತಿ ವೇಳೆ ವಿಮೋಚನೆ ಮಾಡುವುದಾಗಿ ಘೋಷ... ಮಾಡಿದ್ದಾರೆ.

ಸಂಘ ಪರಿವಾರದವರ ಈ ರೀತಿಯ ಕ್ರಮ ... ಅವರ ಪ್ರಚೋದನಾಕಾರಿ ಹೇಳಿಕೆಗಳು ಅವರು ಮುಂ... ದಿನಗಳಲ್ಲಿ ಇದನ್ನೊಂದು ಬಾಬ್ರಿ ಮಸೀದಿಯ ಧ್ವಂ... ರೀತಿಯಲ್ಲಿ ಧ್ವಂಸಮಾಡಿ ಹೆಸರು ಗಳಿಸಬೇಕೆ... ಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಇವರ ನಿರಂತರ ಪ್ರಚಾರದಿಂದ ಸಾಮಾನ್ಯ ಹಿ... ಯುವಕರನೇಕರಲ್ಲಿ ತಾವು ಈ ವಿಮೋಚನೆ ಕಾರ್ಯ... ಭಾಗವಹಿಸುವ ಸಾಹಸ ಮಾಡಬೇಕು ... ಮನೋಭಾವನೆ ಮೂಡುವುದು ಸಹಜ. ಸ್ಥಳೀಯ ಪತ್ರಿ... ಹೆಚ್ಚಾಗಿ ಸಂಘ ಪರಿವಾರದವರು ಅಥವಾ ... ಅನುಯಾಯಿಗಳ ಕೈಯಲ್ಲಿವೆ. ಹೀಗಾಗಿ ಅವರ ಹೇಳಿ... ಕಾರ್ಯಕ್ರಮಗಳಿಗೆ ಹೆಚ್ಚು ಮಹತ್ವ ಕೊಡುತ್ತಿದ್ದಾರೆ.

ಶಾಂತಿ ಜಲಪಾತಕ್ಕೆ ಸಾಗುವ ಹಾದಿಯ ಬಲಬದಿಗೆ ಕೆಲವೊಂದು ಗೋರಿಗಳು ನೆಲೆಗೊಂಡಿದ್ದು ದತ್ತಜಯಂತಿಯ ಹಿನ್ನೆಲೆಯಲ್ಲಿ ರಕ್ಷಣಾ ಕ್ರಮವಾಗಿ ಅಲ್ಲಿಯೂ ಕೂಡ ಬ್ಯಾರಿಕೇಡ್‌ಗಳನ್ನು ನಿರ್ಮಿಸಲಾಗಿತ್ತು. ಕೆಲವು ಬಜರಂಗದಳದ ಕಾರ್ಯಕರ್ತರು ಈ ಸ್ಥಳಕ್ಕೆ ಆಗಮಿಸಿದ್ದನ್ನು ಪೋಲೀಸ್ ಅಧಿಕಾರಿಯೋರ್ವರು ಪ್ರಶ್ನಿಸಿದಾಗ ಉದ್ಭವಗೊಂಡ ಮಾತಿನ ಚಕಮಕಿ ಲಘು ಲಾಠಿ ಪ್ರಹಾರಕ್ಕೆ ಎಡೆ ಮಾಡಿತು.

ಪೋಲೀಸರು ಮತ್ತು ಕಾರ್ಯಕರ್ತರ ನಡುವೆ ಚಕಮಕಿ ನಡೆದು ಈ ವಿಷಯವು ಬಜರಂಗ ದಳದ ಸಂಘಟನೆಗೆ ತಿಳಿದಾಗ ಕೋಪೋದ್ರಿಕ್ತರಾದ ಕೆಲವರು ಗೋರಿಗಳಿಗೆ ಹಾನಿಯುಂಟು ಮಾಡಲು ಮುಂದಾದರು. ನೂಗ್ಗಾಟದಿಂದ ಬ್ಯಾರಿಕೇಡ್‌ಗಳು ಕಿತ್ತುಬಂದವು: ಜಾಗೃತರಾದ ಪೋಲೀಸ್ ಸಿಬ್ಬಂದಿ ಲಘು ಲಾಠಿ ಪ್ರಹಾರ ನಡೆಸಿ ಗುಂಪನ್ನು ಚದುರಿಸಿತು...............

.............ದತ್ತಪೀಠದ ಮುಖ್ಯ ದ್ವಾರದ ಮುಂದೆ 3 ಭಾಷೆಗಳಲ್ಲಿ ಹಾಕಿರುವ ಫಲಕದಲ್ಲಿರುವ ಬಾಬಾ ಬುಡನ್ ದರ್ಗಾ ಹೆಸರನ್ನು ಅಳಿಸಲು ಕೆಲವು ಜನರು ಪ್ರಯತ್ನಿಸಿದರು........

..........ದತ್ತಪೀಠದ ಸಮೀಪದಲ್ಲಿರುವ ಮತೀಯ ಹೋಟೆಲೊಂದರ ನಾಮಫಲಕವನ್ನು ಕೆಲವರು ಹಾಳುಗೆಡವಲು ಯತ್ನ ನಡೆಸಿದ್ದು ಪೋಲೀಸರು ಅದನ್ನು ತಡೆಯಲು ಮುಂದಾದಾಗ ಉದ್ರಿಕ್ತರಾದ ಗುಂಪು ಪೋಲೀಸ್ ವಾಹನದ ಮೇಲೆ ಕಲ್ಲು ತೂರಿ ಗಾಜುಗಳನ್ನು ಜಖಂಗೊಳಿಸಿದ ಹಾಗೂ ಪೀಠದಿಂದ ಹಿಂದಿರುಗುವ ಮಾರ್ಗದಲ್ಲಿ ಕಾರೊಂದು ಹಿಂದೆ ಬರುವ ತಮ್ಮ ವಾಹನಗಳಿಗೆ ದಾರಿ ಕೊಡಲಿಲ್ಲವೆಂಬ ಕಾರಣಕ್ಕೆ ಕಾರಿನ ಮೇಲೆ ಕಲ್ಲು ತೂರಿ ಜಖಂಗೊಳಿಸಿದ ಘಟನೆಗಳೂ ನಡೆದವು.

- ಹೊಸದಿಗಂತ.



ದತ್ತ ಜಯಂತಿಯಂದು ಬಾಬಾಬುಡನ್‌ಗಿರಿಯಲ್ಲಿ ಉನ್ಮಾದ ಭಕ್ತ

ಬುಸಿರುವ ವಿಷ ನಾಗರ

ರ ಹಿಂದುಳಿದ ಮೇಲೆ ಆರೆಸ್ಸೆಸ್ ಎಂಬ ವಿಷ ಸರ್ಪ ಯಿತು. ಹಲವಾರು ವರ್ಷಗಳ ಕಾಲ ವರ್ಷಕ್ಕೆರಡು ರವಾಡಗಳಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ದಳ್ಳುರಿ ಹಬ್ಬಿಸುವ ಯತ್ನದಲ್ಲಿ ಬಾಬಾ ಬುಡನ್‌ಗಿರಿ, ತೆ. ಹೀಗೆ ಹಿಂದು - ಮುಸ್ಲಿಂ ಪ್ರಶ್ನೆಯನ್ನು ಸದಾ ದ್ದಾರೆ. ಇದಕ್ಕೆ ಪ್ರಾಥಮಿಕವಾಗಿ ಬೇಕಾಗುವ 'ಸುಳ್ಳು ನ್ನು ಸಾಬೀತು ಮಾಡುವ ಚಿಕ್ಕಮಗಳೂರು ಮತ್ತು


ವಿ.ಸುಕುಮಾರ್, ಚಿಕ್ಕಮಗಳೂರು

ಬಜರಂಗದಳ ಸಂಘಪರಿವಾರಗಳ ಮೆರವಣಿಗೆಗಳಲ್ಲಿ ಮುಂಚೂಣಿಯಲ್ಲಿದ್ದು ಬಹಿರಂಗ ಸಭೆಗಳಲ್ಲಿ ಮುಸ್ಲಿಂ ವಿರೋಧ ಮಾತನಾಡಿರುವುದರಿಂದ ಸರಕಾರ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು, ಅವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ಹಜ್ರತ್ ದಾದಾ ಹಯಾತ್ ಮೀರ್ ಖಲಂದರ್ ಬಾಬಾ ಬುಡನ್ ಹಿತರಕ್ಷಣಾ ಸಮಿತಿ ಮತ್ತು ಬಾಬಾ ಬುಡನ್ ವೆಲ್‌ಫೇರ್ ಅಸೋಸಿಯೇಷನ್ ಆಗ್ರಹಪಡಿಸಿ, ಬಹಿರಂಗ ವೇದಿಕೆಯಲ್ಲಿ ಸಂಘ ಪರಿವಾರದ ಮುಖಂಡರುಗಳು ಶಾಖಾದ್ರಿಯವರಿಗೆ ಕೊಲೆ ಬೆದರಿಕೆ ಹಾಕಿರುವುದರಿಂದ ರಾಜ್ಯ ಸರಕಾರ ಅವರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸುವ ಹೇಳಿಕೆ ನೀಡಿದ್ದಾರೆ. ಮುಸಲ್ಮಾನ್ ಭಾಂದವರ ತಾಳ್ಮೆಯನ್ನು ಅವರ ದೌರ್ಬಲ್ಯವೆಂದು ಭಾವಿಸಬಾರದೆಂದು, ಕೋಮು ಸೌಹಾರ್ದತೆಗೋಸ್ಕರ ಮುಸಲ್ಮಾನ ಬಾಂಧವರು ಸರ್ವತ್ಯಾಗಕ್ಕೂ ಸಿದ್ಧರಿದ್ದಾರೆಂದೂ, ಆದರೆ ಬಜರಂಗ ದಳದ ಗೂಂಡಾಗಿರಿ ಪ್ರವೃತ್ತಿಯನ್ನು ಸವಾಲಾಗಿ ಎದುರಿಸಲು ಸಿದ್ಧರಿರುವುದಾಗಿ ಎಚ್ಚರಿಸಿದ್ದಾರೆ.

ದತ್ತ ಜಯಂತಿಯ ಹಿನ್ನೆಲೆಯ ಘಟನೆಗಳಿಗೆ ಸಂಬಂಧ ಪಟ್ಟು ಇಲ್ಲಿಯ ಯಾವುದೇ ಪ್ರಮುಖ ರಾಜಕೀಯ ಪಕ್ಷಗಳು ಪ್ರತಿಕ್ರಿಯಸದೇ ಇದ್ದುದು ಆಶ್ಚರ್ಯ. ಸರಕಾರದಿಂದ ಮಂತ್ರಿಗಳು, ಕೋಮು ಸಾಮರಸ್ಯ ಕಾಪಾಡುವಂತೆ ಮನವಿ ಮಾಡಿ ಬಿಗಿ ಪೋಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದಾರೆ. ಸಿಪಿಐ(ಎಂ) ಪಕ್ಷದವತಿಯಿಂದ ಕೊಟ್ಟ ಹೇಳಿಕೆ ಕೆಲವು ಪತ್ರಿಕೆಗಳಲ್ಲಿ ಮಾತ್ರ ಪ್ರಕಟವಾದವು. ಇದರಿಂದ ಅಲ್ಪಸಂಖ್ಯಾತ ಮುಸಲ್ಮಾನ್ ಬಾಂಧವರಲ್ಲಿ ಅವರ ಜೊತೆ ಸಿಪಿಐ(ಎಂ) ಪಕ್ಷ ಮಾತ್ರ ಇದೆ ಎಂದು ಅಲ್ಪಸ್ವಲ್ಪ ಮನವರಿಕೆ ಬಂದಿದೆ.

ಇಷ್ಟೆಲ್ಲಾ ಗಂಭೀರವಾದ ಬೆಳವಣಿಗೆಗಳು ನಡೆಯುತ್ತಿರುವಾಗ ಕಾಂಗ್ರೆಸ್, ಜನತಾದಳ(ಸಂ), ಜನತಾದಳ(ಎಸ್) ಮತ್ತು ಇತರೆ ಪಕ್ಷಗಳು ಪ್ರತಿಕ್ರಿಯಿಸದೇ ಇರುವುದು. ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕವು ಕೋಮುವಾದಿಗಳ ತಾಣ ಆಗಬಾರದೆಂದು ರಾಜ್ಯದ ಜನತೆ, ಅದರಲ್ಲೂ ಅಲ್ಪಸಂಖ್ಯಾತರು ಕಾಂಗ್ರೆಸ್‌ಗೆ ಮತ ನೀಡಿ ಧರ್ಮನಿರಪೇಕ್ಷತೆಗೆ ಬೆಂಬಲಿಸಿದ್ದಾರೆ. ಇಂತಹ ಜನರ ಮತ ಪಡೆದು ಅಧಿಕಾರಕ್ಕೇರಿರುವ ಕಾಂಗ್ರೆಸ್ ಪಕ್ಷ ಒಂದು ರಾಜಕೀಯ ಪಕ್ಷವಾಗಿ, ಧರ್ಮನಿರಪೇಕ್ಷತೆಗೆ ಗಂಡಾಂತರ ಉಂಟಾಗುತ್ತಿರುವಾಗ ಬಾಯಿಮುಚ್ಚಿ ಕುಳಿತಿರುವುದೇಕೆ? ಕೇವಲ ಪೋಲೀಸ್ ಪಹರೆ ಹಾಕಿ ಈ ಸಮಸ್ಯೆ ಕೇವಲ ಕಾನೂನು-ಸುವ್ಯವಸ್ಥೆ ವಿಷಯವನ್ನಾಗಿ ಪರಿಗಣಿಸಿದ್ದಾರಾ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕೋಮುವಾದಿಗಳ ಅಟ್ಟಹಾಸ ಮುಂದುವರಿಸಲು ಬಿಡುವುದು, ಮತದಾರರ ಮಾತ್ರವಲ್ಲ ರಾಜ್ಯದ ದೇಶದ ಐಕ್ಯತೆಗೆ ಬಗೆದ ದ್ರೋಹವಾಗುತ್ತದೆ ಎಂಬುದನ್ನು ಅರಿಯಬೇಕು.

ಈ ಘಟನೆಗಳ ಪ್ರತಿಹಂತದಲ್ಲಿಯೂ ಸಿಪಿಐ(ಎಂ) ಪಕ್ಷವ ಸ್ಪಷ್ಟ ನಿಲುವು ತಳೆದಿದೆ. ಮಧ್ಯ ಪ್ರವೇಶಮಾಡಿದೆ. ಕೋಮು ಸೌಹಾರ್ದತೆಯ ಪರಂಪರೆ ಎತ್ತಿಹಿಡಿದ ಸಿಪಿಐ(ಎಂ)ನ ಪತ್ರಿಕಾ ಹೇಳಿಕೆಗಳನ್ನು ಬಹಳಷ್ಟು ಪತ್ರಿಕೆಗಳು ಪ್ರಕಟಿಸಿಲ್ಲ. ಸ್ಥಳೀಯವಾದ ಕೆಲವು ಪತ್ರಿಕೆಗಳು(ಒಂದೆರಡು ಬಿಟ್ಟರೆ) 'ಖಾಕಿ'ವೀರರ ಮುಖವಾಣಿಗಳಂತೆ ಆಡುತ್ತಿವೆ. ಆದಾಗ್ಯೂ ಸಿಪಿಐ(ಎಂ)ನ ನಿಲುವು ಎಲ್ಲಾ ವಿಭಾಗಗಳ ಧರ್ಮನಿರಪೇಕ್ಷ, ಶಾಂತಿ ಸಹನಶೀಲ ಜನತೆಯ ಮೆಚ್ಚುಗೆಗೆ ಪಾತ್ರವಾಗಿದೆ. ಮುಖ್ಯವಾಗಿ ಅಲ್ಪಸಂಖ್ಯಾತರಲ್ಲಿ ಸಿಪಿಐ(ಎಂ) ಬಗ್ಗೆ ಮೆಚ್ಚಿಗೆಯ ಭಾವ ಮೂಡುತ್ತಿದೆ.



ಉನ್ಮತ್ತ ಕಾವಿ ಪಡೆಗಳು

ವಿವಾದ ಬಗೆಹರಿಸಲು ಗಡುವು

ಮುಂದಿನ ಅಕ್ಟೋಬರ್ ತಿಂಗಳೊಳಗೆ ದತ್ತಪೀಠದ ವಿವಾದ ಬಗೆಹರಿಸದಿದ್ದಲ್ಲಿ ಅಯೋಧ್ಯ ಬಾಬರಿ ಮಸೀದಿ ಮಾದರಿಯಲ್ಲಿ ವಿವಾದಕ್ಕೆ ತೆರೆ ಎಳೆಯಬೇಕಾಗುತ್ತದೆಂದು ಭಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ ಮುಖಂಡರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

.... ಪೋಲೀಸರ ಗುಂಡು ಲಾಠಿಗೆ ಹಿಂದುಗಳು ಅಂಜುವುದಿಲ್ಲ, ಮುಂದಿನ ದತ್ತ ಜಯಂತಿ ಶಾಂತಿಯುತವಾಗಿ ನಡೆಯುವುದಿಲ್ಲ, ಬೇರೆ ರೀತಿಯಲ್ಲೆ ನಡೆಸಬೇಕಾದಿತೆಂದು ತಿಳಿಸಿ ಇದು ಸರ್ಕಾರಕ್ಕೆ ಅಂತಿಮ ಅವಕಾಶವೆಂದು ಹೇಳಿದರು. ಇನ್ನೂ ನಮ್ಮ ತಾಳ್ಮೆ ಸಹಿಸುವುದು ಬೇಡ ಸೆಕ್ಯೂಲರ್ ಹೆಸರಿನಲ್ಲಿ ಹಿಂದೂಗಳ ತಲೆಗಳ ಮೇಲೆ ಚಪ್ಪಡಿ ಎಳೆಯುವುದಕ್ಕೆ ನಾವೆಂದು ಬಿಡುವುದಿಲ್ಲವೆಂದು ತಿಳಿಸಿದ ಜಗದೀಶ್ ಸೆಕ್ಯುಲರ್ ರಾಜಕಾರಣದಿಂದ ಈ ದೇಶ ರಕ್ಷಿಸಬೇಕೆಂದರು.

\- ಜನಮಿತ್ರ

ಬೀದರ ಹನುಮಾನ ಮೂರ್ತಿಗೆ ಬೂದಿ ಬಳಿದ ಪ್ರಕರಣ

ಕೋಮುವಾದಿಗಳ ಅಟ್ಟಹಾಸ

ಎಂ.ಎಸ್.ಮನೋಹರ, ಬೀದರ

ಡಿಸೆಂಬರ್ 19, 1999 ರಂದು ರಾತ್ರಿಯಲ್ಲಿ ಬೀದರ ನಗರದ ಜನವಾಡ ರಸ್ತೆಯಲ್ಲಿರುವ ಹನುಮಾನ ಮೂರ್ತಿಯ ಮೇಲೆ ಬೂದಿ ಎರಚಿ ಅಲ್ಲಿದ್ದ ಮೂರು ನಾಲ್ಕು ಫೋಟೋಗಳನ್ನು ಒಡೆದು ಹಾಕಿದ್ದು, ಮಾರನೆ ದಿನ ಮುಂಜಾನೆ ದೇವಸ್ಥಾನದ ಪೂಜಾರಿ ನೋಡಿದ ನಂತರ ಸಾರ್ವಜನಿಕರು ಜಿಲ್ಲಾ ರಕ್ಷಣಾಧಿಕಾರಿ, ಜಿಲ್ಲಾಧಿಕಾರಿ, ಶಾಸಕ ರಮೇಶ್ ಕುಮಾರ ಪಾಂಡೆ ಮತ್ತು ಹಿಂದು ಜಾಗರಣ ವೇದಿಕೆಯ ವಿಭಾಗೀಯ ಸಂಚಾಲಕ ಈಶ್ವರ ಸಿಂಗ ಠಾಕೋರ ಮತ್ತು ಕೆಲವು ಪತ್ರಕರ್ತರು ಘಟನಾ ಸ್ಥಳದಲ್ಲಿ ಹಾಜರಾಗಿ ಘಟನೆಯ ಬಗ್ಗೆ ಪರಿಶೀಲಿಸಿದರು. ನಂತರ ಅಂದೇ ಸುಮಾರು10 ಗಂಟೆಗೆ ನೂರಾರು ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಡಾ ಅಂಬೇಡ್ಕರ್ ಸರ್ಕಲ್ ಹತ್ತಿರ ರಸ್ತೆ ತಡೆ ನಡೆಸಿದಾಗ ಪೋಲೀಸರು ಅವರನ್ನು ಬಂಧಿಸಿದರು. ಅಂದು ಹಿಂದೂ ಜಾಗರಣಾವೇದಿಕೆಯ ಮುಖಾಂತರ ಬೀದರ್ ಬಂದ್ ನಡೆಸಿದರೂ ಈ ಬಂದ್ ಆಚರಣೆಯ ದಿವ 144 ಕಲಂ ಜಾರಿಗೊಳಿಸಲಾಗಿತ್ತು. ಆದರೆ ವೇದಿಕೆಯ ಮುಖಂಡರು ಕಾನೂನನ್ನು ಉಲ್ಲಂಘಿಸಿ ಬೀದರ ಬಂದ್ ಆಚರಣೆ ಮಾಡುವಾಗ ಜಾತಿ ನಿಂದನೆ ಮಾಡಿ ಮುಸ್ಲಿಂ ಜನಾಂಗದ ವಿರುದ್ಧ ಹಿಂದುಗಳನ್ನು ಎತ್ತಿಕಟ್ಟಿ ಬೀದರ ನಗರದ ಶಾಂತಿಯನ್ನು ಅಶಾಂತಿಗೊಳಿಸಿದರು. ಮತ್ತು ಮುಸ್ಲಿಂ ಅಂಗಡಿಗಳನ್ನು ಒತ್ತಾಯಪೂರ್ವಕವಾಗಿ ಬಂದ್ ಮಾಡುವಾಗ ಹಿಂದು ಮುಸ್ಲಿಂ ವಿದ್ಯಾರ್ಥಿಯ ಮಧ್ಯೆ ಮಾತಿಗೆ ಮಾತು ಬೆಳೆಸಿ ಗಲಾಟೆ ಮಾಡಲಾಯಿತು. ಈ ವಿಷಯವನ್ನುದೊಡ್ಡದು ಮಾಡಿ ನೂರಾರು ಹಿಂದು ಯುವಕರು ಮಾರಕ ಅಸ್ತ್ರಗಳನ್ನು ಹಿಡಿದು ಮುಸ್ಲಿಂ ಅಂಗಡಿಗಳ ಮೇಲೆ ಕಲ್ಲೂ ತೂರಾಟ ಮಾಡಿದರು ಮತ್ತು ಸಣ್ಣಪುಟ್ಟ ಪಾನಶಾಪಗಳು ನೆಲಕ್ಕೆ ಉರುಳಿಸಿದರು, ಸರಕಾರಿ ಮತ್ತು ಖಾಸಗೀ ವಾಹನಗಳಿಗೆ ಕಲ್ಲು ತೂರಾಟ ನಡೆಸಿ ಉದ್ದಕ್ಕೂ ಮುಸ್ಲಿಂವಿರೋಧಿ ಘೋಷಣೆಗಳನ್ನು ಹಾಕಿದರು ಅಲ್ಲದೆ ಮುಸ್ಲಿಂ ಗೋರಿಗಳ ಮೇಲೆ ಕಲ್ಲು ತೂರಾಟ ನಡೆಸಿದರು. ಇದು ಒಂದು ರೀತಿಯ 1992 ರ ಅಯೋಧ್ಯಾ ಘಟನೆ ಪುನರಾವರ್ತಿಸಿದಂತೆ ಇತ್ತು. ಇಷ್ಟೆಲ್ಲಾ ಆದರೂ ಕೂಡಾ ಪೋಲೀಸ್ ಅಧಿಕಾರಿಗಳು ಅದನ್ನು ನೋಡುತ್ತಾ ಮೂಕ ಪ್ರೇಕ್ಷಕರಾಗಿ ಕುಳಿತಿದ್ದರು. ಈ ಒಂದು ಬಂದ್ ಆಚರಣೆಯಿಂದ ಬೀದರ್ ನಗರದಲ್ಲಿ ಅಲ್ಪಸಂಖ್ಯಾತರಲ್ಲಿ ಮತ್ತು ದಲಿತರಲ್ಲಿ ಭಯದ ವಾತಾವರಣ ನಿರ್ಮಾಣವಾಗಿತ್ತು. ಮತ್ತು ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಮುಸ್ಲಿಂ ಜನರ ಮಧ್ಯೆ ಪ್ರಚೋದನೆ ನೀಡಿ ಬೀದರನಲ್ಲಿ ಶಾಂತಿ ಕದಡುವುದಕ್ಕಾಗಿ ಪ್ರಯತ್ನಿಸಿದರು. ಆದರೆ ಇದನ್ನು ಕೂಡಲೇ ಜಿಲ್ಲಾ ಆಡಳಿತ ಮನಗಂಡು ಸಂಜೆ 5 ಗಂಟೆಗೆ ಜಿಲ್ಲಾ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಶಾಂತಿ ಸಭೆಯನ್ನು ಕರೆದು ವಾತಾವರಣ ತಿಳಿಗೊಳಿಸಿ ಬಂದ್ ಕಾಲದಲ್ಲಿ ಹಾನಿಗೊಳಗಾದ ಅಂಗಡಿಗಳ ಮಾಲಿಕರಿಗೆ ಪರಿಹಾರ, ಪ್ರತಿಯೊಬ್ಬರಿಗೂ 500 ರಿಂದ 1000 ರೂ.ಗಳವರೆಗೆ ಪರಿಹಾರ ನೀಡಿದರು.

ಘಟನೆ ಹಿನ್ನೆಲೆ

1994 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬೀದರ್ ಮತಕ್ಷೇತ್ರಕ್ಕೆ ಬಿ.ಎಸ್.ಪಿ. ಅಭ್ಯರ್ಥಿ ಜುಲ್ಫಿಕರ್ ಹಷ್ಮಿಯವರು ಆಯ್ಕೆಯಾಗಿದ್ದರು. ಇವರು ಕಳೆದ ಎರಡು ವರ್ಷಗಳ ಹಿಂದೆ ಮುಸ್ಲಿಂ ವಿದ್ಯಾರ್ಥಿಗಳ ಒಂದು ಪೋಲಿ ಗ್ಯಾಂಗ್ ತಂಡ ಹುಟ್ಟು ಹಾಕಿ ಹಿಂದುಗಳ ವಿರುದ್ಧ ಎತ್ತಿಕಟ್ಟುತ್ತಿದ್ದರು. ಮತ್ತು ಕೆಲವು ಕಡೆ ಹಿಂದು ಮತ್ತು ಮುಸ್ಲಿಂ ಗುಂಪುಗಳ ಮಧ್ಯೆ ಚಿಕ್ಕಪುಟ್ಟ ಘಟನೆಗಳು ಕೂಡಾ ನಡೆದಿದ್ದವು. ಅಲ್ಲದೆ ಕಳೆದ ವರ್ಷ ಬೀದರ ನಗರದ ಈದ್ಗಾ ಹತ್ತಿರ ಇರುವ ನಾಯಕ ಮಕ್ಬಾಬರ ಸ್ಥಳವು ವಕ್ಫ್ ಬೋರ್ಡ್ ಅಧೀನಕ್ಕೆ ಒಳಪಟ್ಟಿತು. ಈ ಸ್ಥಳವನ್ನು ರಾಷ್ಟ್ರೀಯ ಸ್ಮಾರಕ ಮಾಡಬೇಕೆಂದು ಈಗ ಹುಮನಾಬಾದ್ ಶಾಸಕರಾದ ... ಸ್ಪಂದಿಸಲಿಲ್ಲ.

ಇಂತಹ ಘಟನೆಗಳನ್ನು ಹುಟ್ಟು ಹಾಕಿ ಹಿಂದು ಮುಸ್ಲಿಂರ ಮಧ್ಯೆ ಒಡಕನ್ನು ಉಂಟುಮಾಡಲು ಕೋಮುವಾದಿಗಳು ನಿರಂತರ ಪ್ರಯತ್ನ ಪಟ್ಟರು. ಆದರೆ ಅದಕ್ಕೆ ಜನತೆ ಗಮನ ನೀಡಲಿಲ್ಲ.

ಈ ಎಲ್ಲಾ ಕೋಮುವಾದಿ ಅಟ್ಟಹಾಸಗಳನ್ನು ನೋಡಿದರೂ ನೋಡದಂತೆ ಇರುವ ಕಾಂಗ್ರೆಸ್ ಮತ್ತು ಜನತಾದಳ ತಮ್ಮ ಅಂತರಿಕ ಕಚ್ಚಾಟದಲ್ಲಿ ಮುಳುಗಿ ಒಂದು ಗುಂಪು ಬಿಜೆಪಿಯನ್ನು ಬೆಂಬಲಿಸಿ ಇಡೀ ಬೀದರ ಜಿಲ್ಲೆ ಕೋಮುವಾದಿಗಳ ಕೈಯಲ್ಲಿ ಹೋಗಲು ಸಾಧ್ಯವಾಗಿದೆ. ಹಿಂದೆ ಜನತಾದಳ ಅಧಿಕಾರದಲ್ಲಿ ಇದ್ದಾಗ ಜಿಲ್ಲೆಯ ಇಬ್ಬರು ಮಂತ್ರಿಗಳು ಆಗಿದ್ದರೂ ಅವರು ಬೀದರಜಿಲ್ಲೆಯ ಅಭಿವೃದ್ಧಿಗೆ ಗಮನ ನೀಡಲಿಲ್ಲ. ಅವರ ಭಿನ್ನಾಭಿಪ್ರಾಯ ಒಂದು ಜನತಾದಳ ಒಡೆದು ಲೋಕಶಕ್ತಿಯ ನಿರ್ಮೂಲನ ಆಗಿ ಬಿಜೆಪಿಯ ಜತೆಗೊಂದು ಗುಂಪು ಹೋಗಿದ್ದರಿಂದ ಮತ್ತು ಜಿಲ್ಲಾ ಕಾಂಗ್ರೆಸಿನ ಅಂತರಿಕ ಕಚ್ಚಾಟದಿಂದ ಭೀಮಣ್ಣ ಖಂಡ್ರೆಯವರ ಗುಂಪು ಬಹಿರಂಗವಾಗಿ ಬಿಜೆಪಿಗೆ ಬೆಂಬಲಿಸಿ ಈ ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ಸಹಾಯ ಮಾಡಿತು.

ಐದು ಕ್ಷೇತ್ರಗಳಲ್ಲಿ ಬಿಜೆಪಿ ಶಾಸಕರು ಆಯ್ಕೆಯಾದಂದಿನಿಂದ ಕೋಮುವಾದಿಗಳಿಗೆ ಇನ್ನಷ್ಟು ಶಕ್ತಿ ಬಂದಂತಾಗಿದೆ. ಈ ಹಿನ್ನಲೆಯಲ್ಲಿ ಹುಮನಾಬಾದಿನ ಮುಗನೂರ ಗ್ರಾಮದಲ್ಲಿ ಡಿಸೆಂಬರ್ 6 ರಂದು ಅಂಬೇಡ್ಕರ್ ಮೂರ್ತಿಗೆ ಅಪಮಾನ ಮಾಡಿದ್ದು, ಬೀದರ ನಗರದ ಹನುಮಾನ ಮೂರ್ತಿಯ ಮೇಲೆ ಬೂದಿ ಎರಚಿ ಅಪಮಾನ ಮಾಡಲಾಯಿತು.

ಈ ಘಟನೆ ನಡೆದ ಹಿಂದಿನ ದಿನವೇ ಬೀದರ ನಗರದ ... ಒಳಸಂಚನ್ನು ಮಾಡಿ ಈ ಗಲಭೆಯನ್ನು ಅವರೇ ಹುಟ್ಟುಹಾಕಿ ಇದೇ ವೇದಿಕೆಯವರು ಬೀದರ ಬಂದ್ ಆಚರಣೆ ಮಾಡಿದರು. ಈ ಬಂದ್‌ಗೆ ಎಸ್.ಪಿ.ಯಾದ ಆರ್.ಪಿ.ಶರ್ಮ ಕೂಡಾ ತನ್ನ ಹಿಂಬಾಗಿಲಿನಿಂದ ಬೆಂಬಲಿಸಿದ್ದಾರೆ. ಈ ಬಂದ್ ಆಚರಣೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ದಲಿತ ಸಂಘರ್ಷ ಸಮಿತಿ ತೀವ್ರವಾಗಿ ವಿರೋಧಿಸಿದರು.

ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯಿಂದ ಜಿಲ್ಲೆಯ ಜನತೆಗೆ ಕಾಡುತಿರುವ ತೊಗರಿ ಬೆಳೆ, ಕಬ್ಬಿನ ಸಮಸ್ಯೆಗಳ ಕುರಿತು ಕರ್ನಾಟಕ ಪ್ರಾಂತ ರೈತ ಸಂಘ ಚಳುವಳಿ ಕೈಗೆತ್ತಿಕೊಂಡು ಹೋರಾಟ ಮಾಡುತ್ತಿದೆ. ಈ ಹೋರಾಟದಿಂದ ಹೋದವರ್ಷದ ಬಾಕಿ ಕಬ್ಬಿನ ಹಣವನ್ನು ಮಹಾರಾಷ್ಟ್ರದಿಂದ ಬರಬೇಕಾದ ಹಣದಲ್ಲಿ ಪ್ರತಿಟನ್ನಿಗೆ 40 ರೂ. ಬಂದಿದೆ. ಬಿ.ಎಸ್‌ಎಸ್.ಕೆ.ಕಾರಖಾಯಲ್ಲಿ ಪ್ರತಿಟನ್ನಿಗೆ 600 ರೂ. ಕೊಡುವಂತೆ ಆಗಿದೆ. ಇಂತಹ ಒಂದು ಜನಪರ ಚಳುವಳಿ ಜಿಲ್ಲೆಯಲ್ಲಿ ನಡೆಯುತ್ತಿರುವಾಗ ಬಿಜೆಪಿಯವರು ಜನರ ಮನಸ್ಸನ್ನು ಬೇರೆ ಕಡೆಗೆ ಸೆಳೆಯಲು ಮತ್ತು ಜಿಲ್ಲೆಯ ಜನಪರ ಹೋರಾಟಗಳನ್ನು ಮುರಿಯಲು ಕಾರ್ಯತಂತ್ರಗಳನ್ನು ರೂಪಿಸಿ ಇಂತಹ ಕೋಮುವಾದವನ್ನು ಹುಟ್ಟು ಹಾಕಿದ್ದಾರೆ.

ಈ ಹನುಮಾನ ಘಟನೆ ಕುರಿತು ಪೋಲೀಸರು ಆ ದೇವಸ್ಥಾನದ ಪಕ್ಕದಲ್ಲಿರುವ ಒಬ್ಬ ಸುಡುಗಾಡು ಸಿದ್ಧನ್ನು ಬಂಧಿಸಿದ್ದಾರೆ. ಇವರು ಮಾಟ ಮಂತ್ರ ಮಾಡುವ ವ್ಯಕ್ತಿ. ಸ್ಮಶಾನದಲ್ಲಿನ ಭೂದಿಯನ್ನು ಹನುಮನ ಮೇಲೆ ಮಧ್ಯರಾತ್ರಿ ಹಾಕಿದರೆ ಅವರ ಮಂತ್ರಕ್ಕೆ ಸಹಾಯ ಮಾಡುತ್ತಾನೆ ಎಂಬ ಕತೆ ಕಟ್ಟಿ ಆ ವ್ಯಕ್ತಿಯನ್ನು ಬಂಧಿಸಲಾಗಿದೆ.

ದಿನಾಂಕ 29.12.99 ರಂದು ಉತ್ತರ ಕರ್ನಾಟಕದ ಪತ್ರಿಕೆಯ ಸಂಪಾದಕರಾದ ಶಿವಶರಣಪ್ಪ ವಾಲಿಯವರ ನೇತೃತ್ವದಲ್ಲಿ ಸುಡುಗಾಡು ಸಿದ್ಧರ ಮೆರವಣಿಗೆ ಮಾಡಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಈ ಮನವಿಯಲ್ಲಿ ಪೋಲೀಸರು ನಿಜವಾದ ವ್ಯಕ್ತಿಯನ್ನು ಹಿಡಿಯದೆ ತನ್ನ ಅಸಮರ್ಥತೆಯನ್ನು ಮುಚ್ಚಿಕೊಳ್ಳಲು ಯಾವುದೋ ಒಂದು ಸುಳ್ಳು ಕತೆ ಕಟ್ಟಿ ಈ ವ್ಯಕ್ತಿಯನ್ನು ಬಂಧಿಸಿದ್ದಾರೆ. ಇವನನ್ನು ಕೂಡಲೇ ಬಿಡುಗಡೆ ಮಾಡಬೇಕು, ...

ಕೃಷ್ಣಾ ಕಣಿವೆಯ ನೋವು-ಸಂಕಟ

ಕೃಷ್ಣಾ ಕಣಿವೆಯ ರೈತರ ಜಾಥಾ ಮತ್ತು ಸಮಾವೇಶದ ಒಂದು ವರದಿ

ಅಣ್ಣಾರಾಯ ಈಳಿಗೇರ

ಆಲಮಟ್ಟಿಯ ಆಣೆಕಟ್ಟಿನ ಎತ್ತರ ಹೆಚ್ಚಿಸಬಾರದೆಂಬ ಹಾಗೂ ಅದು ಐದನೂರ ಹನ್ನೆರಡು ಮೀಟರ್ ಎತ್ತರಕ್ಕೆ ಮಾತ್ರ ಸೀಮಿತಗೊಳಿಸಬೇಕೆಂದು ಕೇಂದ್ರದ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರದ ಪ್ರಧಾನಿ ವಾಜಪೇಯಿಯವರು ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಸಲ್ಲಿಸಿದ್ದಾರೆ.

ಬಚಾವತ್ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಕೃಷ್ಣ ನೀರಾವರಿ ಯೋಜನೆಯಲ್ಲಿ 173 ಟಿ.ಎಂ.ಸಿ. ನೀರು ಬಳಸಿಕೊಳ್ಳಲು ಕರ್ನಾಟಕ ಸರಕಾರವು ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು ಈಗಾಗಲೇ ಐದುನೂರ ಹತ್ತೊಂಬತ್ತು ಮೀಟರದ ಗೋಡೆ ನಿರ್ಮಿಸಿದ್ದಾರೆ. ಇದರಲ್ಲಿ ತಡೆ ಹಿಡಿಯುವ ನೀರು ಕೃಷಿಗೆ ಬಳಸಿಕೊಳ್ಳಲು ಹಾಗೂ ಇನ್ನೂ ಐದು ಮೀಟರದ ನೀರು ವಿದ್ಯುತ್ ಉತ್ಪಾದನೆಗೆ ಎಂದು ಆಣೆಕಟ್ಟಿನ ಎತ್ತರ ನಿರ್ಮಾಣವಾಗಿದೆ. ಒಟ್ಟು 524 ಮೀಟರ್ ಎತ್ತರದಷ್ಟು ಪೂರ್ಣಗೊಂಡಿದ್ದು ಕೃಷ್ಣ ಗೇಟಿಗೆ ಪ್ಲೇಟುಗಳನ್ನು ಅಳವಡಿಸುವುದು ಬಾಕಿ ಉಳಿದಿದೆ. ವಿದ್ಯುತ್ ಉತ್ಪಾದನೆಗೆ ಎಂದು ನಿರ್ಮಾಣವಾಗಿರುವ 5 ಮೀಟರ್ ಎತ್ತರವು ಆಂಧ್ರ, ಕರ್ನಾಟಕ ರಾಜ್ಯಗಳ ನೀರು ಹಂಚಿಕೆಯ ಒಪ್ಪಂದಕ್ಕೆ ವಿವಾದಕ್ಕೆ ಎಡೆಯಾಗಿದೆ. ಹಾಗೂ ಆಂಧ್ರ ಸರ್ಕಾರ 509 ಮಿ. ಸೀಮಿತ ಇರಬೇಕೆಂದು ಬಯಸಿದೆ. ಎರಡು ರಾಜ್ಯಗಳು ಪರಸ್ಪರ ಮಾತುಕತೆಗಳ ಮುಖಾಂತರ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಲು ಸಾಧ್ಯವಿದ್ದರೂ ಆಂಧ್ರದ ತೆಲುಗುದೇಶಂ ಪಕ್ಷದ ಸಂಕುಚಿತ ರಾಜಕೀಯದ ಒತ್ತಡದಿಂದಾಗಿ ಕೇದ್ರ ವಾಜಪೇಯಿ ಸರಕಾರವು ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಸಲ್ಲಿಸಿ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ ಮಾಡಿದ್ದಾರೆ.

ಕಾಂಗ್ರೆಸ್ ಜನತಾದಳದ ಮುಖಂಡರುಗಳು ನಾವೂ ಇದನ್ನು ಸಹಿಸುವುದಿಲ್ಲ ಎಲ್ಲವೂ ತೆಲುಗುದೇಶಂನ ತಪ್ಪು ಎಂಬಂತೆ ಬಯಲಾಟದ ತರಹ ಡೈಲಾಗ್ ಹೊಡೆಯಲು ಪ್ರಾರಂಭಿಸಿದ್ದಾರೆ. ನಮ್ಮದು ಏನು ತಪ್ಪು ಇಲ್ಲವೆಂಬಂತೆ.

ಈ ಆಷಾಢಭೂತಿಗಳು ಹೀರೋ ಪೋಜು ನೀಡುತ್ತಾ ಕರ್ನಾಟಕದ ಉದ್ದಗಲಕ್ಕೂ ಹಾರಾಡುತ್ತಿದ್ದಾರೆ. 1964 ರಲ್ಲಿಯೇ ಕಾಂ. ಎನ್.ಕೆ.ಉಪಾಧ್ಯಾಯ ನೇತೃತ್ವದಲ್ಲಿ ಕಮ್ಯುನಿಸ್ಟ್ ಪಕ್ಷ ಹಾಗೂ ಸ್ವಾತಂತ್ರ್ಯ ಯೋಧರ ಹೋರಾಟದಿಂದಾಗಿ ಈ ಆಣೆಕಟ್ಟು ನಿರ್ಮಾಣಗೊಂಡಿತ್ತು. ಈ ಆಲಮಟ್ಟಿ ಆಣೆಕಟ್ಟು 2000 ಇಸ್ವಿ ಮೇ ರಷ್ಟೊತ್ತಿಗೆ ಕೆಲಸ ಮುಗಿಯಬೇಕು, ಆದರೆ ಇನ್ನೂವರೆಗೆ ಪೂರ್ತಿಗೊಂಡಿಲ್ಲ. ಬೂರ್ಜ್ವಾ ಪಕ್ಷಗಳಾದ ಜನತಾ(ಪಕ್ಷ)ದಳ, 12ವರ್ಷದ ಅಧಿಕಾರ ಬಿಟ್ಟರೆ ಹೆಚ್ಚಿನ ಅವಧಿಗೆ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿ ಇತ್ತು. ಆಗ ಕಾಲಹರಣ ಮಾಡಿದ ಈ ಎರಡು ಪಕ್ಷಗಳು ದೃಢವಾದ ರಾಜಕೀಯ ಇಚ್ಛಾ ಶಕ್ತಿ ಇಲ್ಲದೆ ಇರುವುದರಿಂದ ಹಾಗೂ ಅರೆ ಪಾಳೆಗಾರಿ, ಭೂಮಾಲಿಕ ವರ್ಗಗಳ ಒತ್ತಡದಿಂದ ~~ಈ ಯೋಜನೆಯ ಕೆಲಸಗಳು ಆಮೆಗತಿಯಿಂದ ಸಾಗಿ ಈ~~ ವಿವಾದ ಹುಟ್ಟು ಹಾಕುವಲ್ಲಿ ಕಾರಣೀಭೂತವಾಗಿವೆ. ಸರ್ವಪಕ್ಷಗಳ ಸಭೆ ಕರೆದು ಮೆರವಣಿಗೆ, ಬಂದ್ ಮುಂತಾದ ಹೋರಾಟಗಳನ್ನು ಮಾಡಿದರೂ ತಮ್ಮದೇನು ತಪ್ಪು ಇಲ್ಲ ಎಂಬಂತೆ ಬಿಜೆಪಿಯವರು ಭಂಡತನ ಮೆರೆದರು.

ತಾವು ಅಧಿಕಾರದಲ್ಲಿದ್ದಾಗ ದೈತ್ಯ ಗುತ್ತಿಗೆದಾರರ ಹಾಗೂ ಭ್ರಷ್ಟ ಇಂಜಿನಿಯರುಗಳ ಜೊತೆಗೆ ಶಾಮೀಲಾಗಿ ಕೃಷ್ಣ ನೀರಾವರಿ ಯೋಜನೆಯಲ್ಲಿ ಕೋಟಿ, ಕೋಟಿ ಹಣದ ರಾಶಿ ಮಾಡಿಕೊಂಡು ಕೊಬ್ಬಿದ ಇವರು ಕಾಲುವೆಗಳಲ್ಲಿ ಕೃಷ್ಣೆಯ ನೀರು ಹರಿಸುವ ಬದಲು ಭ್ರಷ್ಟಾಚಾರದ ಹಣದ ಹೊಳೆಯ ಹರಿಸಿದ್ದಾರೆ. ತಮ್ಮ ಹಿತರಕ್ಷಣೆಗಾಗಿ ಈ ಭಾಗದ ಅರೆಪಾಳೆಗಾರರು, ಭೂಮಾಲಕರು ನೀರಾವರಿ ಯೋಜನೆಯ ಜಾರಿಗೆ ಆಂತರಿಕವಾಗಿ ತಡೆಯುತ್ತಲೆ ಬಂದಿದ್ದರಿಂದಲೇ ಯೋಜನೆ ಪೂರ್ತಿಗೊಳ್ಳುವಲ್ಲಿ ವಿಳಂಬವಾಗಿದೆ.

ಕೃಷ್ಣಾ ಕೊಳ್ಳದ ಅಡಿಯಲ್ಲಿ ಬರುವ 18 ಜಿಲ್ಲೆಗಳ ಪೈಕಿ ಗುಲಬರ್ಗ ಬಿಜಾಪುರ, ರಾಯಚೂರು ಮೂರು ಜಿಲ್ಲೆಗಳ ಮುಖಂಡರು 14.12.99 ರಂದು ಗುಲಬರ್ಗದಲ್ಲಿ ಸಭೆ ಸೇರಿ ಆಲಮಟ್ಟಿ ಆಣೆಕಟ್ಟು ಪ್ರದೇಶದಲ್ಲಿ ದಿಸೆಂಬರ್ 30 ರಂದು ಸಮಾವೇಶ ನಡೆಸುವುದು ಹಾಗೂ ಈ ಮೂರು ಜಿಲ್ಲೆಗಳಲ್ಲಿ ಜೀಪ್ ಜಾಥಾ ಮಾಡಿ ಜನಜಾಗೃತಿ ಮಾಡುವುದೆಂದು ತೀರ್ಮಾನಿಸಿತು. ಈ ಪ್ರಕಾರ ಗುಲಬರ್ಗ ಹಾಗೂ ಬಿಜಾಪುರ ಜಿಲ್ಲೆಯಲ್ಲಿ ಯಶಸ್ವಿಯಾಗಿ ಜೀಪ್ ಜಾಥಾ ನಡೆಯಿತು. ಇದರಲ್ಲಿ ವಿಜಾಪೂರ ಜಿಲ್ಲೆಯ ಜಾಥಾ ವರದಿ ಈ ರೀತಿ ಇದೆ.

ವಿಜಾಪುರದ ಜೀಪ್ ಜಾಥಾ

"ಹೊಳಿ ದಂಡಿ ಮ್ಯಾಲ ನಮ್ಮ ಹೊಲ

ಬೆಳದು ನಿಂತಯ್ತಿ ಬಿಳಿ ಜೋಳ ನಿಲ" ಎಂಬ ಜಾನಪದ ಹಾಡಿನಂತೆ ಡಿಸೆಂಬರ್ 30 ರಂದು ಹಸಿರು ತುಂಬಿದ ಭೀಮಾ ನದಿ ದಡದಿಂದ ಕಾಂ. ಎನ್.ಕೆ.ಉಪಾಧ್ಯಾಯ ಅವರಿಂದ ಉದ್ಘಾಟನೆಗೊಂಡ ಜೀಪ್ ಜಾಥಾವು ಕಾಂ ಅಣ್ಣಾರಾಯ ಈಳಿಗೇರ ಅವರ ನೇತೃತ್ವದಲ್ಲಿ ಇಂಡಿ ತಾಲೂಕಿನ ಏಳಗಿ ಗ್ರಾಮದ ಪಕ್ಕದಲ್ಲಿ ಹಾಯ್ದು ಭೀಮಾ ನದಿಗೆ ಸೇರಿರುವ ಕೃಷ್ಣಾ ನೀರಾವರಿಯೋಜನೆಯ ಇಂಡಿ ಉಪ ಕಾಲುವೆಯ ಅಪೂರ್ಣಗೊಂಡಿರುವ ಕೆಲಸವನ್ನು ಪರಿವೀಕ್ಷಣೆ ಮಾಡುತ್ತಾ ಝಳಕಿ, ಬಸ್ನೊಳ್ಳಿ, ಹೋರ್ತಿ, ಹಂಜಗಿ, ನಿಂಬಾಳ, ಚೊರಗಿ, ಅಂಜುಟಗಿ, ಇಂಡಿ, ಸಾಲೊಟಗಿ, ನಾದ ಮುಂತಾದ ಊರುಗಳಲ್ಲಿ ಹಾಯ್ದು ಇಂಡಿ ತಾಲೂಕಿನ 12 ಹಳ್ಳಿಗಳಲ್ಲಿ ಪ್ರಚಾರ ಮಾಡಲಾಯಿತು.

ಸದಾ ಬರಗಾಲಕ್ಕೆ ತುತ್ತಾಗುವ ಇಂಡಿ ತಾಲೂಕಿನ ಈ ಹಳ್ಳಿಗಳು ಎಂದಿನಂತೆ ಕಡಿಮೆ ಪ್ರಮಾಣದ ಮಳೆಯಿಂದಾಗಿ ಜೋಳ, ಕಡಲೆ, ಸೂರ್ಯಪಾನ, ತೊಗರಿ ಮುಂತಾದ ಪೈರುಗಳು ಕ್ಷಯ ರೋಗಿಯಂತೆ ಬಾಡಿ ಹೋಗಿದ್ದವು.

~~'ಎನ್ರಿ ಅಣ್ಣೋರ, ಇನ್ನ ಒಂದು ಮಳಿ ಆಗಿದರೆ ನಮ್ಮ~~ ಬೆಳೆ ಭಾರಿ ಇರ್ತಿತ್ರೀ..." ಎಂದು ಸಂಕಟದಿಂದ ಹೇಳುತ್ತಿದ್ದ ರೈತರು ಹಲವಾರು ಜನ ಮರುಕಪಟ್ಟಿದ್ದು ಇದೆ.

"ಅಲ್ರಿ ಅಣ್ಣೋರ ಈ ಕ್ಯಾನಲ್ ಕೆಲಸ ಎಂದರ ಮುಗಿತದರೀ, ನಾ ಸಣ್ಣವ ಇರಾಗಿಂದ ಕೇಳ್ತಿದ್ದೀನ್ರಿ ಕೆಲಸ ಸುರು ಆಗೇದಂತ. ಇನ್ನಾತಂಕಾ ನೀರು ಬರವಲ್ದು, ಈ ಆಲಿಮಟ್ಟಿ ಡ್ಯಾಮಿಂದು" ಎಂದು ಕೇಳಿದ ಇಂಡಿ ತಾಲೂಕಾ ರೈತ ಸಂಘದ ಕಾರ್ಯದರ್ಶಿ ಪರಮಾತ್ಮ ಬಂದಪಟ್ಟಿ, ಈ ಪ್ರಶ್ನೆ ಇನ್ನು ಹಲವಾರು ಪ್ರಶ್ನೆ ಹಾಕಿದ್ದು ಇದೆ.

ಮಳೆ ನೀರಿಗೆ ಕೊಚ್ಚಿ ಹೋಗಿರುವ ಕಾಲುವೆ



ಜಾಥಾದ ಉದ್ಘಾಟನೆ ಎನ್.ಕೆ.ಉಪಾಧ್ಯಾಯರಿಂದ

ಬರದ ನಾಡಿನ ಬಂಗಾರದ ಬೆಳೆ

ರೈತ ಸಂಘದ ಸಿಂದಗಿ ತಾಲೂಕು ಸಮಿತಿಯಿಂದ ನಡೆದ ಸತತ ಹೋರಾಟದ ಫಲವಾಗಿ ಇಂಡಿ ಉಪಕಾಲುವೆಯ 64ನೇ ಕಿ.ಮಿ. ವರೆಗೆ ನೀರು ಬಿಡಲಾಗಿತ್ತು. ಈ ನೀರು ಉಪಯೋಗಿಸಿ, ಬಂಗಾರದ ಬೆಳೆಯನ್ನು ಬೆಳೆದಿದ್ದರು ನಮ್ಮ ರೈತರು.

ಧೂಳು ಹಾರಿಸುತ್ತಾ ಸಾಗಿದ್ದ ನಮ್ಮ ಜೀಪು ಆಣೆಕಟ್ಟಿನ ನೀರು ಬಂದಿರುವ ಈ ಪ್ರದೇಶಕ್ಕೆ ಬರುತ್ತಲೇ ಬ್ರೇಕ್ ಹಾಕಿ ನಿಂತಿತು. ಡ್ರೈವರ್ ಬೊಟ್ಟು ಮಾಡಿ ತೋರಿಸಿದತ್ತ

ಸಿಂದಗಿ ತಾಲೂಕಿನ ಮಲಘಾಣ ಗ್ರಾಮದಲ್ಲಿ ಹೋಗಿ ಪ್ರಚಾರ ಮಾಡುತ್ತಿರುವಾಗ ಒಬ್ಬ ರೈತನೆಂದ "ಏನ್ರಿ ನಮ್ಮ ಹೊಲಗಳಲ್ಲಿ ಮಾಡಿದ ಹೊಲಗಾಲುವೆ, ಆಣೆಕಟ್ಟಿನ ನೀರುವ ಬರುವುದಕ್ಕೂ ಮುಂಚೆ ಮಳೆ ನೀರಿಗೆನೆ ಕಿಚಿತ್ತುಕೊಂಡು ಹೋಗ್ಯಾವಲ್ರಿ" ಎಂದು ಗಮನ ಸೆಳೆದ. ನಮ್ಮ ಜಾಥಾ ಮುಂದಿನ ಊರಿಗೆ ಸಾಗುವಾಗ ಆ ರೈತ ಹೇಳಿದ್ದು ನಿಜ ಎಂದು ಕಂಡುಬಂತು.

ಸಿಂದಗಿ ತಾಲೂಕಿನ ತೊಂಟಾಪುರ, ವಿಭೂತಿಹಳ್ಳಿ, ಆಲಮೇಲ, ಹೊನ್ನಳ್ಳಿ, ಕೊರಳ್ಳಿ, ಒಳಗಾಸೂರ, ಚಾಂದಕವಠೆ, ಗಣಿಯಾರ, ರಾಂಪೂರ, ಒಬಲೇಶ್ವರ ಮಲಘಾಣ, ಮಂಗಳೂರು, ಆಹೆರಿ, ಸೋಮಜ್ಯಾಳ, ಕಕ್ಕಳ ಮೆಲಿ, ಕುಳಕುಮಟಗಿ, ಶಿರ್ಸಗಿ, ಬಿಗಲೂರ, ಮೋರಗಿ, ಕೆರೂರ, ಹಂಚಿನಾಳ, ಗಬಸಾವಳಗಿ, ಚಿಕ್ಕಯಾರಗಲ್, ಹಿರೆಯರಗಲ್, ಸಿಂದಗಿ ಹೀಗೆ ಒಟ್ಟು 29 ಗ್ರಾಮಗಳಲ್ಲಿ ಜಾಥಾದ ಉದ್ದೇಶ ಪ್ರಚಾರ ಪಡಿಸಲಾಯಿತು. ವಿಜಾಪುರ-15, ಹಳ್ಳಿ ಜಾತಾ ಮಾಡಿ ಹೀಗೆ 77ಹಳ್ಳಿಗಳಲ್ಲಿ ~~ಪ್ರಚಾರ ಮಾಡಲಾಯಿತು.~~

ನೋಡಿದೆವು. ಹಾಡಿನ ಪಲ್ಲವಿಯಂತೆ ಹರ್ಷದ ಉದ್ಗಾರಗಳು ತನ್ನಿಂದ ತಾನೇ ಹೊರಬಂದವು.

ಎದುರಿಸಿ ನೂರೆಂಟು ವಿಘ್ನಗಳ
ಮಾಡಿದ ಭಗೀರಥ ಪ್ರಯತ್ನದಿ
ಹರಿದಿಹಳು ಒಲವಿನ ಕೃಷ್ಣೆ
ಕಪ್ಪು ನಾಡಿನ ಈ ಬಯಲು ನೆಲಕೆ
ಬರದ ವಡಲವ ಸೀಳಿ
ನಗುತಿದೆ ನೋಡಾ ಹಸಿರು ನಗುತುಂಬಿ
ಎಲ್ಲೆಲ್ಲೂ ತೊನೆಯುತಿದೆ ತಲೆಎತ್ತಿ
ಬೆಳ್ಳಿ ಬಂಗಾರದ ಕೆನೆ ತೆನೆಗಳು

ಸಂತಸದಿಂದ ಪ್ರತಿಯೊಬ್ಬರು ಉಬ್ಬಿಹೋಗಿದ್ದರು. ಎಲ್ಲಂದರಲ್ಲಿ ಹರಿಯುತ್ತಿರುವ ನೀರು, ಹಸಿರು ತುಂಬಿದ ಹೊಲಗಳು. ಅಲ್ಲಲ್ಲಿ ತೊಗರಿ ಬೆಳೆಗಳ ರಾಶಿ ಮಹಿಳೆಯರು ಪುರುಷರು ಉಲ್ಲಾಸದಿಂದ ಹೊಲಗಳಲ್ಲಿ ದುಡಿಯುತ್ತಿದ್ದಾರೆ. ಬದುಗಳ ಮೇಲೆ ಚಿನ್ನಾಟವಾಡುತ್ತಾ, ದನ ಕುರಿಗಳನ್ನು ಮೇಯುಸುತ್ತಿದ್ದಾರೆ. ಬಹುವರ್ಷಗಳ ನಮ್ಮ ಬೇಡಿಕೆ ಅವರ ಬಯಕೆ ಈಡೇರಿದ್ದವು. ಇಡೀ ಜಿಲ್ಲೆಯಾದ್ಯಂತ ಈ ರೀತಿ ಆದರೆ ಎಂಥ ಚೆನ್ನ, ಗುಳೇ ಹೋಗುವ ಪರಿಸ್ಥಿತಿ ತಪ್ಪುತ್ತದೆ ಅಲ್ಲವೇ ಎಂದು ಚರ್ಚಿಸುತ್ತಾ ನಮ್ಮ ಜೀಪು ಮುಂದೆ ಸಾಗಿತು. ಆದರೆ ಈ ನಮ್ಮ ಸಂತೋಷ ಬಹಳ ಹೊತ್ತು ಉಳಿಯಲಿಲ್ಲ.

ಖಿಂಡುಗ ಬೆಳೆದೆಯಲ್ಲೋಕಿನಕಣ್ಣಾ

ಭೀಮಾ ನದಿ ದಡದ ಈ ಊರು, ಬಗಲೂರು, ಸಿಂದಗಿ ತಾಲೂಕಿನ ಕೊನೆಯ ಹಳ್ಳಿ ಸುಮಾರು 300-400 ಮನೆಗಳಿವೆ. ಊರಿನ ಮಧ್ಯಕ್ಕೆ ನಮ್ಮ ಜೀಪು ಬರುತ್ತಲೇ ಬೆರಗಾಗಿ ನಿಂತೆವು. ಬೆಟ್ಟದಷ್ಟು ಎತ್ತರಕ್ಕೆ ರಾಶಿ ರಾಶಿಯಾಗಿ ಬಿದ್ದಿರುವ ತೊಗರಿಯ ಕಾಳು ಹಾಗೂ ಮೂಟೆಗಳು. ಅವುಗಳ ಮಧ್ಯೆದಲ್ಲಿ ಕಾಣದಂತಾಗಿರುವ ಗೋದಾಮು. ಅದರ ಮುಂದುಗಡೆ ಸಗಟು ವ್ಯಾಪಾರದ ಕಿರಾಣಿ ಅಂಗಡಿ, ಎಲ್ಲಂದರಲ್ಲಿ ಸಾಲುಗಟ್ಟಿ ನಿಂತಿದ್ದ ಟ್ರಕ್ಕುಗಳು, ಟ್ರಾಕ್ಟರುಗಳು, ಎತ್ತಿನ ಗಾಡಿಗಳು ನಮ್ಮ ಬೆರಗಿಗೆ ಕಾರಣವಾಗಿದ್ದವು. ಬಿಜಾಪುರದ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ನಮ್ಮ ಸಂಘದ ಕಛೇರಿ ಇದ್ದರೂ ಇಂತಹ ಅಗಾಧ ಪ್ರಮಾಣದ ರೈತರ ಮಾಲು ನೋಡಿದ್ದಿಲ್ಲ. ಈ ಊರಿನ ಸಾಹುಕಾರನೊಬ್ಬ ರೈತರ ಮಾಲನ್ನು ಖರೀದಿಸಿ ಸಂಗ್ರಹಿಸಿಟ್ಟಿದ್ದನು. ಇದಕ್ಕೆ ಇನ್ನೊಂದು

ಯಶಸ್ವಿಯಾದ ನೀರಾವರಿ ಸಮಾವೇಶ

ಆಲಮಟ್ಟಿಯಲ್ಲಿ ದಿಸೆಂಬರ್ 30 ರಂದು ಸೇರಿದ್ದ ಸಮಾವೇಶ ತುಂಬಾ ಪರಿಣಾಮಕಾರಿಯಾಗಿ ಯಶಸ್ವಿಯಾಯಿತು. ಬಿಜಾಪುರ, ಗುಲಬರ್ಗ ಜಿಲ್ಲೆಗಳಿಂದ ಬಂದಿದ್ದ ಜೀಪ್ ಜಾಥಾಗಳು ಹಾಗೂ ಈ ಮೂರು ಜಿಲ್ಲೆಗಳಲ್ಲದೆ ರಾಯಚೂರು, ಬಳ್ಳಾರಿ, ಬೆಳಗಾಂ ಜಿಲ್ಲೆಯಿಂದಲೂ ಸುಮಾರು ಸಾವಿರಾರು ಜನ ರೈತರು ರೈತ ಮುಖಂಡರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಕಾಂ. ಎನ್.ಕೆ.ಉಪಾಧ್ಯಾಯರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ. ಮಾರುತಿ ಮನ್ಪಡೆಯವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ ಬಿಜಾಪುರ ಮತ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿರುವ ಬಿಜೆಪಿ ಸದಸ್ಯ ಬಸನಗೌಡ ಪಾಟೀಲ(ಯತ್ನಾಳ್) ಇವರು ಆಲಮಟ್ಟಿ ಆಣೆಕಟ್ಟಿನ ಎತ್ತರ ಮೊಟಕು ಗೊಳಿಸುವಂತೆ ಸುಪ್ರೀಂ ಕೋರ್ಟಿಗೆ ಸಲ್ಲಿಸಿರುವ ಅಫಿಡವಿಟ್‌ನ್ನು ಪ್ರಧಾನಿ ವಾಜಪೇಯಿಯವರು ಹಿಂದಕ್ಕೆ ಪಡೆಯದಿದ್ದರೆ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದಾಗಿ ಹೇಳಿಕೊಂಡಿರುವುದನ್ನು ಖಂಡಿಸಿದರು. ಜನಗಳ ಬಗ್ಗೆ ನಿಜವಾದ ಕಾಳಜಿ ಇದ್ದರೆ ಲೋಕಸಭಾ ಅಧ್ಯಕ್ಷರಿಗೆ ರಾಜೀನಾಮೆ ಪತ್ರ ಸಲ್ಲಿಸಿ ಪ್ರಧಾನಿ ವಾಜಪೇಯಿಯವರ ಮನೆ ಮುಂದೆ ಧರಣಿ ಕೂಡಲಿ ಎಂದು ಸವಾಲು ಹಾಕಿದರಲ್ಲದೆ ಜನರನ್ನು ಮರುಳು ಮಾಡುವ ಇಂಥಹ ಕುಲಕ ರಾಜಕೀಯ

ಕಾಂ. ಜಿ.ಎನ್.ನಾಗರಾಜ್ ಅವರು ಮಾತನಾಡಿ ಈ ದೇಶದಲ್ಲಿ ಕೃಷಿ ಮಾಡುತ್ತಿರುವ ಎಲ್ಲಾ ಭೂಮಿಗೂ ನೀರು ಉಣಿಸಲು ಸಾಧ್ಯವಿರುವಷ್ಟು ನೀರು ಲಭ್ಯವಿದೆ ಎಂದರು.

ಉತ್ತರದ ಗಂಗಾ, ಯಮುನಾ, ಬ್ರಹ್ಮಪುತ್ರ ಮುಂತಾದ ಅನೇಕ ನದಿಗಳು ಜೊತೆಗೆ ದಕ್ಷಿಣದ ಪಶ್ಚಿಮ ಘಟ್ಟದ ನದಿಗಳಾದ ಕಾವೇರಿ, ಕೃಷ್ಣಾ, ನರ್ಮದಾ ಮುಂತಾದ ಅನೇಕ ನದಿಗಳು ತುಂಬಿ ಹರಿದು ವ್ಯರ್ಥವಾಗಿ ಸಮುದ್ರಕ್ಕೆ ಸೇರುತ್ತಿವೆ ಎಂದು ನುಡಿದ ಅವರು ಪ್ರತಿವರ್ಷ ಮಂಡಿಸುತ್ತಿರುವ ಅಗಾಧ ಪ್ರಮಾಣದ ಬಜೆಟ್ಟಿನಲ್ಲಿ ಈ ಎಲ್ಲಾ ನೀರಾವರಿ ಯೋಜನೆಗಳನ್ನು ಸಾಕಾರಗೊಳಿಸಬಹುದಾಗಿದೆ. ಆದರೆ ಬಂಡವಾಳ ಶಾಹಿ ಭೂಮಾಲಕ ಪರ ನೀತಿ ಹೊಂದಿರುವ ಈ ಆಳುವ ವರ್ಗಗಳಿಗೆ ತಮ್ಮ ಹಿತಕ್ಕೆ ಮಾರಕವಾಗ ಬಹುದೆಂಬ ಭಯದಿಂದ ಇಂತ ಯೋಜನೆಗಳನ್ನು ಜಾರಿಗೆ ತರುತ್ತಿಲ್ಲವೆಂದು ವಿಶಾದಿಸಿದರು.

ಕೃಷಿಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಕಾಂ. ನಿತ್ಯಾನಂದ ಸ್ವಾಮಿ, ಪ್ರಾಂತ ರೈತ ಸಂಘದ ಜಂಟಿ ಕಾರ್ಯದರ್ಶಿ ಕಾಂ. ಜಿ.ಸಿ.ಬಯ್ಯಾರೆಡ್ಡಿ, ಬೆಳಗಾಂ ಜಿಲ್ಲೆಯ ರೈತ ಮುಖಂಡ ಕಾಂ. ವಿ.ಪಿ.ಕುಲಕರ್ಣಿ, ರಾಯಚೂರು ಜಿಲ್ಲೆಯ ರೈತ ಮುಖಂಡ ಕಾಂ. ಯು.ಬಸವರಾಜ ಮುಂತಾದವರು ಮಾತನಾಡಿದರು..

ಇದೇ ಸಂದರ್ಭದಲ್ಲಿ ಜೀಪ್ ಜಾಥಾದ ನಾಯಕತ್ವ ವಹಿಸಿದ ಸಂಗಾತಿಗಳಾದ

ಜಾಲಹಳ್ಳಿಯವರಿಗೆ ಹೂಗಳನ್ನು ಅರ್ಪಿಸಿ ಗೌರವಿಸಲಾಯಿತು.

ಬಿಜಾಪುರದ ಸಿದ್ಧಣ್ಣ ಐರೋಡಗಿ ಚನ್ನದ ಕುಂಬಾರ, ಇಂಡಿಯ ಪರಮಾತ್ಮ ಬಂದಪಟ್ಟಿ, ಸೋಮಣ್ಣ ಮೇಟ್ರಿ, ಬಿಜಾಪುರದ ಚಿಕ್ಕಣ್ಣ, ಬಾಗೇವಾಡಿಯ ನಬಿಸಾಬ ಧವಳಗಿ, ಗುಲಬರ್ಗದ ವಿರೂಪಾಕ್ಷಪ್ಪ ತಡಕಲ, ಭೀಮಶೆಟ್ಟಿ ಯಂಡಳ್ಳಿ ಮುಂತಾದ ಸಂಗಾತಿಗಳು ಜಾಥಾದ ಉದ್ದಕ್ಕೂ ವಹಿಸಿದ ಶ್ರಮವನ್ನು ಶ್ಲಾಘಿಸಲಾಯಿತು.

ಜೆಎಂಎಸ್ ನ ಕಾಂ. ಲಕ್ಷ್ಮಿ ಮೈಲಾಲಿ, ಡಿವೈಎಫ್ಐನ ಲಿಂಗರಾಜ ಬಿದರಕುಂದಿ ಹಾಗೂ ಸಂಗಾತಿಗಳು ಕ್ರಾಂತಿಗೀತೆ ಹಾಡಿದರು. ಕಾಂ. ಭೀಮಸಿ ಕಲಾದಗಿಯವರ ಸ್ವಾಗತದೊಂದಿಗೆ ಪ್ರಾರಂಭವಾದ ಸಮಾವೇಶವು ಕಾಂ. ಅಣ್ಣಾರಾಯ ಈಳಿಗೇರ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ನೀರಾವರಿ ಸಮಾವೇಶ ಕೈಗೊಂಡ ನಿರ್ಣಯಗಳು

1. ಆಲಮಟ್ಟಿ ಆಣೆಕಟ್ಟಿನ ಎತ್ತರ ಹೆಚ್ಚಿಸಬಾರದೆಂಬ ಅಫಿಡವಿಟ್‌ನ್ನು ಸುಪ್ರೀಂಕೋರ್ಟಿಗೆ ಸಲ್ಲಿಸಿರುವ ಕೇಂದ್ರ ಸರ್ಕಾರ ಹಿಂದಕ್ಕೆ ಪಡೆಯಬೇಕು.
2. ಬಚಾವತ್ ತೀರ್ಪಿನ ನೀರನ್ನು ಸರಿಯಾಗಿ ಹಂಚಿಕೆ...

ಕೋಲಾರ ಜಿಲ್ಲೆಯಲ್ಲಿ 'ಹೈನುಗಾರಿಕೆ ಇಲ್ಲದಿದ್ದರೆ ಆರ್ಥಿಕ ಬಿಕ್ಕಟ್ಟಿ'ಗೆ 'ಅವಸಾನದ ಅಂಚಿನಲ್ಲಿ ಹೈನುಗಾರಿಕೆ' ಎಂಬ ಪೂರ್ಣ ವರದಿಯನ್ನು ಐಕ್ಯರಂಗ ಪತ್ರಿಕೆಯಲ್ಲಿ ಓದಿದ್ದೀರಿ.

ಹಿಂದೆ ಚಿನ್ನವನ್ನು ನೆನಪು ತರುತ್ತಿದ್ದ ಕೋಲಾರ ಜಿಲ್ಲೆಯಲ್ಲಿ ಇಂದು ಮಿಲ್ಕ್ ಮತ್ತು ಸಿಲ್ಕ್ ಅದರ ಸ್ಥಾನವನ್ನು ತುಂಬಿದೆ. ಉತ್ತಮ ನೀರಾವರಿ ಮತ್ತು ಅಚ್ಚುಕಟ್ಟಿನ ಮನೆ, ಬಂಡವಾಳ ಇರುವವರು ರೇಷ್ಮೆ ಉದ್ದಿಮೆಯಲ್ಲಿ ತೊಡಗಿಸಿಕೊಂಡರೆ, ಕೂಲಿ ಮಾಡುವ ಬಡವನಿಂದ ಶ್ರೀಮಂತರವರೆಗೂ ಹೈನು ಉದ್ದಿಮೆಯಲ್ಲಿ ತೊಡಗಿದ್ದಾರೆ. ಈ ಜಿಲ್ಲೆಯಲ್ಲಿ ಸುಮಾರು 4 ಲಕ್ಷ ಕುಟುಂಬಗಳ ಜೀವನಾಡಿ ರೇಷ್ಮೆ ಮತ್ತು ಹಾಲು. ಇದರ ಜೊತೆಗೆ ಟಮೋಟೋ-ಆಲೂಗಡ್ಡೆ ಈ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಗಳು.

ಎರಡು ಮೂರು ವರ್ಷಗಳಿಂದ ಟಮಾಟೋ ಆಲೂಗಡ್ಡೆ ಬೆಳೆಗಳು ಕೈಕೊಟ್ಟು ಬೆಲೆಯು ಸಿಗದೆ ಬಂಡವಾಳಗಳನ್ನು ಕಳೆದುಕೊಂಡು ಸಾಲಗಾರರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ತಿಂಗಳಿಗೋ ಅಥವಾ ಎರಡು ತಿಂಗಳಿಗೊಮ್ಮೆ ರೇಷ್ಮೆ ಉತ್ತಮ ಬೆಳೆಯಾದರೆ ಕನಿಷ್ಟ ಬೆಲೆ ಇಲ್ಲದ ಕಾರಣ ಅದರ ಖರ್ಚಿಗೆ ಸರಿದೂಗಿಸುವುದೇ ಆಗುತ್ತಿದೆ. ಹದಿನೈದು ದಿನಕೊಮ್ಮೆ ಹಣ ಬರುವುದು ಹಾಲಿನ ಉದ್ದಿಮೆಯಿಂದ ಮಾತ್ರ.

ಹೈನು ಉದ್ದಿಮೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳು

ಜಿಲ್ಲೆಯಲ್ಲಿ 1280 ಕ್ಕೂ ಹೆಚ್ಚು ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಪ್ರತಿದಿನ 5.25 ಲಕ್ಷ ಲೀಟರ್‌ನಷ್ಟು ಹಾಲು ಸಂಗ್ರಹವಾಗುತ್ತಿದೆ. ಜಿಲ್ಲೆಯ ಹೈನುಗಾರಿಕೆಯ ಸಾಧನ ಸಂಸ್ಥೆಯಾದ ಜಿಲ್ಲಾ ಹಾಲು ಒಕ್ಕೂಟಕ್ಕೆ ಲಭ್ಯ ಹಾಲಿನ ಪ್ರಮಾಣಕ್ಕೆ ಅನುಗುಣವಾಗಿ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದು ರೈತರ ಪಾಲಿಗೆ ಕಷ್ಟವಾಗಿದೆ. ಕೋಲಾರ ಒಕ್ಕೂಟವು ಕೇವಲ 80 ಸಾವಿರ ಲೀ. ಮಾರುಕಟ್ಟೆ ಹುಡುಕಿಕೊಂಡಿದೆ. 1.85 ಲಕ್ಷ ಲೀ. ಹಾಲು ಪುಡಿ ಪರಿವರ್ತನೆ ಮಾಡುತ್ತಿದೆ. ಇದರಿಂದ .25 ಲಕ್ಷ ರೂ. ನಷ್ಟವಾಗುತ್ತಿದೆ. ಉಳಿದ ಹಾಲಿಗೆ ಬೆಂಗಳೂರು ಮದರ್‌ಡೈರಿ ಸ್ವೀಕರಿಸುತ್ತಿದ್ದು, ಸ್ಥಿರ ಮಾರುಕಟ್ಟೆ ಇಲ್ಲವಾಗಿದೆ.

ಸಮೃದ್ಧಿ ಹಾಲು - ಬೆಲೆ ಕಡಿತ - ಹೋರಾಟಕ್ಕೆ ಸಿದ್ಧತೆ

ಹಾಲಿಗೆ ಮಾರುಕಟ್ಟೆ ನಿರ್ಮಿಸದೆ ಬೇಡಿಕೆ ಇಲ್ಲದ ಕಾರಣ ನಷ್ಟ ಅನುಭವಿಸುತ್ತಿರುವ ಕಾರಣವೊಡ್ಡಿ ಒಕ್ಕೂಟವು 1999 ಜೂನ್ ತಿಂಗಳಲ್ಲಿ ಹಾಲಿನ ಬೆಲೆ ಲೀಟರಿಗೆ 70 ಪೈಸೆ ಕಡಿಮೆ ಮಾಡಿತು. ಇದರ ವಿರುದ್ಧ ಜುಲೈ 30 ರಂದು ಕೋಲಾರದ ಹಾಲು ಉತ್ಪಾದಕರ ಮತ್ತು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘ ನೇತೃತ್ವದಲ್ಲಿ 5 ಸಾವಿರಕ್ಕೂ ಹೆಚ್ಚು ಜನ ಹೋರಾಟ ನಡೆಸಿ ಪ್ರತಿಭಟಿಸಿದರು. ಇದರಿಂದ ಜಿಲ್ಲಾಧಿಕಾರಿಗಳು ಸಂಘದ ಪದಾಧಿಕಾರಿಗಳ ಮತ್ತು ಒಕ್ಕೂಟದ ಆಡಳಿತ ಮಂಡಳಿಯವರನ್ನು ಸಭೆ ಕರೆದು ಯಾವುದೇ ಕಾರಣಕ್ಕೂ ಇನ್ನೂ ಹಾಲಿನ ಬೆಲೆ ಇಳಿಸಬಾರದೆಂದು ಆದೇಶವಿತ್ತರು, ಆದೇಶವನ್ನು ಉಲ್ಲಂಘಿಸಿ ಮತ್ತೆ ನವೆಂಬರ್ 16 ರಿಂದ ಲೀಟರಿಗೆ 30 ಪೈಸೆ ಕಡಿಮೆಗೊಳಿಸಿತು. ಇದರ ಬೆನ್ನಲ್ಲೆ ಒಂದು ಹಾಲಿನ ಶೇಖರಣೆ

ಕೋಲಾರ ಹಾಲು ಉತ್ಪಾದಕರ ಮೈಯಲ್ಲಿ ನೆತ್ತರು ಹರಿಸಿದ ಪೋಲೀಸರು

ವರದಿ:
ಪಿ.ಆರ್.ಸೂರ್ಯನಾರಾಯಣ ಸ್ವಾಮಿ

ನಿಲ್ಲಿಸಿ

ಮುಂದಿನ ದಿನವೇ ಹಾಲು ಶೇಖರಣೆ ನಿಲ್ಲಿಸಬಾರದೆಂದು ಸಂಘದ ಪದಾಧಿಕಾರಿಗಳು ಹಾಗೂ ಕೆಲವು ಉತ್ಪಾದಕರು ಒಕ್ಕೂಟದ ಮುಂದೆ ಹಾಲನ್ನು ಚೆಲ್ಲಿ ರಸ್ತೆ ತಡೆ ಮಾಡಿದ್ದರಿಂದ ಹಾಲು ಶೇಖರಣೆ ನಿಲ್ಲಿಸುವುದನ್ನು ಕೈಬಿಟ್ಟರು.

ಶಾಶ್ವತವಾಗಿ ಹಾಲಿನ ಬೆಲೆ ಮತ್ತು ಮಾರುಕಟ್ಟೆ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ರೂಪಿಸಲು ತಾಲ್ಲೂಕು ಮಟ್ಟಗಳಿಂದ ಜಿಲ್ಲಾ ಮಟ್ಟದವರೆಗೆ ತಯಾರಿಗಳು ನಡೆಯುತ್ತಿರುವಾಗಲೇ ಹೋರಾಟಗಳನ್ನು ಮುರಿಯುವನೆಪದಲ್ಲಿ ಕೆ.ಎಂ.ಎಫ್. ಅಧ್ಯಕ್ಷರಾದ ಹೆಚ್.ಡಿ.ರೇವಣ್ಣ ಕೋಲಾರಕ್ಕೆ ಭೇಟಿ ನೀಡಿ 50 ಸಾವಿರ ಲೀಟರ್ ಹಾಲನ್ನು ಹೆಚ್ಚುವರಿಯಾಗಿ ಮದರ್‌ಡೈರಿ ಖರೀದಿಸುತ್ತದೆ. ಲೀಟರ್‌ಗೆ 15 ಪೈಸೆ ಹೆಚ್ಚುವರಿಯಾಗಿ ಅಂತರಡೈರಿ ದರವನ್ನು ನೀಡುವುದಾಗಿ ಪತ್ರಕರ್ತರ ಎದುರಿಗೆ ಪ್ರಚಾರ ಗಿಟ್ಟಿಸಿಕೊಂಡು ಹೋದರು. ಇದು ಯಾವುದೂ ಜಾರಿಯಾಗದೆ ಕೇವಲ ಹೇಳಿಕೆಯಾಗಿಯೇ ಉಳಿಯಿತು.

ಸಮಸ್ಯೆ ಬಗೆಹರಿಸಲು 15 ದಿನಗಳ ಗಡುವು ನೀಡಿದರೂ ಪ್ರಯೋಜನ ಆಗದಿದ್ದಾಗ ಡಿ.30 ರ ಹೋರಾಟಕ್ಕೆ ಕರೆ ನೀಡಲಾಯಿತು.

ಆಕರ್ಷಿತ ಮೆರವಣಿಗೆ - ಲಾಠಿ-ಬೂಟುಗಳ ಸರ್ಪಗಾವಲು

ಅಂದು ಬೆಳಿಗ್ಗೆ 10.00 ಗಂಟೆಯಿಂದ ಪ್ರವಾಸಿ ಮಂದಿರದಲ್ಲಿ ನೂರಾರು ಸಂಖ್ಯೆಯಲ್ಲಿ ಟೆಂಪೋ-ಟ್ರಾಕ್ಟರ್‌ಗಳಲ್ಲಿ ವಿವಿಧ ತಾಲ್ಲೂಕುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಉತ್ಪಾದಕರು ಬಂದು ಸೇರಿದರು. ಈ ಹೋರಾಟಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಪಿಐ(ಎಂ) ಪಕ್ಷ ಸಂಪೂರ್ಣ ಬೆಂಬಲ ನೀಡಿ ಕಾರ್ಯಕರ್ತರು ಭಾಗವಹಿಸಿದ್ದರು. ಸುಮಾರು ಏಳು ಸಾವಿರದಷ್ಟು ಉತ್ಪಾದಕರು ಪ್ರವಾಸಿಮಂದಿರದಿಂದ ಮೆರವಣಿಗೆಯಲ್ಲಿ ಬಂದು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲು ಹೋದಾಗ ಕಛೇರಿಯ ಹೊರಭಾಗದ ಕಾಂಪೌಂಡ್ ಗೇಟಿನ ಬಳಿಯೇ ಹೋರಾಟಗಳನ್ನು ದಮನ ಮಾಡುವ, ಹಕ್ಕುಗಳನ್ನು ಮೊಟಕುಗೊಳಿಸುವ 'ಲಾಠಿ ಸ್ಟಿಕ್‌ಗಳ ಕಾಕಿ ಸರ್ಪಗಾವಲು' ಕೋಟೆ ನಿರ್ಮಿಸಿ ಉತ್ಪಾದಕರನ್ನು ಒಳನುಗ್ಗದಂತೆ ತಡೆದರು. ನ್ಯಾಯವನ್ನು ಕೇಳಲು ಹೋಗುವ ನಮ್ಮನ್ನು ತಡೆಯುವ ಹಕ್ಕು ನಿಮಗಿಲ್ಲ. ಜಿಲ್ಲಾಧಿಕಾರಿ ಕಛೇರಿಗೆ ಹೋಗಿ ಮನವಿ ಪತ್ರ ಸಲ್ಲಿಸಬೇಕೆಂದು ರೈತರು ಹಠ ಮಾಡಿದಾಗ ಆ ವೇಳೆಗೆ ಜಿಲ್ಲಾಧಿಕಾರಿಯೇ ಬಂದು ಕಛೇರಿಯ ಒಳಭಾಗದ ಆವರಣಕ್ಕೆ ಬರಲು ಅವಕಾಶ ನೀಡಿದರು.



ಒಕ್ಕೂಟದ ಅಸಮರ್ಥತೆಗೆ ಕಾರಣರಾದ, ಸಮಸ್ಯೆಗಳ ಪರಿಹಾರಕ್ಕೆ ಗಮನ ಹರಿಸದ 11 ಜನ ನಿರ್ದೇಶಕರ ಪ್ರತಿಕೃತಿಗಳನ್ನು ಎತ್ತಿಕೊಂಡು ಮೆರವಣಿಗೆಯಲ್ಲಿ ಬಂದ ರೈತರು ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಕೃತಿಗಳ ದಹನ ಮಾಡಿದರು. ಕಛೇರಿಯ ಆವರಣದಲ್ಲಿ ಹೋರಾಟಗಾರರನ್ನು ಉದ್ದೇಶಿಸಿ ಹೋರಾಟವನ್ನು ಬೆಂಬಲಿಸಿ ಬಂದಿದ್ದ ಅನೇಕ ಮುಖಂಡರು ಸಮಸ್ಯೆಗಳ ಬಗ್ಗೆ ಮಾತನಾಡಿದ ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಹಾಲು ಒಕ್ಕೂಟದ ಮುಂದೆ ಧರಣಿ

ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಲು ಜಿಲ್ಲಾ ಕೇಂದ್ರದಿಂದ 12 ಕಿ.ಮಿ. ದೂರದ ಕೋಲಾರ-ಮುಳಬಾಗಿಲು ರಾಷ್ಟ್ರೀಯ ಹೆದ್ದಾರಿಯ ಬೆಳಗಾನ ಹಳ್ಳಿ ಹತ್ತಿರ ಇರುವ ಒಕ್ಕೂಟಕ್ಕೆ ಉತ್ಪಾದಕರು ತೆರಳಿ ಒಕ್ಕೂಟದ ಮುಂದೆ ಧರಣಿ ನಡೆಸಿ ಎಂ.ಡಿ.ಗೆ ಮನವಿ ಸಲ್ಲಿಸಿದರು.

ನೆತ್ತಿಗೆ ಪಿತ್ಥ ಏರಿಸಿಕೊಂಡ ಎಸ್.ಪಿ.ಜಯಪ್ರಕಾಶ್ ನಾಯಕ್

ಮನವಿ ಪತ್ರ ಸಲ್ಲಿಸಿದ ನಂತರ ಚಳುವಳಿಗಾರರಿಗೆ ವಾಪಸ್ಸಾಗಲು ಮುಖಂಡರು ತಿಳಿಸಿದರು. ಅರ್ಧ ಕಿ.ಮಿ.ದೂರದಲ್ಲಿ ನಿಲ್ಲಿಸಿದ್ದ ತಮ್ಮ ವಾಹನಗಳಿಗೆ ವಾಪಸ್ಸಾಗುತ್ತಿದರು. ಇಷ್ಟರಲ್ಲಿ ಐದಾರು ಜನ ಯುವಕರು ಒಕ್ಕೂಟದ ಅಧ್ಯಕ್ಷರು ಬರಲೇಬೇಕು ಎಂದು ವಿನಂತಿಸಿಕೊಂಡಾಗ ಚಳುವಳಿಯ ನೇತೃತ್ವ ವಹಿಸಿದ್ದ ಮುಖಂಡರು ಅವರನ್ನು ಸಮಾಧಾನಗೊಳಿಸಿ ಅಧ್ಯಕ್ಷರು ಬರದಿದ್ದರೆ ನಾವು ಏನು ಮಾಡಲು ಸಾಧ್ಯ? ಮನವಿ ಸಲ್ಲಿಸಿದ್ದೀವಿ, ಪರಿಹಾರ ಸಿಗದಿದ್ದರೆ ಹೋರಾಟವನ್ನು

ಪುಟ 11 ಕ್ಕೆ

ಕೃಷ್ಣಾ ಕಣಿವೆಯ ನೋವು........

ಪುಟ 8 ರಿಂದ

ಕಾರಣ ಉಂಟು ಇತ್ತೀಚಿಗೆ ಕುಸಿದಿರುವ ತೊಗರಿ ಬೆಲೆಯು ಈ ಶೇಖರಣೆಗೆ ಕಾರಣವಾಗಿದೆ. ಒಳ್ಳೆ ಬೆಲೆ ಬಂದ ನಂತರ ಮಾರಾಟ ಮಾಡಿದರಾಯಿತು ಎಂದು ಈ ಅಡತಿ ಅಂಗಡಿಯ ಮಾಲಿಕ ಅಂದುಕೊಂಡಿದ್ದಾನೆ. ಸಿಂದಗಿ, ಅಫ್ಜಲಪುರ, ಜೆವರ್ಗಿ ಮುಂತಾದ ತಾಲೂಕುಗಳಲ್ಲಿ ಇರುವ ಅಡತಿ ಅಂಗಡಿಯ ಮಾಲಿಕರು ತಾವು ಖರೀದಿಸಿದ್ದ ಮಾಲು ಈತನಿಗೆ ಮಾರುತ್ತಾರಂತೆ.

ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಭೀಮಾಶಂಕರ ಸಕ್ಕರೆ ಕಾರ್ಖಾನೆ ಸಹಕಾರಿ ಸಂಘಕ್ಕೆ ಸದಸ್ಯನಾಗಿಯೂ ಆಯ್ಕೆಯಾಗಿದ್ದಾನೆ. ಇವರ ಜೇಷ್ಟ ಸುಪುತ್ರ ಗ್ರಾಮ ಪಂಚಾಯತಿ ಚೇರ್‌ಮನ್ ಕೂಡಾ ಆಗಿದ್ದಾನೆ.

ಇವರು ಖರೀದಿ ಮಾಡುವ ಮಾಲಿಗೆ ಅಧಿಕೃತ ರಶೀದಿ ಕೊಡುವುದಿಲ್ಲ. ಹಮಾಲಿ, ಗೋದಾಮು ಬಾಡಿಗೆ ಮುಂತಾದವು ರೈತರ ತಲೆಗೆ ಹಾಕುತ್ತಾನೆ. ಜೊತೆಗೆ ಊರ ದೇವಸ್ಥಾನದ ಕಟ್ಟಡ ನಿಧಿ ಎಂದು ರೈತರ ಹಣವನ್ನು ಬಲು ಜೋರಿನಿಂದ ಮುರಿದುಕೊಳ್ಳುತ್ತಾನಂತೆ. ಇದು ಬಹುವರ್ಷಗಳಿಂದ ನಡೆದುಕೊಂಡು ಬಂದಿರುವ ಪದ್ಧತಿಯಂತೆ. ಭೀಮಾ ನದಿಯ ಉಸುಕು(ಮರಳು) ಒಯ್ಯಲು ದೂರದೂರಿನಿಂದ ಬರುವ ಟ್ರಾಕ್ಟರ್, ಲಾರಿಗಳಿಂದಲೂ ದೇವಸ್ಥಾನದ ಹೆಸರಿನಿಂದ ಹಣ ವಸೂಲಿ ಮಾಡುತ್ತಾನಂತೆ. ಇದು ಕೂಡಾ ಬಹುದಿವಸಗಳಿಂದ ನಡೆದುಕೊಂಡು ಬಂದಿರುವ ಪದ್ಧತಿಯಂತೆ. ಈ ಪ್ರದೇಶದಲ್ಲಿ ನಡೆದಿರುವ ಕೃಷ್ಣಾಮೇಲ್ದಂಡೆ ಯೋಜನೆಯ ಕೆಲಸಕ್ಕೆ ಇಲ್ಲಿಂದಲೇ ಉಸುಕು ಹೋಗುತ್ತದೆ.

ಪಕ್ಕದಲ್ಲಿಯೇ ಉಸುಕು ಇದ್ದರೂ ಊರ ಮುಂದೆ ಕಟ್ಟಿಸಿರುವ ತನ್ನ ಭವ್ಯವಾದ ಅರಮನೆಯಂತಿರುವ ಮನೆಗೆ 200 ಕಿ.ಮಿ ದೂರದಲ್ಲಿ ಇರುವ ತುಂಗಾಭದ್ರ ನದಿಯ ಕೆಂಪು ಉಸುಕು ತಂದು ಕಟ್ಟಿದ್ದಾನಂತೆ.

ಈ ಊರ ಸುತ್ತಮುತ್ತಲಿರುವ ಕೃಷ್ಣಾ ಅಚ್ಚುಕಟ್ಟು ರಸ್ತೆಗಳು ರೈತರ ಮಾಲು ಹರಿದು ಬರಲು ಅನುಕೂಲವಾಗಿ ಮಾತ್ರವಲ್ಲ ಆಂಧ್ರ, ಮಹಾರಾಷ್ಟ್ರಕ್ಕೆ ಕಳ್ಳತನದಿಂದ ರೈತರಮಾಲು ಸಾಗಿಸಲು ಅನುಕೂಲವಾಗಿವೆ. ಖಂಡುಗ ಬೆಳೆದೆಯಲ್ಲೋ ಕನಕಣ್ಣ ಕಣಜ ತುಂಬಿದಾರ ದೋ ಎಂದು ಹಾಡು ಹೇಳುತ್ತಾ ಮರುಗುತ್ತಾ ನಮ್ಮ ಜೀಪು ಮುಂದೆ ಸಾಗಿತು.

ಜಾಥಾಕ್ಕೆ ಅದ್ದೂರಿ ಸ್ವಾಗತ

ಶಿವಣಗಿ ಗ್ರಾಮಕ್ಕೆ ಬರುವ ಮೂಲಕ ಬಿಜಾಪುರ ತಾಲೂಕನ್ನು ಪ್ರವೇಶಿಸಿದ ನಮ್ಮ ಜಾಥಾಕ್ಕೆ ಅದ್ದೂರಿ ಸ್ವಾಗತ ಕಾದಿತ್ತು. ಅಸಂಖ್ಯಾತ ಜನರಿಂದ ಕೂಡಿದ ಕೆಂಭಾವುಟ ಹಿಡಿದು ಡೊಳ್ಳುಗಳನ್ನು ಬಾರಿಸುತ್ತಾ ಮುಗಿಲು ಮುಟ್ಟುವ ಘೋಷಣೆ ಗಳೊಂದಿಗೆ ಜಾಥಾವನ್ನು ಸ್ವಾಗತಿಸಿದ ಜನ ಊರಲ್ಲಿ ಭಾರಿ ಮೆರವಣಿಗೆ ಹೊರಡಿಸಿದರು. ಯುವಕರು(ಅದರಲ್ಲೂ ಅಲ್ಪಸಂಖ್ಯಾತ ಮುಸ್ಲಿಂ ಯುವಕರು)ಸ್ವಯಂ ಸ್ಫೂರ್ತಿಯಿಂದ ಪಟಾಕಿಗಳನ್ನು ಸಿಡಿಸುತ್ತಿದ್ದರು.



ಜೀಪ್ ಜಾಥಾ- ರೈತ ಮುಖಂಡ ಭೀಮಸಿ ಕಲಾದಗಿ ಮಾತನಾಡುತ್ತಿರುವುದು

ಊರ ಮಧ್ಯದಲ್ಲಿ ಭಾರಿ ಬಹಿರಂಗ ಸಭೆ ನಡೆಯಿತು. ಕಾಂ.ಭೀಮಸಿ ಕಲಾದಗಿ, ಕಾಂ. ಅಣ್ಣಾರಾಯ ಈಳಿಗೇರ, ಕಾಂ. ಸುರೇಖಾ ರಜಪೂತ ಮುಂತಾದವರು ಮಾತನಾಡಿ ಕೇಂದ್ರ ಸರ್ಕಾರದ ಪಕ್ಷಪಾತ ನಿಲುವನ್ನು ಖಂಡಿಸಿದರು.

ಇಲ್ಲಿನ ಜನರಿಂದ ಬೀಳ್ಕೊಂಡು ಊರ ಹೊರಗೆ ಹೋಗುವವರೆಗೂ ಮೆರವಣಿಗೆ ಮುಂದುವರಿಯಿತು.

ಮೆರವಣಿಗೆ ಉದ್ದಕ್ಕೂ ಆಲಮಟ್ಟಿ ಆಣೆಕಟ್ಟಿನ ಎತ್ತರ ಹೆಚ್ಚಲೇಬೇಕು, ಸುಪ್ರೀಂ ಕೋರ್ಟಿಗೆ ಸಲ್ಲಿಸಿರುವ ಅಫಿಡವಿಟ್ ಹಿಂದಕ್ಕೆ ಪಡೆಯಬೇಕು, ವಾಜಪೇಯಿ ಸರಕಾರದ ಪಕ್ಷಪಾತ ನಿಲುವಿಗೆ ದಿಕ್ಕಾರ!

ಮುಂತಾದ ಘೋಷಣೆಯನ್ನು ಕೂಗುತ್ತಿದ್ದರು.

ತೊಂಟಾಪುರದಲ್ಲಿ

ಡಿಸೆಂಬರ 27 ರ ಮುಂಜಾನೆಯ ಸಮಯ ಕೆಂಬಾವುಟ ಎತ್ತಿ ಹಿಡಿದು ಮೈಸಾಸುರನ ಅರ್ಭಟದೊಂದಿಗೆ ನಮ್ಮ ಜೀಪು ಸಿಂದಗಿ ತಾಲೂಕಿನ ಮೊದಲ ಹಳ್ಳಿ ತೊಂಟಾಪುರ ಪ್ರವೇಶಿಸುತ್ತಿದ್ದಂತೆ ಭೀಮಗಾತ್ರದ ರೈತನೊಬ್ಬ ಗುಡಿಸಲಿನಿಂದ ಓಡುತ್ತಾ ಬಂದು ತಮ್ಮ ದಾರಿಗೆ ಅಡ್ಡಲಾಗಿ ನಿಂತ.

ಏರಿದ ಧ್ವನಿಯಲ್ಲಿ ಹೇಳಿದ 'ಇಳಿರಿ ಕೆಳಗಾ' ಎಂದ. ನಾವು ಗಾಬರಿಯಿಂದ ಯಾಕಪ್ಪ ನಾವು ಮುಂದಿನ ಊರಿಗೆ ಹೋಗಬೇಕು, ದಾರಿ ಬಿಡು ಎಂದೆವು. ಅದಕ್ಕೆ ಅವನು ಸುತಾರಾಂ ಒಪ್ಪಲಿಲ್ಲ. ಕೆಳಗ ಇಳಿರೀ, ಕೈಕಾಲು ಮುಖ ತೊಳಿಯಿರಿ, ಊಟ ಮುಗಿಸಿಕೊಂಡು ಹೋಗಿರಿ ಎಂದ. ಆಗ ನಾವು ಒಬ್ಬರ ಮುಖ ಒಬ್ಬ ನೋಡಿಕೊಂಡೆವು. ನಂತರ ಒಬ್ಬೊಬ್ಬರಾಗಿ ಕೆಳಗಿಳಿದು ಊಟಕ್ಕೆ ಕುಳಿತೆವು.

ಬಿಸಿಬಿಸಿಯಾದ ಸಜ್ಜಿ ರೊಟ್ಟಿ, ಕೆನೆಮೊಸರು, ಸೆಂಗಾದ ಚಟ್ನಿ, ಹಸಿ ಮೆಣಸಿನಕಾಯಿ ಚಟ್ನಿ, ಮಜ್ಜಿಗೆ, ಬೇಳೆಸಾರು ಪಟ್ಟಾಗಿ ಹೊಟ್ಟೆಗೆ ಇಳಿಸಿದೆವು.

ಮುಂಚಿತವಾಗಿ ನಾವು ಏನು ಹೇಳಿರಲಿಲ್ಲ. ಇಷ್ಟು ಜನರಿಗೆ ಅಡಿಗೆ ಹೇಗೆ ಮಾಡಿಸಿದೆ ಎಂದು ಕೇಳಿದೆ ಅದಕ್ಕೆ ಅವನು ನಮ್ಮ ಜೀಪು ಪಕ್ಕದ ಊರಿಗೆ ಬಂದಾಗಲೇ ಜಾಗೃತಗೊಂಡು ಮನೆಯಲ್ಲಿ ಹೆಂಡತಿ ಹಾಗೂ ಸೊಸೆಯಂದಿರಿಗೆ ಹೇಳಿದ್ದನಂತೆ 'ಜುವಾರ್ ನಮ್ಮ ರೈತ ಸಂಘ ಹೊಂದಾದ, ತಾಬಡಾ ತೋಬಡಾ ಅವರಿಗೆ ಕಡಿಮೆ ಬೀಳದಂತೆ ಅಡಿಗೆ ಮಾಡಬೇಕು' ಅಂತಾ. ಈತ ಗ್ರಾಮದ ರೈತ ಸಂಘದ ಅದ್ಯಕ್ಷ ಧೂಳಪ್ಪ ಅಚಿಗಾಂ ಅಂತಾ.

ಹೋಟೆಲ್ ಪಂಚತಾರಾ ಅಲ್ಲ ಹೋಟೇಲ ಡಿ-ಎಲೆವ್ವನ್

ಹೋಟೇಲ ಫೈವ್ ಸ್ಟಾರ್, ಹೋಟೆಲ ಸೆವ್ವೆನ್ ಸ್ಟಾರ್ ಮುಂತಾದ ಹೆಸರು ಕೇಳಿದ್ದೀರಿ ಆದರೆ ಹೋಟೇಲ ಡೀ-11 ಎಂದು ಕೇಳಿದ್ದೀರಾ. ಹಾಗಾದರೆ ಒಮ್ಮೆ ಹುಬ್ಬಳ್ಳಿಗೆ ಬಂದಾಗ ತಪ್ಪದೇ ಉಣಕಲ್ ಕೆರೆಗೆ ಬನ್ನಿ ಅಲ್ಲಿದೆ ಈ ಹೋಟೇಲ.

ಇದಕ್ಕಿಟ್ಟ ಹೆಸರು ಬೇರೆ ಏನೋ ಇದೆ. ಆದರೆ ಇಂಜಿನಿಯರುಗಳು-ಗುತ್ತಿಗೆದಾರರು ಕರೆಯುವ ಹೆಸರೇ ಡೀ-11(ಡಿಸ್ಟ್ರಿಬ್ಯೂಟರ್-11) ಅಂತಾ. ಅಂದರೆ ಕೇಳಿ ಇದರ ಕಥೆ. ಇದರ ಮಾಲಿಕರು ಆರ್.ಎನ್. ಶೆಟ್ಟಿ ಅಂತ. ಒಬ್ಬ ದೈತ್ಯ ಗುತ್ತಿಗೆದಾರರು. ಕೃಷ್ಣಾ ಯೋಜನೆಯ ಇಂಡಿ ಉಪಕಾಲುವೆಯ ಅಡಿ ಬರುವ 11ನೇ ವಿತರಣಾ ಕಾಲುವೆ ಸುಮಾರು 100 ಕೋಟಿ ರೂ. ಮಿಕ್ಕಿ ಅಂದಾಜು ವೆಚ್ಚದ ಯೋಜನೆ. ಇದನ್ನು ನಿರ್ಮಿಸಲು ಗುತ್ತಿಗೆ ಹಿಡಿದರು ಈ ಶೆಟ್ಟರು. ಆದರೆ ನೀರು ಬರೋದಕ್ಕೇ ಮುನ್ನವೇ ಈ ಕಾಲುವೇಗಳು ಕಿತ್ತಾಡಿ ಹೋಗಿವೆ. ಹೋಗಲಿ ಬಿಡಿ ಉಣಕಲ್ ಕೆರಿ ಒಡೆದುಕೊಂಡು ಹೋದರು ಈ ಹೋಟಲಿಗೆ ಏನೂ ಆಗೋದಿಲ್ಲ. ಈಗ ತಿಳಿತಲ್ಲ ಡಿ-11 ಹೋಟೆಲ ಕಥೆ.

ಟಾಸ್ಕ್ ಫೋರ್ಸ್ ಮತ್ತು ಕಾರ್ಮಿಕರ ಹಕ್ಕುಗಳ ದಮನ

ಇ.ಕೆ.ಎನ್. ರಾಜನ್


13ನೇ ಲೋಕಸಭೆ ಅಸ್ತಿತ್ವಕ್ಕೆ ಬಂದಿದೆ. ಬಿಜೆಪಿ ನಾಯಕತ್ವದ ಒಕ್ಕೂಟ ಆಡಳಿತದ ಜವಾಬ್ದಾರಿ ವಹಿಸಿದೆ. ಮಂತ್ರಿಗಳು ಅವರವರ ಕುರ್ಚಿಯಲ್ಲಿ ಕೂತು ಖಾತೆ ವಹಿಸಿಕೊಳ್ಳುವ ಮೊದಲೇ ಕೈಗಾರಿಕೋದ್ಯಮಿಗಳು, ವಾಣಿಜ್ಯ ಲಾಭ ತನ್ನ ಪ್ರಭಾವ ಬೀರಲು ಆರಂಭಿಸಿವೆ. ಕೈಗಾರಿಕೋದ್ಯಮಿಗಳು ತಮ್ಮ ಬೇಡಿಕೆ ಪಟ್ಟಿ ತೆಗೆದುಕೊಂಡು ಕೇಂದ್ರ ಮಂತ್ರಿಗಳು ಹಿಂದೆ ಓಡಾಡಲು ಆರಂಭಿಸಿದ್ದಾರೆ. ಮಂತ್ರಿಗಳಾಗಲೀ ಕೈಗಾರಿಕೋದ್ಯಮಿಗಳ ಬೇಡಿಕೆಗಳನ್ನು ಗಂಭೀರವಾಗಿ ಜಾರಿ ಮಾಡುವುದಾಗಿ ಭರವಸೆ ಕೊಟ್ಟಿರುತ್ತಾರೆ. ಕೈಗಾರಿಕೋದ್ಯಮಿಗಳ ಬೇಡಿಕೆ ಪತ್ರ ತೆಗೆದುಕೊಂಡು ಮಂತ್ರಿಗಳ ಹಿಂದೆ ಓಡಾಡುವುದರಲ್ಲಿ ಕಾನ್‌ಫಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ (ಸಿಐಐ) ಮುಖಂಡರು ಮುಂಚೂಣಿಯಲ್ಲಿದ್ದಾರೆ. ಇವರ ಬೇಡಿಕೆ ಪತ್ರದಲ್ಲಿ 13 ಬೇಡಿಕೆಗಳನ್ನು ಮಂಡಿಸಿರುತ್ತಾರೆ. ಇವುಗಳಲ್ಲಿ ಮುಖ್ಯವಾದವು ಕಾರ್ಖಾನೆಗಳಿಗೆ ಇರುವಂತಹ ಎಲ್ಲಾ ನಿಬಂದನೆಗಳನ್ನು ರದ್ದು ಮಾಡಬೇಕು, ಐಆರ್‌ಎ ಮಸೂದೆಯನ್ನು ಕೂಡಲೇ ತರಬೇಕು, ಕಪ್ಪು ಹಣ ಚಲಾವಣೆಗೊಳಿಸಲು ಕಾನೂನನ್ನು ತರಬೇಕು, ಕಂಪನಿ ಕಾಯಿದೆಗಳು ಬದಲಾಗಬೇಕು, ವಿದೇಶಿ ವಿನಿಮಯ ಮಸೂದೆಯನ್ನು ಜಾರಿಗೆ ತರಬೇಕು. ಈ ಎಲ್ಲಾ ಬೇಡಿಕೆಗಳನ್ನು 90 ದಿನದೊಳಗೆ ಮಸೂದೆಯಾಗಿ ಲೋಕಸಭೆಯಲ್ಲಿ ಜಾರಿ ಮಾಡಬೇಕು. ವರ್ಮಾ ಆಯೋಗದ ಶಿಫಾರಸ್ಸುಗಳನ್ನು ಕೂಡಲೇ ಜಾರಿಗೆ ತಂದು ಬ್ಯಾಂಕಿಂಗ್ ರಂಗವನ್ನು ಖಾಸಗೀಕರಣಗೊಳಿಸಿ, ಬ್ಯಾಂಕಿಂಗ್ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ತರುವುದು, ಕೇಂದ್ರ ಇತ್ಯಾದಿ ಮುಖ್ಯವಾದವು. ಹೊಸ ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯನ್ನು ಆರಂಭಿಸುವುದಕ್ಕೆ ಮುಂಚಿತವಾಗಿ ಬಂಡವಾಳಗಾರರ ಲಾಬಿಯ ಬೇಡಿಕೆಗಳನ್ನು ಅಂಗೀಕರಿಸುವ ರೀತಿಯಲ್ಲಿ ಪತ್ರಿಕೆ ಹಾಗೂ ಎಲೆಕ್ಟ್ರಾನಿಕ್ ಪ್ರಸಾರ ಮಾಧ್ಯಮಗಳು ಪ್ರಚಾರ ಆರಂಭ ಮಾಡಿದ್ದೇವೆ. ಕೇಂದ್ರ ಸರ್ಕಾರ ಶೀಘ್ರವಾಗಿ ತರುವಂತಹ ಕಾನೂನು ತಿದ್ದುಪಡಿಗಳನ್ನು ಶೀಘ್ರವೇ ಜಾರಿಗೆ ತರುತ್ತೇವೆ, ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು ಕೂಡಲೇ ಖಾಸಗೀಕರಣಗೊಳಿಸುವುದು, ಬ್ಯಾಂಕ್‌ಗಳನ್ನು ಖಾಸಗೀಕರಣಗೊಳಿಸುವುದು, ಕೈಗಾರಿಕೋದ್ಯಮಿಗಳ ಲಾಭಿಯ ಬೇಡಿಕೆಗಳನ್ನು ಕೂಡಲೇ ಜಾರಿಗೊಳಿಸುವಂತಹುದು ಸರ್ಕಾರದ ಆದ್ಯತೆಯೆಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ ದೇಶದ ಪ್ರಧಾನಿ ವಾಜಪೇಯಿಯವರು ಹೇಳಿರುತ್ತಾರೆ.

ಅಧಿಕಾರಕ್ಕೆ ಮರಳಿ ಬಂದಂತಹ ಬಿಜೆಪಿ ಸರ್ಕಾರ ಜಾರಿಗೆ ತರಲು ಹೊರಟಿರುವ ಕಾರ್ಮಿಕ ವಿರೋಧಿ ಕಾನೂನುಗಳು ಟ್ರೇಡ್ ಯೂನಿಯನ್ ಚಳುವಳಿಯನ್ನೇ ನಾಶ ಮಾಡಬೇಕೆನ್ನುವ ಉದ್ದೇಶ ಹೊಂದಿದೆ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವಂತಹ ಸರ್ಕಾರಗಳು ಉದಾರೀಕರಣದ ಹೆಸರಿನಲ್ಲಿ ಆರ್ಥಿಕ ರಂಗದಲ್ಲಿ ಮಾಡಿರುವ ದುರಾಡಳಿತವೇ ಕಾರಣವಾಗಿದೆ.

ಕಾರ್ಮಿಕ ರಂಗಗಳಲ್ಲಿ ಸುಧಾರಣೆ ತರುವ ನೆಪದಲ್ಲಿ ಖಾಯಂ ಕೆಲಸಗಾರರನ್ನು ಕಡಿಮೆಗೊಳಿಸುವುದು ಹಾಗೂ ಗುತ್ತಿಗೆ ಕೆಲಸದ ಪದ್ಧತಿ ಜಾರಿ ಮಾಡುವುದು, ಕಾರ್ಮಿಕರನ್ನು ಯಾವಾಗ ಬೇಕಾದರು ಕೆಲಸದಿಂದ ತೆಗೆದುಹಾಕಲು ಅಧಿಕಾರವನ್ನು ಮಾಲೀಕರಿಗೆ ಕೊಡುವ ಕಾನೂನನ್ನು ತರುವುದು, ಇಂದು ಕಾರ್ಮಿಕರಿಗೆ ರಕ್ಷಣೆ ಇರುವಂತಹ ಕಾನೂನನ್ನು ತೆಗೆದುಹಾಕುವುದು. ಕಾರ್ಮಿಕ ಸಂಘ ರಚಿಸುವುದನ್ನು ತಡೆಗಟ್ಟುವುದು ಇತ್ಯಾದಿ ಕಾನೂನನ್ನು ತರಲು ಬಿಜೆಪಿ ಸರ್ಕಾರ ಹೊರಟಿದೆ.

ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಲು ಹೊರಟಿರುವುದು ದೇಶದ ಕಾರ್ಮಿಕರಿಗೆ ಈ ಹಿಂದೆಯೇ ಅರಿವಿಗೆ ಬಂದಿರುತ್ತದೆ.

ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗವನ್ನು ರಚನೆ ಮಾಡಿದಾಗ, ಉದಾರೀಕರಣದ ಆರ್ಥಿಕ ನೀತಿಗಳಿಗೆ ಅನುಗುಣವಾಗಿ ಇಂದು ಇರುವಂತಹ ಕಾರ್ಮಿಕ ಕಾಯಿದೆಗಳನ್ನು ಸಡಿಲಗೊಳಿಸುವುದಾಗಿ ಅಂದಿನ ಕೇಂದ್ರ ಕಾರ್ಮಿಕ ಮಂತ್ರಿಯವರು ಹೇಳಿರುತ್ತಾರೆ. ಇದಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ತರಲು ನಾಲ್ಕು ಜನರ ಒಂದು ಸಮಿತಿಯನ್ನು ರೂಪಿಸಿ ಈ ಸಮಿತಿಗೆ ಟಾಸ್ಕ್‌ಫೋರ್ಸ್ ಎಂದು ಅಂದಿನ ಪ್ರಧಾನ ಮಂತ್ರಿ ವಾಜಪೇಯಿ ಕಛೇರಿಯಿಂದ ಹೆಸರಿಸಲಾಗಿದೆ. ಈ ಸಮಿತಿಯಲ್ಲಿರುವ ಎಲ್ಲಾ ಜನರು ದೇಶದ ಗುತ್ತೇದಾರಿ ಬಂಡವಾಳ ಕುಟುಂಬಗಳವರಾಗಿರುತ್ತಾರೆ. ಇವರು ಬಿರ್ಲಾ ಕುಟುಂಬಕ್ಕೆ ಸೇರಿದ ಕೆ.ಎಮ್.ಬಿರ್ಲಾ, ಬಾಂಬೆ ಡೈಯಿಂಗ್ ಉದ್ಯಮದ ನುಸ್ಲಿವಾಡಿಯಾ, ಮಿಸ್ಪಲ್‌ಸ್ಟೀಲ್‌ನ ಪಿ.ಕೆ.ಮಿಟ್ಟಲ್ ಹಾಗೂ ಟಾಟಾ ಗುಂಪಿನ ರತನ್ ಟಾಟಾ ಆಗಿರುತ್ತಾರೆ. ಇವರಿಗೆ ಕಾರ್ಮಿಕ ಕಾಯಿದೆ ಸೇರಿದಂತೆ ಕೈಗಾರಿಕೆಗಳಿಗೆ ಸಂಬಂಧಪಟ್ಟ ಕಾನೂನುಗಳ ತಿದ್ದುಪಡಿ ಬಗ್ಗೆ ಶಿಫಾರಸ್ಸು ಮಾಡಲು ಜವಾಬ್ದಾರಿ ನೀಡಲಾಗಿದೆ.



ಇದರ ಬಗ್ಗೆ ಯೋಜನಾ ಆಯೋಗ ಸಮಗ್ರವಾಗಿ ಒಂದು ಅಧ್ಯಯನ ನಡೆಸಿರುತ್ತದೆ. ಟಾಸ್ಕ್‌ಫೋರ್ಸ್‌ನ ಶಿಫಾರಸ್ಸುಗಳು ಹಾಗೂ ಈ ಬಗ್ಗೆ ಯೋಜನಾ ಆಯೋಗ ನಡೆಸಿದ ಅಧ್ಯಯನ ವರದಿಗಳನ್ನು ಒಂಬತ್ತನೇ ಪಂಚವಾರ್ಷಿಕ ಯೋಜನೆ ಮುಂದೆ ಇಡಲಾಗುತ್ತಿದೆ. ಕೇಂದ್ರ ಕಾರ್ಮಿಕ ಮಂತ್ರಾಲಯ ಹಾಗೂ ಕೈಗಾರಿಕೋದ್ಯಮಿಗಳ ಪ್ರಮುಖರು ಕಾರ್ಮಿಕ ಕಾನೂನು ತಿದ್ದುಪಡಿಗಳ ಬಗ್ಗೆ ಒಂದು ನೀಲಿ ನಕ್ಷೆಯನ್ನು ತಯಾರು ಮಾಡಿರುತ್ತಾರೆ. ಕಾರ್ಮಿಕ ಕಾನೂನನ್ನು ತಿದ್ದುಪಡಿ ಮಾಡುವ ಸಮಿತಿಗಳಲ್ಲಿ ಕಾರ್ಮಿಕ ರಂಗದ ನಾಯಕರನ್ನಾಗಲಿ, ಪ್ರತಿನಿಧಿಗಳನ್ನಾಗಲಿ ಅಥವಾ ಕಾರ್ಮಿಕರನ್ನಾಗಲಿ ಸೇರಿಸಿರುವುದಿಲ್ಲ.

ಟಾಸ್ಕ್ ಫೋರ್ಸ್‌ನ ಶಿಫಾರಸ್ಸುಗಳ ಹಾಗೂ ಕೈಗಾರಿಕೋದ್ಯಮಿಗಳು ಸಿದ್ಧಪಡಿಸಿರುವ ನೀಲಿ ನಕ್ಷೆಯ ಗುರಿ ಒಂದೇ ಆಗಿರುತ್ತದೆ. ಇದರಲ್ಲಿ ಕೈಗಾರಿಕಾ ವಿವಾದ ಕಾಯಿದೆ, ಟ್ರೇಡ್ ಯೂನಿಯನ್ ಕಾಯಿದೆ, ಗುತ್ತಿಗೆ ಕಾರ್ಮಿಕರ ನಿಷೇದ ಕಾಯಿದೆ ಹಾಗೂ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ಕಾನೂನು ವ್ಯವಸ್ಥೆಗೆ ತಿದ್ದುಪಡಿ ತರುವುದು ಇವರೆಲ್ಲರ ಗುರಿಯಾಗಿರುತ್ತದೆ.

ಪ್ರಧಾನ ಮಂತ್ರಿಗಳ ಕಛೇರಿ ನೇಮಿಸಿದ ಟಾಸ್ಕ್ ಫೋರ್ಸ್‌ನವರು ವಿವಿಧ ಕಾರ್ಮಿಕ ಕಾಯಿದೆಗಳಿಂದ ಕೈಗಾರಿಕೆಗಳನ್ನು ಮುಕ್ತ ಮಾಡಬೇಕೆಂದು ಶಿಫಾರಸ್ಸನ್ನು ಮಂಡಿಸಿರುತ್ತಾರೆ. ಕೆಲಸಕ್ಕೆ ಅಡ್ಡಿ ಮಾಡುವುದು, ಲಾಕ್‌ಔಟ್ ಮಾಡಿಸುವ ರೀತಿಯಲ್ಲಿ ನಡೆದುಕೊಳ್ಳುವುದಾಗಲೀ ಮುಂತಾದ ಕ್ರಮಗಳಿಂದ ಮುಕ್ತವಾಗಿಸುವ ರೀತಿಯಲ್ಲಿ ಕೈಗಾರಿಕಾ ವಿವಾದ ಕಾಯಿದೆಗೆ ತಿದ್ದುಪಡಿ ಮಾಡಬೇಕೆಂದು ಈ ಟಾಸ್ಕ್ ಫೋರ್ಸ್ ಶಿಫಾರಸ್ಸು ಮಾಡಿದೆ.

100ಕ್ಕೂ ಹೆಚ್ಚು ಜನರು ಕೆಲಸ ಮಾಡುವಂತಹ ಉದ್ಯಮವನ್ನು ಮುಚ್ಚಬೇಕಾದರೆ, ಲೇಆಫ್ ಮಾಡಬೇಕಾದರೆ ಹಾಗೂ 1000ಕ್ಕೂ ಹೆಚ್ಚು ಕೆಲಸಗಾರರು ಕೆಲಸ ಮಾಡುವ ಕಾರ್ಖಾನೆ ಮುಚ್ಚಬೇಕಾದರೆ ಕೈಗಾರಿಕಾ ವಿವಾದ ಕಾಯಿದೆ ಚಾಪ್ಟರ್ 5 ರಂತೆ ಸರ್ಕಾರದ ಅನುಮತಿ ಅಗತ್ಯವಿಲ್ಲ ಎಂದು ತಿದ್ದುಪಡಿ ತರಲು ಟಾಸ್ಕ್ ಫೋರ್ಸ್ ಸೂಚಿಸಿದೆ. ಖಾಯಂ ಸ್ವಭಾವ ಕೆಲಸವನ್ನು ಗುತ್ತಿಗೆ ಕಾರ್ಮಿಕರಿಂದ ಮಾಡಿಸಬಹುದು ಎಂಬ ತಿದ್ದುಪಡಿ ತರಲು ಸಹ ಈ ಟಾಸ್ಕ್ ಫೋರ್ಸ್ ಒತ್ತಾಯ ಮಾಡಿರುತ್ತದೆ.

ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆಯಲ್ಲಿರುವ ಕೆಲಸದ ಅವಧಿಗೆ ಸಂಬಂಧಪಟ್ಟ ಕಾನೂನಿನಲ್ಲಿರುವ 8 ಗಂಟೆ ಕೆಲಸ ಅವಧಿ ಬದಲಾಯಿಸುವುದು, ವಿಶ್ರಾಮದ ಅವಧಿ ಕಡಿಮೆ ಮಾಡುವುದು ಇತ್ಯಾದಿಗಳನ್ನು ತಿದ್ದುಪಡಿ ಮೂಲಕ ತರಲು ಪ್ರಧಾನ ಮಂತ್ರಿಗಳು ನೇಮಿಸಿರುವ ಟಾಸ್ಕ್ ಫೋರ್ಸ್ ಹೇಳಿರುತ್ತದೆ. ಒಂದು ಸಂಸ್ಥೆಯಲ್ಲಿ ಕೆಲಸದ ಅವಧಿಯನ್ನು ನಿಯಂತ್ರಿಸಲು ಪ್ಲಾಗ್ ಸಿಂಪಲ್ ಟೈಮ್ ಹೆಸರಿನಲ್ಲಿ ತಿದ್ದುಪಡಿ ತರಲು ಹಾಗೂ ಈ ಮೂಲಕ ಸಂಸ್ಥೆಗೆ ಬೇಕಾದ ದುಡಿಯುವ ಅವಧಿಯನ್ನು ಏರ್ಪಾಡು ಮಾಡುವಂತಹ ಹಕ್ಕು ಕೇವಲ ಮಾಲೀಕರಿಗೆ ಇರಬೇಕು ಎಂದು ಶಿಫಾರಸ್ಸುಗಳು, ಮಾಲೀಕರು ಹೇಳುತ್ತಿದ್ದಾರೆ. ಆದುದರಿಂದ ಕಾರ್ಮಿಕ ಕಾಯಿದೆಯನ್ನೇ ತೆಗೆದು ಹಾಕಬೇಕು. ಕಾರ್ಮಿಕರಿಗೆ ಸಂಬಂಧಪಟ್ಟ ಜವಾಬ್ದಾರಿಗಳಿಂದ ಬಿಡುಗಡೆ ಮಾಡುವ ಜವಾಬ್ದಾರಿಯನ್ನು ಸರ್ಕಾರ ವಹಿಸಬೇಕು ಎಂದು ಕೈಗಾರಿಕೋದ್ಯಮಿಗಳು ಹೇಳುತ್ತಿದ್ದಾರೆ. ಈ ಶಿಫಾರಸ್ಸನ್ನು ಒಂಬತ್ತನೇ ಪಂಚವಾರ್ಷಿಕ ಆಯೋಗ ತನ್ನ ವರದಿಯಲ್ಲಿ ಎತ್ತಿ ಹಿಡಿದಿದೆ.

ಕಾರ್ಮಿಕರಿಗೆ ಸಂಬಂಧಪಟ್ಟ ಎಲ್ಲಾ ಜವಾಬ್ದಾರಿಗಳಿಂದ ಮಾಲೀಕರನ್ನು ಬಿಡುಗಡೆ ಮಾಡುವುದು, ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಬೇಕು ಎಂಬ ಒಂದು ಯೋಜನಾಬದ್ಧ ಸಿದ್ಧಾಂತವನ್ನು ಈ ಆಯೋಗ ಮುಂದೆ ಇಟ್ಟಿದೆ. ಉತ್ಪನ್ನ ವ್ಯವಸ್ಥೆಗೆ ಇರುವ ಎಲ್ಲಾ ಅಡ್ಡಿಗಳನ್ನು ಬದಲಾಯಿಸುವುದು ಅಲ್ಲದೆ, ಲೈಸೆನ್ಸಿಂಗ್ ನಿಯಂತ್ರಣಗಳನ್ನು ಇಲ್ಲದೆ ಮಾಡುವುದು, ಒಂದು ಹೊಸ ಆರ್ಥಿಕ ವ್ಯವಸ್ಥೆಗೆ ಅಡಿಪಾಯ ಹಾಕುವುದು, ಪೈಪೋಟಿ ಆರ್ಥಿಕ ವ್ಯವಸ್ಥೆಯನ್ನು ತರುವುದೇ ಈ ಎಲ್ಲಾ ಕ್ರಮಗಳ ಮೂಲಭೂತ ಕಣ್ಣೋಟವಾಗಿದೆ. ಇದಕ್ಕೆ ಬೇಕಾದಂತೆ ಕಾರ್ಮಿಕ ಕಾಯಿದೆಗಳಲ್ಲಿ ತಿದ್ದುಪಡಿ ಮಾಡಬೇಕೆಂದು ಒಂಭತ್ತನೇ ಪಂಚವಾರ್ಷಿಕ ಆಯೋಗ ಹೇಳಿರುತ್ತದೆ.

ಅವಶ್ಯಕತೆ ಇಲ್ಲದ ಕಾರ್ಮಿಕ ಕಾನೂನುಗಳನ್ನು ಕೂಡಲೇ ರದ್ದು ಮಾಡುವುದು, ಕಾರ್ಮಿಕ ಕಾಯಿದೆಗಳಲ್ಲಿ ತಿದ್ದುಪಡಿ ತರುವುದು ಇವುಗಳಿಗೆ ಬೇಕಾದ ಸೂಕ್ತ ನಿಯಂತ್ರಣ ಹಾಗೂ ಅಧಿಸೂಚನೆ ತರಬೇಕೆಂದು ಆಯೋಗ ಹೇಳಿದೆ. ಕಾರ್ಮಿಕರ ರಕ್ಷಣೆಗೆ ಮಾಡಲಾಗಿದೆ. ಓವರ್ ಟೈಂ ವೇತನಕ್ಕೆ ಎರಡುಪಟ್ಟು ವೇತನ ಕೊಡಬೇಕು, ಕಾಯಿಲೆ ರಜೆ, ಗಳಿಕೆಯ ರಜೆ ಇತ್ಯಾದಿ ಸೇರಿದಂತೆ ಇಂದು ಕಾನೂನಿನಲ್ಲಿರುವ ಸೌಲಭ್ಯಗಳನ್ನು ಕೂಡಲೇ ತಿದ್ದುಪಡಿ ಮೂಲಕ ಬದಲಾಯಿಸಬೇಕು ಇಲ್ಲವೇ ತೆಗೆದು ಹಾಕಬೇಕು ಎಂದು ಟಾಸ್ಕ್ ಫೋರ್ಸ್ ಹೇಳಿರುತ್ತದೆ. ಕಾರ್ಮಿಕರ ಹಾಜರಿ ಪುಸ್ತಕ ಇಡುವ ಕಾನೂನಿನಿಂದ ಮಾಲೀಕರನ್ನು ಬಿಡುಗಡೆ ಮಾಡಬೇಕೆಂದು ಹಾಗೂ ಮಾಲೀಕರಿಗೆ ಅನುಗುಣವಾದ ರೀತಿಯಲ್ಲಿ ಬೋನಸ್, ಇಎಸ್‌ಐ, ಕಾನೂನಿನಲ್ಲಿ, ಭವಿಷ್ಯ ನಿಧಿ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕೆಂದು ಟಾಸ್ಕ್ ಫೋರ್ಸ್ ಒತ್ತಿ ಹೇಳಿರುತ್ತದೆ.

ಕಾರ್ಮಿಕ ಇಲಾಖೆ ಅಧಿಕಾರಿಗಳ ತಪಾಸಣೆಯಿಂದ ಮಾಲೀಕರಿಗೆ ರಕ್ಷಣೆ ಕೊಡಿಸುವಂತೆ ಈ ಟಾಸ್ಕ್‌ಫೋರ್ಸ್ ಸೂಚಿಸಿದೆ. ಒಂಬತ್ತನೇ ಪಂಚವಾರ್ಷಿಕ ಯೋಜನೆ ವರದಿಯಲ್ಲಿ ಮಾಲೀಕರಿಗೆ ರಕ್ಷಣೆ ಕೊಡುವ ರೀತಿಯಲ್ಲಿ ಟಾಸ್ಕ್ ಫೋರ್ಸ್‌ನ ಶಿಫಾರಸ್ಸನ್ನು ಸೇರಿಸಲಾಗಿದೆ.

ಇಂದು ಜಾರಿಯಲ್ಲಿರುವ ಎಲ್ಲಾ ಕಾರ್ಮಿಕ ಕಾಯಿದೆಗಳನ್ನು ತಿದ್ದುಪಡಿ ಮಾಡಿ ಏಕೈಕ ಕಾರ್ಮಿಕ ಕಾಯಿದೆ ತರಬೇಕೆಂದು ಒಂಬತ್ತನೇ ಪಂಚವಾರ್ಷಿಕ ಯೋಜನೆ ವರದಿಯಲ್ಲಿ ಸೇರಿಸಲಾಗಿದೆ. ಸಿಂಗಲ್ ಲೇಬರ್ ಕೋಡ್ ರೀತಿಯಲ್ಲಿ ಕಾರ್ಮಿಕ ಕಾಯಿದೆಗೆ ತಿದ್ದುಪಡಿ ತರಲು ಕೈಗಾರಿಕೋದ್ಯಮಿಗಳ ಲಾಬಿಯ ಜನರನ್ನು ತಿದ್ದುಪಡಿ ಸೂಚಿಸುವ ಸಮಿತಿಗಳಲ್ಲಿ ನೇಮಿಸಲು ಈಗಾಗಲೇ ಶಿಫಾರಸ್ಸು ಮಾಡಲಾಗಿದೆ.

ಇಂದು ಕಾರ್ಮಿಕರಿಗೆ ಸಂವಿಧಾನದಲ್ಲಿ ಇರುವ ರಕ್ಷಣೆಯಿಂದ ಕಾರ್ಮಿಕ ನ್ಯಾಯಾಲಯಗಳಲ್ಲಿ ಹೆಚ್ಚಿನ ವಿವಾದಗಳು ಇವೆ, ಕಾರ್ಮಿಕರಿಗೆ ಸಂವಿಧಾನದಲ್ಲಿ ರಕ್ಷಣೆ ಕಡಿಮೆ ಮಾಡಿ, ಕಾರ್ಮಿಕ ನ್ಯಾಯಾಲಯಗಳೇ ಇರಬಾರದು ಎಂಬ ಶಿಫಾರಸ್ಸು ಸಹ ಮಾಡಲಾಗಿದೆ. ಇಂದು ಇರುವ ಕಾರ್ಮಿಕ ಕಾಯಿದೆಗಳಿಂದ ತಮಗೆ ಬಹಳ ತೊಂದರೆ ಇರುವಂತಹ ಎಲ್ಲಾ ನಿಯಂತ್ರಣಗಳನ್ನು ರದ್ದು ಮಾಡಬೇಕು ಎಂದು ಈ ಆಯೋಗ ಗಟ್ಟಿಯಾಗಿ ಅಭಿಪ್ರಾಯಪಟ್ಟಿದೆ.

ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಜನರಿಗೆ ಪ್ರಯೋಜನಕರವಾದ ಕಾನೂನನ್ನು ತಿದ್ದುಪಡಿಮಾಡಿ ಮಾಲೀಕರು ಹಾಗೂ ಕಾರ್ಮಿಕರು ಸೌಹಾರ್ದಯುತವಾಗಿ ಇರಬೇಕು ಎಂಬ ನೆಪದಲ್ಲಿ ಯೋಜನಾ ಆಯೋಗ ಕಾರ್ಮಿಕರು ಹಾಗೂ ಮಾಲೀಕರು ಸೇರಿ ಉತ್ಪನ್ನವನ್ನು ಹೆಚ್ಚು ಮಾಡಬೇಕು ಹಾಗೂ ಈ ಎಲ್ಲಾ ಬಗ್ಗೆ ಸರ್ಕಾರಕ್ಕೆ ನೆಪ ಮಾತ್ರ ನಿಯಂತ್ರಣ ಇರಬೇಕೆಂದು ಸೂಚಿಸಿದೆ.

ಪ್ರದಾನ ಮಂತ್ರಿ ಕಛೇರಿ ನೇಮಿಸಿದ ಟಾಸ್ಕ್ ಫೋರ್ಸ್ ವರದಿ ಹಾಗೂ ಒಂಬತ್ತನೇ ಪಂಚವಾರ್ಷಿಕ ಯೋಜನೆ ವರದಿ ಎರಡೂ ಒಂದ ಶಬ್ದಗಳಲ್ಲಿವೆ. ಮುಂದೆ ಸರ್ಕಾರ ಕೈಗೊಳ್ಳುವ ಹೀನಾಯವಾದ ಕ್ರಮಗಳಿಗೆ ಇದು ಮುನ್ಸೂಚನೆ ಆಗಿದೆ. ಮಾಲೀಕರಿಗೆ ಕೇವಲ ಲಾಭ ಮಾಡುವ ವ್ಯವಸ್ಥೆಯನ್ನು ರೂಪಿಸುವುದು, ಸಂಘಟಿತರಾದ ಕಾರ್ಮಿಕರನ್ನು ಪುನಃ ಗುಲಾಮರನ್ನಾಗಿ ಮಾಡುವಂತಹ ವ್ಯವಸ್ಥೆಯನ್ನು ತರುವುದು ಈ ಸಾಮಾನ್ಯ ಮನುಷ್ಯನ ಅಸ್ತಿತ್ವಕ್ಕೆ ಕೊಡಲಿ ಏಟು ಕೊಡುವ ರೀತಿಯಲ್ಲಿ ಸರ್ಕಾರ ಹೊರಟಿದೆ.

ದುಡಿದು ತಿನ್ನುವಂತಹ ಹಕ್ಕು ಮಾನವನ ಒಂದು ಪ್ರತಿಷ್ಠಿತ ಹಕ್ಕು ಆಗಿರುತ್ತದೆ. ಇದನ್ನು ಕಾಪಾಡಬೇಕಾದರೆ ಇಲ್ಲಾ ಸಂಘಟಿತ ದುಡಿಯುವ ಜನರು ಅಸಂಘಟಿತ ವಲಯದ ದುಡಿಯುವ ಜನರ ಜೊತೆಯಲ್ಲಿ ಸೇರಿ ಮೇಲ್ಕಾಣಿಸಿದ ಧೋರಣೆಗಳನ್ನು ಜಾರಿ ಮಾಡುವವರ ವಿರುದ್ಧ ಕಾರ್ಖಾನೆ ಗೇಟ್‌ನಲ್ಲಿ ಹಾಗೂ ಬೀದಿಯಲ್ಲಿ ಕೂಡ ಎದುರಿಸಿ ಹೋರಾಟ ಮಾಡಬೇಕಾಗಿದೆ. ಇಂದಿನ ಈ ಪರಿಸ್ಥಿತಿಯಲ್ಲಿ ಕಾರ್ಮಿಕರ ವಿಶಾಲವಾದ ಐಕ್ಯತೆಯನ್ನು ಈ ಬೆಳೆಸಿದರೆ ಮಾತ್ರ ಕಾರ್ಮಿಕರಿಗೆ ಹಾಗೂ ಅ ಸಂಘಟನೆಗಳಿಗೆ ಮುಂದುವರೆಯಲು ಸಾಧ್ಯ ಎಂದು ಪ್ರತಿಜ್ಞೆ ಕೈಗೊಳ್ಳಬೇಕಾಗಿದೆ.

ಪಾರ್ಲಿಮೆಂಟರಿ ಚುನಾವಣೆ ಫಲಿತಾಂಶಗಳ ಮಾರ್ದನಿ

ಯೆಲ್ಸಿನ್ ರಾಜೀನಾಮೆ

ಮುಳುಗುತ್ತಿರುವ ರಶ್ಯನ್ ಬಂಡವಾಳಶಾಹಿಯ ಹುಲ್ಲುಗಡ್ಡಿ



ಯೆಲ್ಸಿನ್ ವಿದಾಯ, ಅವರಜೊತೆಯಲ್ಲಿ ಪುಟಿನ್

20ನೇ ಶತಮಾನದ ಕೊನೆಯ ದಿನ ರಶ್ಯನ್ ಅಧ್ಯಕ್ಷ ಯೆಲ್ಸಿನ್ ತಮ್ಮ ರಾಜೀನಾಮೆ ಘೋಷಿಸಿ ಇಡೀ ಜಗತ್ತಿಗೇ ಆಶ್ಚರ್ಯ ತಂದಿದ್ದಾರೆ. ತೀವ್ರಗೊಳ್ಳುತ್ತಿರುವ ಚೆಚೆನ್ಯಾ ಯುದ್ಧ, ಪಾರ್ಲಿಮೆಂಟರಿ ಚುನಾವಣೆಗಳ ಹಿನ್ನೆಲೆಯಲ್ಲಿ ಈ ರಾಜೀನಾಮೆ ಮಹತ್ವದ ಬೆಳವಣಿಗೆ. ಯೆಲ್ಸಿನ್ ರಾಜೀನಾಮೆ ಬಗ್ಗೆ ಹಲವು ಊಹಾಪೋಹಗಳು ಎದ್ದಿವೆ. ಯೆಲ್ಸಿನ್ ತನ್ನ ಕತ್ತು ಉಳಿಸಿಕೊಳ್ಳುವುದಕ್ಕೆ ಹೀಗೆ ಮಾಡಿದ್ದಾರೆ. ಯೆಲ್ಸಿನ್ ಭಂಟ ಪ್ರಧಾನಿ ಪುಟಿನ್‌ರನ್ನು ಅಧ್ಯಕ್ಷ ಚುನಾವಣೆಯಲ್ಲಿ ಗೆಲ್ಲಿಸಲು ಈ ನಾಟಕ ಅಮೆರಿಕನ್ನರ ಒತ್ತಡ ಎಂದು ಇನ್ನು ಕೆಲವರು. ಪಾರ್ಲಿಮೆಂಟರಿ ಚುನಾವಣೆಯಲ್ಲಿ ಕಮ್ಯುನಿಸ್ಟರು ಮೊದಲ ಸ್ಥಾನದಲ್ಲಿರುವ ಫಲಿತಾಂಶ ಬಂದ ಹಿನ್ನೆಲೆಯಲ್ಲಿ ಮುಳುಗುತ್ತಿರುವ ರಶ್ಯನ್ ಬಂಡವಾಳಶಾಹಿ ಬದುಕಿಕೊಳ್ಳಲು ಹಿಡಿದುಕೊಂಡಿರುವ ಹುಲ್ಲುಕಡ್ಡಿ ಎಂದು ವಾದಿಸುತ್ತಿದೆ ಈ ಲೇಖನ.

ರಶ್ಯದ 'ಝಾರ್ ಬೋರಿಸ್' ಯೆಲ್ಸಿನ್ ಜಗತ್ತಿಗೆ ಒಂದು ಆಶ್ಚರ್ಯ ತಂದಿದ್ದಾರೆ ತಮ್ಮ ರಾಜೀನಾಮೆಯ ಮೂಲಕ. ರಶ್ಯದ ಸಂವಿಧಾನದ ಪ್ರಕಾರ ಯೆಲ್ಸಿನ್ ಜೂನ್ 2000 ದ ಅಧ್ಯಕ್ಷೀಯ ಸ್ಥಾನಕ್ಕೆ ಸ್ಪರ್ಧಿಸುವಂತಿರಲಿಲ್ಲ. ಯೆಲ್ಸಿನ್ ರಶ್ಯದ ರಾಜಕೀಯ - ಆರ್ಥಿಕ-ಸಾಮಾಜಿಕ ವ್ಯವಸ್ಥೆಯನ್ನು ನಾಶಮಾಡಿದ ಅಪರಾಧಕ್ಕೆ ರಾಜೀನಾಮೆಗೆ ಜನರ ಒತ್ತಾಯ ಯಾವಾಗಿನಿಂದಲೂ ಇತ್ತು. ಆದರೆ ಆತ ರಾಜೀನಾಮೆ ಕೊಟ್ಟಿದ್ದು ಜನರ ಒತ್ತಾಯ ಮನ್ನಿಸಲು ಅಲ್ಲ ಎಂಬುದು ಸ್ಪಷ್ಟ. ಹಾಗಾದರೆ ಇದರ ಉದ್ದೇಶವೇನು?

ಯೆಲ್ಸಿನ್ ಈ ರಾಜೀನಾಮೆಯಿಂದ ಒಂದೆ ಕಲ್ಲಿನಿಂದ ಎರಡು ಹಕ್ಕಿ ಹೊಡೆದಿದ್ದಾರೆ. ಒಂದನೆಯದಾಗಿ ಆತನ ಬಂಟ ಪ್ರಧಾನಿ ವ್ಲಾಡಿಮಿರ್ ಪುಟಿನ್ ಅಧ್ಯಕ್ಷರಾಗುವ ಅವಕಾಶ ಮಾಡಿಕೊಟ್ಟಿದ್ದಾರೆ. ಎರಡನೆಯದಾಗಿ ಅಧ್ಯಕ್ಷೀಯ ಚುನಾವಣೆಯನ್ನು 3 ತಿಂಗಳು ಬೇಗ ಆಗುವ ಹಾಗೆ ಮಾಡಿದ್ದಾರೆ. ರಶ್ಯನ್ ಸಂವಿಧಾನದ ಪ್ರಕಾರ ಅಧ್ಯಕ್ಷ ಸತ್ತರೆ ಅಥವಾ ರಾಜೀನಾಮೆ ಕೊಟ್ಟರೆ ಪ್ರಧಾನಿ ಹಂಗಾಮಿ ಅಧ್ಯಕ್ಷನಾಗುತ್ತಾನೆ ಮತ್ತು 3 ತಿಂಗಳೊಳಗಾಗಿ ಅಧ್ಯಕ್ಷೀಯ ಚುನಾವಣೆ ನಡೆಸಬೇಕು.

ಒಂದೇ ಕಲ್ಲಿನಿಂದ ಎರಡು ಹಕ್ಕಿ

ಯೆಲ್ಸಿನ್‌ನ 10 ವರ್ಷಗಳ ದುರಾಡಳಿತದಿಂದ ಜನ ಬೇಸತ್ತಿದ್ದು, ಅವರ ಜನಪ್ರಿಯತೆ ಪಾತಾಳ ಮುಟ್ಟಿದೆ. ಇದಕ್ಕೆ ಹೋಲಿಸಿದರೆ ಚೆಚನ್ಯಾದ ಪ್ರತ್ಯೇಕತಾವಾದಿ ಬೆದರಿಕೆಯ ವಿರುದ್ಧ ಬಿಗಿ ಕ್ರಮದಿಂದಾಗಿ, ಈಗಿನ ಪ್ರಧಾನಿ ಪುಟಿನ್‌ರ ಜನಬೆಂಬಲ ಹೆಚ್ಚಿದೆ. ಇದು ಇತ್ತೀಚಿಗೆ ನಡೆದ ಚುನಾವಣೆಗಳಲ್ಲೂ ಪ್ರತಿಫಲಿತವಾಗಿದೆ. ರಶ್ಯನ್ ಡೂಮಾ(ಪಾರ್ಲಿಮೆಂಟು) ಚುನಾವಣೆಗಳಲ್ಲಿ ಹಿಂದಿನಿಂದ ಕಮ್ಯುನಿಸ್ಟ್ ಪಕ್ಷ ಅತ್ಯಂತ ದೊಡ್ಡ ಪಕ್ಷವಾಗಿ ಹೊಮ್ಮಿದ್ದು, ಪ್ರಧಾನಿ ಪುಟಿನ್ ನಾಯಕತ್ವದ ಯೂನಿಟಿ ಬ್ಲಾಕ್ (ಹಲವು ಪಕ್ಷಗಳ ರಂಗ) ಎರಡನೇ ಸ್ಥಾನ ಗಳಿಸಿದೆ. ಕಮ್ಯುನಿಸ್ಟ್ ಪಕ್ಷ ಶೇ. 24 ಮತಗಳಿಸಿದ್ದರೆ, ಪ್ರಧಾನಿ ಪುಟಿನ್‌ರ ಯೂನಿಟಿ ಬ್ಲಾಕ್ ಶೇಕಡಾ 23.68 ಮತಗಳಿಸಿದೆ. ಇದು ಸಾಮಾನ್ಯ ನಿರೀಕ್ಷೆಗಿಂತ ಭಿನ್ನವಾಗಿದೆ. ರಾಜಕೀಯ ವಿಶ್ಲೇಷಕರ ಪ್ರಕಾರ ಇದಕ್ಕಿಂತಲೂ ಬಹಳ ಕಡಿಮೆ ಬರುತ್ತದೆ. ಚುನಾವಣಾ ಫಲಿತಾಂಶಗಳಿಂದ ಮಾಜಿ ಪ್ರಧಾನಿ ಪ್ರಿಮೊಕೊವ್ ಮತ್ತು ಇತರ ಮಧ್ಯಮ ಪಂಥೀಯ ಪಕ್ಷಗಳ ಮತಗಳೆಲ್ಲ ಯೂನಿಟಿ ಬ್ಲಾಕ್‌ಗೆ ಹೋಗಿದೆ ಅಂತ ಕಾಣುತ್ತದೆ. ಇದಕ್ಕೆ ಮುಖ್ಯಕಾರಣ ಚೆಚೆನ್ಯಾದ ಯುದ್ಧವೇ ಎಂದು ಅಭಿಪ್ರಾಯ ಇದೆ. ಪ್ರಧಾನಿ ಪುಟಿನ್ ಸಾಮಾಜಿಕ ಆರ್ಥಿಕ ನೀತಿಗಳಲ್ಲಿ ಜನ ನಂಬಿಕೆ ಇಟ್ಟಿದ್ದಾರೆ ಎಂದಲ್ಲ ಎಂಬುದು ಸ್ಪಷ್ಟ. ಕೆಲವು ತಿಂಗಳುಗಳ ಹಿಂದೆ ಪುಟಿನ್‌ರ ಆಡಳಿತದ ಬಗ್ಗೆ ಜನ ಇನ್ನೂ ಅಭಿಪ್ರಾಯ ರೂಪಿಸಿಲ್ಲ, ಚೆಚೆನ್ಯಾದ ಮೇಲಿನ ಬಿಗಿ ನೀತಿ ಬಿಟ್ಟು ರಶ್ಯಾದ ಮಾಫಿಯಾ ಬಂಡವಾಳಶಾಹಿ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಗಳನ್ನು ಕಾಪಾಡುವ ಯೆಲ್ಸಿನ್‌ರ ನೀತಿಗಳನ್ನೇ ಮುಂದುವರೆಸಲಿರುವ ಪುಟಿನ್, ಆರು ತಿಂಗಳ ನಂತರ ಇದೇ ಜನಪ್ರಿಯತೆಯನ್ನು ಖಂಡಿತ ಉಳಿಸಿಕೊಳ್ಳುವುದಿಲ್ಲ. ಆದ್ದರಿಂದ ಬೇಗ ಚುನಾವಣೆ ನಡೆದರೆ ಒಳ್ಳೆಯದು. ಅಲ್ಲದೆ ಅಧ್ಯಕ್ಷ ಯೆಲ್ಸಿನ್ ಚುನಾವಣೆವರೆಗೆ ಮುಂದುವರಿದರೆ ರಶ್ಯಾ ದೇಶದ ಸರ್ವನಾಶ ಮಾಡಿದ ಯೆಲ್ಸಿನ್ ಮೇಲಿನ ಕೋಪ ಪುಟಿನ್ ಮೇಲೆ ತಿರುಗಿತು ಎನ್ನುವ ಭಯವೂ ಇದೆ. ಅಲ್ಲದೆ ಮೂರು ತಿಂಗಳು ಅಧ್ಯಕ್ಷರಾಗಿದ್ದು ಚುನಾವಣೆಗೆ ಸ್ಪರ್ಧಿಸಿದರೆ ಸ್ವಲ್ಪ ಅನುಭವ ಇದೆ ಎಂತಲೂ ಹೇಳಬಹುದು ಎಂಬ ಲೆಕ್ಕಚಾರಾವೂ ಇದೆ.

ಚೆಚೆನ್ಯಾ ಯುದ್ಧ - ರಶ್ಯಾದ 'ಕಾರ್ಗಿಲ್'

ನಮ್ಮಲ್ಲಿ ಬಿಜೆಪಿ ಚುನಾವಣೆ ಗೆಲ್ಲಲು ಕಾರ್ಗಿಲ್ ಯುದ್ಧ ಬಳಸಿದ ಹಾಗೆ, ರಶ್ಯಾದಲ್ಲಿ ಚೆಚೆನ್ಯಾ ಯುದ್ಧವನ್ನು ಬಳಸಲಾಗುತ್ತಿದೆ. ಈಗಿನ ಚೆಚನ್ಯಾ ಯುದ್ಧ ಚೆಚೆನ್ಯಾ ಸರ್ಕಾರದ ವಿರುದ್ಧ ಅಲ್ಲ. ಚೆಚೆನ್ಯಾದಲ್ಲಿ ತಲೆ ಎತ್ತಿರುವ ಸಶಸ್ತ್ರ ಇಸ್ಲಾಮಿಕ್ ಮೂಲಭೂತದ ವಿರುದ್ಧ ಎಂದು ಗಮನಿಸಬೇಕು. ಶಾಂತಿ ಒಪ್ಪಂದ ಮಾಡಿಕೊಂಡಿರುವ ಚೆಚೆನ್ಯಾ ಸರ್ಕಾರ ಈ ಬಗ್ಗೆ ಏನೂ ಮಾಡುತ್ತಿಲ್ಲ. ರಶ್ಯನ್ ಸೈನ್ಯ ಇಸ್ಲಾಮಿಕ್ ಮೂಲಭೂತವಾದಿ ಗೆರಿಲ್ಲಾ ನೆಲೆಗಳನ್ನು ಹುಡುಕಿ ವಾಯುದಾಳಿಗೆ ಗುರಿ ಮಾಡಿದೆ. ಇದರಿಂದ ಮೂಲಭೂತವಾದಿ ಗೆರಿಲ್ಲಾಗಳನ್ನು ಅಡಗಿಸಲು ಸಾಧ್ಯವಾಗಿಲ್ಲ. ಜನರ ಜೀವನ ಈ ಭಾಗದಲ್ಲಿ ದುಸ್ತರವಾಗಿದೆ. ಚೆಚೆನ್ಯಾ ಗೆರಿಲ್ಲಾಗಳ ವಿರುದ್ಧ ಯುದ್ಧ ಬಾರಿ ಜನಪ್ರಿಯವೇನಲ್ಲ. ಈ ಯುದ್ಧ ಭಾರಿ ಖರ್ಚಿನದ್ದು ಮಾತ್ರವಲ್ಲ, ಇದುಭಾರಿ ಸಮಸ್ಯೆಗಳನ್ನು ದೇಶದ ಈಗಾಗಲೇ ದುರ್ಬಲ ಆರ್ಥಿಕದ ಮೇಲೆ ಹೇರಲಿದೆ.

ಆದರೂ ರಶ್ಯದ, ಆಳುವ ವರ್ಗ ಈ ಚೆಚೆನ್ಯಾ ಸಾಹಸಕ್ಕೆ ಇಳಿದಿದೆ. ಒಂದನೆಯದಾಗಿ 'ದೇಶಪ್ರೇಮ'ದ ಅಲೆಯಲ್ಲಿ ಅತೃಪ್ತಿಯನ್ನು ಮುಳುಗಿಸುವ ಪ್ರಯತ್ನ. ಚೆಚೆನ್ಯಾ ಗೆರಿಲ್ಲಾಗಳ ಮೇಲೆ ಬಿಗಿ ನಿಲುವು ತೋರಿಸುವ ಮೂಲಕ ಕನಿಷ್ಠ ದೇಶದ ಸಮಗ್ರತೆ, ಐಕ್ಯತೆ ಕಾಪಾಡುತ್ತದೆ ಎಂದು ಜನಬೆಂಬಲ ಗಳಿಸುವ ಪ್ರಯತ್ನ.

ಎರಡನೆಯದಾಗಿ ರಶ್ಯದ ಆಳುವವರ್ಗ ಅಮೆರಿಕನ್ ಸಾಮ್ರಾಜ್ಯಶಾಹಿ ಎದುರು ನಿಲ್ಲಲು ತನಗೆ ತಾಕತ್ತಿದೆ ಎಂದು ತೋರಿಸಲು ಈ ಅವಕಾಶ ಬಿಟ್ಟುಕೊಡಲು ಅದು ತಯಾರಿಲ್ಲ. ಚೆಚೆನ್ಯಾ ಗೆರಿಲ್ಲಾಗಳಿಗೆ ಸಾಮ್ರಾಜ್ಯಶಾಹಿ ಬೆಂಬಲವಿದೆ. ಅವರು ವಿಜಯಿಯಾದರೆ ಕಾಕಾಸ ಪ್ರದೇಶದ ದಾಗೇಸ್ತಾನ ಮುಂತಾದ ಇತರ ಗಣರಾಜ್ಯಗಳು ರಶ್ಯನ್ ಒಕ್ಕೂಟ ಬಿಡುವುದು ಮಾತ್ರವಲ್ಲ, ಸಾಮ್ರಾಜ್ಯಶಾಹಿ ತನ್ನ ಆರ್ಥಿಕ ಹಿತಾಸಕ್ತಿಗೆ ಅಲ್ಲಿ ಹಸ್ತಕ್ಷೇಪ ಮಾಡಲು ಅವಕಾಶವಾಗತ್ತದೆ. ಚೆಚೆನ್ಯಾದಲ್ಲಿ ರಶ್ಯದ 'ರಾಷ್ಟ್ರೀಯ ಹಿತಾಸಕ್ತಿಗೆ' ತೀವ್ರ ಅಪಾಯವಿದೆ ಎಂಬ ಘೋಷಣೆಯೊಂದಿಗೆ ಅಮೆರಿಕ ಮತ್ತು ಯುರೋಪಿಯನ್ ಟೀಕೆಯನ್ನು ತಳ್ಳಿಹಾಕಿದೆ.

ಇದೆಲ್ಲ ಡೂಮಾ ಚುನಾವಣೆಯಲ್ಲಿ ಫಲಕೊಟ್ಟಿದ್ದು, ಇದು ರಶ್ಯದ ಮುಳುಗುತ್ತಿರುವ ಬಂಡವಾಳಶಾಹಿಯ ಅಳ್ವಿಕೆ ಉಳಿಸಿಕೊಳ್ಳುವ ಏಕಮಾತ್ರ ಸಾಧ್ಯತೆ ಎಂದು ಯೆಲ್ಸಿನ್ ರಾಜೀನಾಮೆಯ ನಾಟಕ ಆಡಲಾಗಿದೆ.

ಇವೆಲ್ಲದರಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಜತೆ, ರಶ್ಯದ ಆಳುವ ವರ್ಗ ಸಂಯೋಜಿತ ಕೆಲಸ ಮಾಡುತ್ತಿರುವ ಸಾಧ್ಯತೆಯೂ ಇದೆ. 'ನೀನು ಸತ್ತ ಹಾಗೆ ಮಾಡು, ನಾನು ಅತ್ತ ಹಾಗೆ ಮಾಡುತ್ತೇನೆ' ಎಂಬ ನಾಟಕದ ಸಾಧ್ಯತೆ ಇದು. ಚೆಚೆನ್ಯಾದ ಗೆರಿಲ್ಲಾಗಳ ಮೇಲೆ ಹತೋಟಿ ಇರುವ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ರಶ್ಯನ್ ಬಂಡವಾಳಶಾಹಿಗಳ ಜಂಟಿ ಕಾರ್ಯಾಚರಣೆಯೂ ಆಗಿರಬಹುದು. ಕಾರ್ಗಿಲ್ ಯುದ್ಧದಲ್ಲೂ ಇಂತಹ ವಾಸನೆ ಬಡಿದಿತ್ತು ಎಂದು ಇಲ್ಲಿ ಗಮನಿಸಬಹುದು.

ಇದಲ್ಲದೆ ಆರು ತಿಂಗಳು ಯೆಲ್ಸಿನ್ ಮತ್ತು ಪ್ರಧಾನಿ ಪುಟಿನ್ ಆಳಿದರೆ 'ಚೆಚನ್ಯಾ' ಎಲ್ಲಾ ತಣ್ಣಗಾಗಿ, ಕಮ್ಯುನಿಸ್ಟ್ ಅಭ್ಯರ್ಥಿ ಅಧ್ಯಕ್ಷೀಯ ಚುನಾವಣೆ ಗೆಲ್ಲಬಹುದು ಎಂಬ ಹೆದರಿಕೆಯೂ ರಶ್ಯನ್ ಆಳುವ ವರ್ಗವನ್ನು ಕಾಡುತ್ತಿದೆ.

'ತಲೆ ಉಳಿಸಿಕೊಳ್ಳುವ' ಹುನ್ನಾರ

ಇದಲ್ಲದೆ ಇನ್ನೊಂದು ಅಂಶವೂ ಈ ರಾಜೀನಾಮೆಯಲ್ಲಿ ಕೆಲಸ ಮಾಡಿದೆ. ಯೆಲ್ಸಿನ್ ತನ್ನ ರಾಜೀನಾಮೆ ಮೂಲಕ ತನ್ನ 'ತಲೆ' ಉಳಿಸಿಕೊಳ್ಳುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಯೆಲ್ಸಿನ್ ಮತ್ತು ಆತನ ಕುಟುಂಬದ ಹಲವು ಸದಸ್ಯರ ಮೇಲೆ ದೇಶದ ಹಣ ಲೂಟಿ ಹೊಡೆದ, ಸ್ವಿಸ್ ಬ್ಯಾಂಕಗಳಲ್ಲಿ ಭಾರೀ ಹಣ ಕೂಡಿಟ್ಟ ಆಪಾದನೆಗಳಿವೆ. ಯೆಲ್ಸಿನ್ ಮತ್ತು ಆತನ ಕುಟುಂಬದ ಸದಸ್ಯರ ಮೇಲೆ ದೇಶದ್ರೋಹ, ಕ್ರಿಮಿನಲ್ ಕೇಸುಗಳನ್ನೆಲ್ಲ ಹಾಕುವ ಎಲ್ಲಾ ಸಾಧ್ಯತೆ ಇದೆ. ಪುಟಿನ್‌ರನ್ನು ಅಧ್ಯಕ್ಷರಾಗಿ ಮಾಡುವ ಮೂಲಕ ಇಂತಹ ಕೇಸುಗಳಿಂದ ಮೊದಲೇ 'ಮಾಫಿ' ಪಡೆದುಕೊಳ್ಳಬಹುದು ಎಂಬುದು ಯೆಲ್ಸಿನ್ ಲೆಕ್ಕಚಾರವೆಂದು ಊಹಿಸಲಾಗಿದೆ. ಮುಖ್ಯವಾಗಿ ಯೆಲ್ಸಿನ್ ಎರಡನೇ ಮಗಳು ತತ್ಯಾನಾ 15 ಶತಕೋಟಿ ಡಾಲರುಗಳ ಹಗರಣದಲ್ಲಿ ಈಗಾಗಲೇ ತನಿಖೆಗೆ ಒಳಗಾಗಿದ್ದಾರೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಯೆಲ್ಸಿನ್ ಮಾತ್ರವಲ್ಲ, ರಶ್ಯದ ಆಳುವ ಬಂಡವಾಳಶಾಹಿ ಮಾಫಿಯ ಸಹ ಅದರ ಅತ್ಯಂತ 'ಉತ್ತಮ' ಪ್ರತಿನಿಧಿಯ ವಿರುದ್ಧ ಕ್ರಿಮಿನಲ್ ಕೇಸ್, ದೇಶದ್ರೋಹದ ಕೇಸುಗಳನ್ನು ನಡೆಸುವುದನ್ನು ಇಷ್ಟಪಡುವುದಿಲ್ಲ. ಸಾಮ್ರಾಜ್ಯಶಾಹಿಗೂ ಇದು ಇಷ್ಟವಿಲ್ಲ. ಇವೆಲ್ಲ ಸೇರಿ ಯೆಲ್ಸಿನ್ ರಾಜೀನಾಮೆ ಬಂದಿದೆ. ಇದು ಮುಳುಗುತ್ತಿರುವ ರಶ್ಯನ್ ಆಳುವ ವರ್ಗಗಳು ಉಳಿದುಕೊಳ್ಳಲು ಹಿಡಿದಿರುವ ಹುಲ್ಲುಕಡ್ಡಿ ಅಲ್ಲದೆ ಬೇರಲ್ಲ.

ಆದರೆ ಅದು ರಶ್ಯನ್ ಬಂಡವಾಳಶಾಹಿ ಮುಳುಗುವುದನ್ನು ತಪ್ಪಿಸುತ್ತದೆ ಎಂಬ ಯಾವುದೇ ಭರವಸೆ ಇಲ್ಲ. ಚೆಚೆನ್ಯಾ ಯುದ್ಧವೇ ಅವರು ಬಯಸಿದಂತೆ ಹೋಗದಿರಬಹುದು. ಚೆಚೆನ್ಯಾ ಗೆರಿಲ್ಲಾಗಳ ಮೇಲುಗೈ ಅಥವಾ ಚೆಚನ್ಯಾ ಯುದ್ಧದ ಭಾರೀ ಆರ್ಥಿಕ ದುಷ್ಪರಿಣಾಮ 'ಚೆಚೆನ್ಯಾ ಕಾರ್ಡ್' ಉಲ್ಟಾ ಹೊಡೆಯಬಹುದು. ಅಲ್ಲದೆ ಜನ ಆಳುವವರ್ಗದ 'ಅಧ್ಯಕ್ಷ' ಪುಟಿನ್‌ರ ಮೋಸದ ನಾಟಕದ ಹೂರಣ ತಿಳಿದು ಕಮ್ಯುನಿಸ್ಟ್ ಪಕ್ಷಕ್ಕೆ ದೊಡ್ಡ ರೀತಿಯಲ್ಲಿ ಬೆಂಬಲಿಸಬಹುದು.

............ಹಾಲು ಉತ್ಪಾದಕರ ಮೈಯಲ್ಲಿ ನೆತ್ತರು

ಪುಟ 9 ರಿಂದ

ಮುಂದುವರಿಸಲಾಗುವುದೆಂದು ತಿಳಿ ಹೇಳುತ್ತಿದ್ದಂತೆ ಕೋಲಾರದ ಪೋಲೀಸ್ ವರಿಷ್ಠಾಧಿಕಾರಿ (ಎಸ್.ಪಿ.) ಜಯಪ್ರಕಾಶ್ ಪಿ. ನಾಯಕ್‌ಗೆ ಚಳಿಗಾಲದ ನಟ್ಟನಡುವೆಯೇ ಇಂಥದೊಂದು ಪಿತ್ಥ ನೆತ್ತಿಗೇರುತ್ತದೆಂದು ಬಹುಶಃ ಕೋಲಾರ ಜಿಲ್ಲೆಯ ಹಾಲು ಉತ್ಪಾದಕರ ಸಂಘದ ಕಾರ್ಯಕರ್ತರು ಊಹಿಸಿರಲಿಲ್ಲ. ನಿರಂತರವಾಗಿ ಶ್ರಮಿಸಿ, ಹಸುಗಳನ್ನು ಅಕ್ಕರೆಯಿಂದ ಸಾಕಿ, ಶ್ರದ್ಧೆಯಿಂಧ ಬಸಿದು ತಂದ ಹಾಲಿಗೆ ಸರಿಯಾದದ್ದೊಂದು ರೇಟು ಕೊಡಿ ಎಂದು ವಿನಂತಿಸಿದುದೇ ಹಾಲು ಉತ್ಪಾದಕರ ಮಹಾಪರಾಧವಾಗಿ ಹೋಯಿತು.

ಮುಷ್ಕರ ಮುಗಿಸಿ ಅವರು ತಂತಮ್ಮ ಊರುಗಳಿಗೆ ಹಿಂತಿರುಗುತ್ತಿದ್ದ ಉತ್ಪಾದಕರಿಗೆ ಹಿಂಸಾಚಾರಕ್ಕಿಳಿಯುವ ಸಣ್ಣದೊಂದು ಇರಾದೆಯೂ ಇರಲಿಲ್ಲ. ಇನ್ನೇನು ಕೆಲವೇ ಸಮಯದಲ್ಲಿ ಸಾವಿರಾರು ಸಂಖ್ಯೆಯಲ್ಲಿದ್ದ ರೈತರು ಗುಂಪು ಚದುರಲಿತ್ತು. ಒಬ್ಬ ನುರಿತ ಪೋಲೀಸ್ ಅಧಿಕಾರಿಗೆ ಈ ಮಾತ್ರದ ಜ್ಞಾನ ಮತ್ತು ತಾಳ್ಮೆಯು ಇಲ್ಲದೆ ಜಯಪ್ರಕಾಶ್ ನಾಯಕ್‌ಗೆ ಏನು ತೋಚಿತೋ ಕಡಿಯಿತೋ ಗೊತ್ತಿಲ್ಲ, ಐದು ನಿಮಿಷಗಳಲ್ಲಿ ಚದುರಿ ಎಂದು ರೈತರ ಮೇಲೆ ಅಬ್ಬರಿಸ ತೊಡಗಿದರು. ಇಂಥ ಎಚ್ಚರಿಕೆ ರೈತರಿಗೆ ಅರ್ಥವಾಗುವ ಮೊದಲೇ ಛಾರ್ಜ್ ಎಂದು ಅರಚಿದ ನಾಯಕ್ ತಾನು ಸೇರಿದಂತೆ [illegible] ಪೈಶಾಚಿಕ ದಾಳಿಯಲ್ಲಿ ಹೋರಾಟದ ನೇತೃತ್ವ ವಹಿಸಿದ್ದ ವಿವಿಧ ಸಂಘಟನೆಗಳ ಮುಖಂಡರು ಧೈರ್ಯದಿಂದ ಅಲ್ಲಿ ನಿಂತು ಲಾಠಿ ಏಟುಗಳ ನಡುವೆಯೇ ರೈತರನ್ನು ಸಮಾಧಾನ ಗೊಳಿಸಿಲ್ಲದಿದ್ದರೆ 1994 ರಲ್ಲಿ ನಡೆದ ಗೋಲೀಬಾರ್ ಘಟನೆ ಮರುಕಳಿಸುತ್ತಿತ್ತೇನೋ? ಇದನ್ನು ತಪ್ಪಿಸಲು ನಾಯಕರು ಮುಂದಾಗಿದ್ದರಿಂದ ಸಾಮಾನ್ಯ ಜನರ ಮೇಲೆ ಲಾಠಿ ಪ್ರಹಾರ ಮಾಡಿದ ಎಸ್.ಪಿ.ನಾಯಕ್ ಮತ್ತು ಅವರ 400 ಕ್ಕೂ ಹೆಚ್ಚು ಪೋಲೀಸರಿಗೆ ಸಮಾಧಾನವಾಗಿರುವಂತೆ ಕಾಣಲಿಲ್ಲವೇನೋ? ಒಕ್ಕೂಟದ ಆಡಳಿತ ಮಂಡಳಿ ನೀಡಿದ್ದ ಮಾಂಸದ ಊಟದ ಕೊಬ್ಬು ಕರಗಿತ್ತೋ ಇಲ್ಲವೋ, ಮುಖಂಡರ ಮೇಲೆ ತಿರುಗಿಬಿದ್ದರು.

ಮೊದಲಿನಿಂದಲೂ ಅಂಗನವಾಡಿ, ಗ್ರಾಮಪಂಚಾಯ್ತಿ, ರೈತರ ಹೋರಾಟಗಳಿಗೆ ನಾಯಕತ್ವ ನೀಡುತ್ತಿದ್ದ ಕೆಲವು ಮುಖಂಡರನ್ನು ಮಟ್ಟಹಾಕುವ ಉದ್ದೇಶದಿಂದಲೇ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡರಾದ ಹಾಗೂ ಹಾಲು ಉತ್ಪಾದಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಂ.ವೆಂಕಟೇಶ್‌ರ ಕೈಗಳನ್ನು ಮುರಿಯುವ ತನಕ ಹೊಡೆದರು, ರೈತ ಸಂಘ, ಗ್ರಾಮ ಪಂಚಾಯ್ತಿ ನೌಕರರ ಸಂಘದ ಹಾಗೂ ಹಾಲು ಉತ್ಪಾದಕರ ಸಂಘದ ಜಿಲ್ಲಾ ಮುಖಂಡ ಪಿ.ಆರ್.ಸೂರ್ಯನಾರಾಯಣ ಸ್ವಾಮಿಯ ಬೆನ್ನು ಕಿತ್ತು ಬರುವ ಹಾಗೆ ಇನ್ನೆಂದೂ ಹೋರಾಟಗಳಲ್ಲಿ ಕಾಲಿಡದಂತೆ ಎಚ್ಚರಿಸುವ ರೀತಿಯಲ್ಲಿ ಕಾಲುಗಳು ನಡೆಯಲಿಕ್ಕು ಆಗದಂತೆ ಹೊಡೆದರು. ಪ್ರಜ್ಞೆ ಕಳೆದುಕೊಂಡಿದ್ದ ಇವರನ್ನು ಜಿ.ವಿ.ಶ್ರೀರಾಮರೆಡ್ಡಿ ಪ್ರವೇಶಿಸಿ ತಡೆಯದಿದ್ದರೆ ಪೋಲೀಸರು ಸಾಯಿಸುವ ಮಟ್ಟಕ್ಕೆ ಮುಂದಾಗಿದ್ದರು. ಲಾಠಿ ಚಾರ್ಜ್ ಮುಗಿದ ನಂತರ ಒಕ್ಕೂಟದ ಒಳಗೆ ನೀರು ಕುಡಿಯಲು ಹೋಗಿದ್ದ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಅಬ್ಬಣಿ ಶಂಕರ್‌ನನ್ನು ಆಡಳಿತ ಮಂಡಳಿ ಶಾಮೀಲಿನಿಂದ ಪೋಲೀಸರನ್ನು ಒಳಗೆ ಕರಿಸಿ ಒಡೆಸಿ ಅವರ ಹೊಟ್ಟೆಯ ಪಕ್ಕೆಲುಬುಗಳು ಮುರಿಯುವ ಹಾಗೆ ಹೊಟ್ಟೆಗೆ ತಿವಿದಿದ್ದಾರೆ. ಶಾಂತಿಯುತವಾಗಿ ಚದುರುತ್ತಿದ್ದ ಅಮಾಯಕ ಮುಗ್ಧ ರೈತರ ಮೇಲೆ ಭಯಾನಕ ಹಲ್ಲೆ ಮಾಡಿ ಕೆಲವು ಸುತ್ತು ಶೆಲ್ಸ್ ಸಿಡಿಸಿ ಭಯಾನಕ ವಾತಾವರಣ ನಿರ್ಮಿಸಿದ ಪೋಲೀಸರು ರೈತರು ತೋಟಗಳ-ಹೊಲಗಳ ಮಧ್ಯೆ ಓಡಿದರೂ ಬಿಡಲಿಲ್ಲ. 2. ಕಿ.ಮಿ. ದೂರ ಅಟ್ಟಿಸಿಕೊಂಡು ಹೋಗಿ ಹೊಡೆದರು. ಹೊಡೆತ ತಾಳಲಾರದೆ ನೀರಿನ ಡ್ರಮ್‌ಗಳಲ್ಲಿ ಕುಳಿತವರನ್ನು ಪೋಲೀಸರು ಮನಸೋ ಇಚ್ಛೆ ಚಚ್ಚಿ ಹೊಡೆದರು. ಇದಕ್ಕೆಲ್ಲಾ ಕಾರಣ ಎಂದರೆ ಎಸ್.ಪಿ. ಜಯಪ್ರಕಾಶ್ ನಾಯಕ್ ಎಂಬ ಪೋಲೀಸ್

ಪುಟ 12 ಕ್ಕೆ

ಬೇಡಿಕೆಗಳು

1. ಲಾಠಿ ಚಾರ್ಜ್‌ಗೆ ಮುಖ್ಯ ಕಾರಣಕರ್ತರಾದ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳನ್ನು ಕೂಡಲೇ ಅಮಾನತ್ತು ಮಾಡಬೇಕು. ಈ ಘಟನೆಯಲ್ಲಿ ಶಾಮೀಲಾಗಿರುವ ಹಾಲು ಒಕ್ಕೂಟದ ಆಡಳಿತ ಮಂಡಳಿ ಅಧಿಕಾರಿಗಳು ರಾಜಿನಾಮೆ ನೀಡಬೇಕು.
2. ಕಡಿಮೆ ಮಾಡಿರುವ ಹಾಲಿನ ದರ ಏರಿಸುವುದು.
3. ಮದರ್ ಡೈರಿ ಪಡೆದಿರುವ ಲಾಭದಲ್ಲಿ ಕೋಲಾರ ಒಕ್ಕೂಟಕ್ಕೆ ಬರಬೇಕಾದ ಪಾಲು ತಕ್ಷಣ ನೀಡಬೇಕು.
4. ಮದರ್ ಡೈರಿಯನ್ನು ಕೋಲಾರಕ್ಕೆ ಜಿಲ್ಲಾ ಹಾಲು ಒಕ್ಕೂಟಕ್ಕೆ ಬಿಟ್ಟು ಕೊಡುವುದು.
5. ಕೋಲಾರ ಹಾಲು ಒಕ್ಕೂಟಕ್ಕೆ ಹಾಲಿನ ಮಾರುಕಟ್ಟೆ ಸೌಲಭ್ಯಗಳನ್ನು ಕೆ.ಎಂ.ಎಫ್. ಒದಗಿಸುವುದು.
6. ಹೊರ ರಾಜ್ಯಗಳ ಖಾಸಗೀ ಡೈರಿಗಳಿಗೆ ಮಾರುಕಟ್ಟೆಯಲ್ಲಿ ಪ್ರವೇಶಿಸದಂತೆ ಸರ್ಕಾರ
7. ಪಶು ಆಹಾರ ಇಳಿಸಿ, ಗುಣಮಟ್ಟದ ಪಶು ಆಹಾರ ಪೂರೈಸುವುದು.
8. ಹಾಲು ಶಿಥಿಲ ಕೇಂದ್ರ ಡೈರಿ ಹಾಗೂ ಒಕ್ಕೂಟದಲ್ಲಿನ ಅವ್ಯವಹಾರ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವುದು.
9. ಹೈನುಗಾರಿಕೆಯ ಹಾಲಿನ ಪುಡಿ ಮತ್ತು ತಿಂಡಿಗಳ ತಯಾರಿಕೆಯಲ್ಲಿ ವಿದೇಶಿಯ ಬಹುರಾಷ್ಟ್ರೀಯ ಕಂಪನಿಗಳು ಪ್ರವೇಶಿಸದಂತೆ ತಡೆಯುವುದು.
10. ಕೆ.ಎಂ.ಎಫ್. ಮತ್ತು ಒಕ್ಕೂಟಗಳಿಗೆ ಐ.ಎ.ಎಸ್ ಅಧಿಕಾರಿಗಳನ್ನು ನೇಮಿಸಲು ಒತ್ತಾಯ.
11. ಶಾಲಾ ಮಕ್ಕಳಿಗೆ ಪ್ರತಿದಿನ ಹಾಲನ್ನು ಒದಗಿಸುವ ಯೋಜನೆಯನ್ನು ರಾಜ್ಯ ಸರ್ಕಾರ ರೂಪಿಸಬೇಕೆಂಬ ಬೇಡಿಕೆಗಳ ಮನವಿ ಪತ್ರ, ಉಸ್ತುವಾರಿಮಂತ್ರಿ ವಿ.ಮುನಿಯಪ್ಪ ಮೂಲಕ ಸರ್ಕಾರಕ್ಕೆ ನೀಡಲಾಗಿದೆ



ಹಮ್ ಆಪ್‌ಕೆ ಹೈ ಕೌನ್‌ನಿಂದ ಹಮ್ ಸಾಥ್ ಸಾಥ್ ಹೈ ವರೆಗೆ

ಜಿ.ಎನ್.ನಾಗರಾಜ್

ಭಾರತದ ಗ್ರಾಮೀಣ ಜೀವನದಲ್ಲಿ, ಒಟ್ಟು ಕುಟುಂಬಗಳು -ತಂದೆ ತಾಯಿ, ಕೆಲವೊಮ್ಮೆ ಅಜ್ಜ ಅಜ್ಜಿಯರೊಂದಿಗೆ ಅವರ ಮಕ್ಕಳು ಕುಟುಂಬಗಳೆಲ್ಲಾ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೆಲ್ಲಾ ಇರುವುದು ಸರ್ವೇಸಾಮಾನ್ಯವಾಗಿರುತ್ತಿತ್ತು. ಆದರೆ ಆಧುನಿಕತೆ ಪ್ರವೇಶ ಮಾಡುತ್ತಿದ್ದಂತೆ ಈ ಅನೇಕ ಪದ್ಧತಿಗಳೊಂದಿಗೆ ಈ ಜೀವನ ಪದ್ಧತಿಯೂ ಅಳಿಯುತ್ತಾ ಬರುತ್ತಿದೆ. ನಗರಗಳಲ್ಲಿ ಬಹು ಅಪರೂಪ ಎನ್ನುವಂತೆ ಅಲ್ಲೊಮ್ಮೆ ಇಲ್ಲೊಮ್ಮೆ ಕೆಲವು ಕೂಡು ತುಂಬುಗಳು ಸಿಗುತ್ತವೆ. ಇಂದಿನ ಗ್ರಾಮೀಣ ಬದುಕಿನಲ್ಲಿಯೂ ಈ ವ್ಯವಸ್ಥೆ ಅವನತಿಗೊಳಗಾಗಿದೆ.

ಬೇರೆ ಬೇರೆಯಾಗಿ ವಾಸಿಸುವ ದಂಪತಿಗಳು, ಅವರ ಒಂದೆರಡು ಮಕ್ಕಳುಗಳು(ಇತ್ತೀಚೆಗಂತೂ ಒಂದು ಮಗು ಎನ್ನುವ ಚಿಂತನೆ ಜನಪ್ರಿಯವಾಗತೊಡಗಿರುವ ಈ ದಿನಗಳಲ್ಲಿ) ಮನೆಯಲ್ಲಿ ಅನೇಕ ಬಾರಿ ಒಂಟಿತನ ಆವರಿಸುತ್ತದೆ ಮತ್ತು ಇನ್ನೂ ಹಲವಾರು ತೊಂದರೆಗಳನ್ನು ಅನುಭವಿಸುತ್ತಾರೆ. ಇದರಿಂದ ಹಿಂದಿನ ಒಟ್ಟು ಕುಟುಂಬದ ಹಳೆಯ ಪದ್ಧತಿಯ ಬಗ್ಗೆ ನಾಸ್ಟಾಲ್ಜಿಕ್ ಆಗಿ (ಅದರ ನೆನಪು ಕನವರಿಕೆ ಹಳ್ಳಿಯನ್ನು ಬಿಟ್ಟು ನಗರಕ್ಕೆ ಬಂದವನು ಹಳ್ಳಿಯ ಜೀವನವನ್ನೇ ಆದರ್ಶೀಕರಿಸುವಂತೆ)ಭಾವನಾತ್ಮಕವಾಗಿ ಸ್ಪಂದಿಸುವ ಪರಿಸರವಿದೆ.

ಕಳೆದುಹೋದ ಜೀವನ ಪದ್ಧತಿಗಳ ಬಗ್ಗೆ ಬೆಳೆದಿರುವ ವ್ಯಾಮೋಹಗಳನ್ನು ಬಳಸಿಕೊಂಡು ಹಲವಾರು ಚಿತ್ರ ನಿರ್ಮಾಪಕರು ಹಣ ಮಾಡಿದ್ದಾರೆ. ಈ ಪ್ರವೃತ್ತಿಯ ಹರಿಕಾರನಾದ ಹಮ್ ಆಪ್ ಕೆ ಹೈ ಕೌನ್ ಭಾರತದಾದ್ಯಂತ ಕೋಟಿಗಟ್ಟಲೆ ಹಣ ಬಾಚಿಕೊಂಡಿತು. ದೇಶದ ಅನೇಕ ನಗರಗಳಲ್ಲಿ ನೂರು ದಿನಗಳನ್ನು ಆಚರಿಸಿತು. ಕೆಲವು ಕೇಂದ್ರಗಳಲ್ಲಿ ವರ್ಷಗಟ್ಟಲೆ ಓಡಿತು. ಅಂದಿನಿಂದ ದುಡ್ಡು ಬಾಚುವ ಹೊಸದಾರಿಯನ್ನು ಕಂಡು ಕೊಂಡ ಅನೇಕ ನಿರ್ಮಾಪಕರು ಅಂತಹದೇ ಚಿತ್ರಗಳನ್ನು ನಿರ್ಮಿಸಲಾರಂಭಿಸಿದ್ದಾರೆ. ಅದೇ ಸಾಲಿಗೆ ಸೇರಿದ ಹೊಸ ಚಿತ್ರ 'ಹಮ್ ಸಾಥ್ ಸಾಥ್ ಹೈ'

ಈ ತೆರನ ಚಿತ್ರಗಳಲ್ಲಿ ಸಿನಿಮಾ ಜಗತ್ತಿನಲ್ಲಿ ಮಾಮೂಲಿಯಾಗಿರುವ ನಾಯಕ-ಖಳನಾಯಕ, ಹೊಡೆದಾಟ, ಬಡಿದಾಟ, ಹಿಂಸೆ, ಕೊಲೆಗಳಾಗಲೀ, ಅಶ್ಲೀಲ ದೃಶ್ಯಗಳ, ತುಂಡು ಬಟ್ಟೆಗಳ ವಿಜೃಂಭಣೆಯಾಗಲೀ ಸಾಮಾನ್ಯವಾಗಿ ಕಾಣುವುದಿಲ್ಲ. ಕುಟುಂಬದ ಸದಸ್ಯರೆಲ್ಲರ ಸರಸ ಸಂಭಾಷಣೆಗಳು ಹಾಸ್ಯ ಸನ್ನಿವೇಶಗಳು ಚಿತ್ರದ ತುಂಬಾ ತುಂಬಿ ತುಳುಕುತ್ತವೆ. ತಮ್ಮ ಕುಟುಂಬಗಳ ಏಕಾಂಗಿತನವನ್ನನುಭವಿಸುತ್ತಿರುವ ಪ್ರೇಕ್ಷಕರನ್ನು ಒಂದು ರೀತಿಯ ಕುಟುಂಬ ಜೀವನದ ಸುಖದ ಮತ್ತಿನಲ್ಲಿ ಮುಳುಗಿಸುತ್ತವೆ. ಈ ಸಿನಿಮಾಗಳಿಗೂ ಒಂದು ಕ್ಲೈಮಾಕ್ಸ್ ಬೇಕಲ್ಲ. ನಾಟಕೀಯ ತಿರುವುಗಳಿಲ್ಲದಿದ್ದರೆ ಅದೊಂದು ಸಿನಿಮಾ ಆಗುವುದು ಹೇಗೆ? ಆದ್ದರಿಂದ ಸುಖ ಸೂರೆಹೋಗುವುದನ್ನು ನೋಡುತ್ತಿರುವ ಪ್ರೇಕ್ಷಕರಿಗೆ ಮನಮಿಡಿಯುವಂತಹ ಒಂದು ತಿರುವು ಸ್ವಲ್ಪ ದುಃಖದ ಶಾಕ್, ಮತ್ತೆ ಸುಖಾಂತ್ಯ. ಇದು ಈ ರೀತಿಯ ಚಿತ್ರಗಳ ಹೊಸ ಸರಣಿಯ ಫಾರ್ಮುಲಾ. ಇಡೀ ಕುಟುಂಬವೇ ಒಟ್ಟಾಗಿ ಯಾವ ಮುಜುಗರವೂ ಇಲ್ಲದೆ ನೋಡಿ ಆನಂದಿಸಬಹುದಾದ, ಭ್ರಮಾಲೋಕದಲ್ಲಿ ವಿಹರಿಸಬಹುದಾದ ಈ ಚಿತ್ರಗಳಿಗೆ ನೂಕು ನುಗ್ಗಲು.

ಆದರೆ ಇಲ್ಲಿ ಚಿತ್ರಿತವಾಗುವ ಬದುಕಿನಲ್ಲಿ ನಿಜಜೀವನದ ಯಾವ ಕಹಿಯೂ ಇಲ್ಲ. ತಂದೆಯ ದಬ್ಬಾಳಿಕೆ, ತಾಯಿಯ ಮತ್ಸರ ಅಥವಾ ಅತ್ತೆತನ, ಗಂಡನ ದಬ್ಬಾಳಿಕೆ ಅಥವಾ ದುಷ್ಟ ಚಟಗಳು, ತಮ್ಮ ತಂಗಿಯರ ಈರ್ಷೆ, ಅಸೂಯೆಗಳು ಇವು ಕಾಣುವುದೇ ಇಲ್ಲ ಎನ್ನಿಸುವಷ್ಟು ಕಡಿಮೆ. ಅಥವಾ ಸಿನಿಮಾಕ್ಕೆ ಒಂದು ಬೆಳವಣಿಗೆ ಕೊಡಲು ಮಾತ್ರ ಒಂದಿಷ್ಟು ಒಗ್ಗರಣೆಯಂತೆ ಒಬ್ಬರಲ್ಲಿ ಕ್ಷಣಕಾಲ ಆವರಿಸಿ ಮಾಯವಾಗುವ ಭಾವ. ಆಹಾ! ಇಂತಹ ಬದುಕು ಯಾರಿಗೆ ಬೇಡ.

ಇಂತಹ ಸುಖದ ಸೂರೆ ನೀಡುವ ಆಕರ್ಷಣೆಯ ಜೊತೆಗೆ ಹಳೆಯ ಸಂಪ್ರದಾಯಗಳು, ಆಚರಣೆಗಳು, ನಂಬಿಕೆಗಳಲ್ಲಿ ನಂಬಿಕೆ ಕಳೆದುಕೊಳ್ಳುತ್ತಿರುವ ಹೊಸ ತಲೆಮಾರಿನಲ್ಲಿ ಅವುಗಳನ್ನು ಬಿತ್ತಿ ಬೆಳೆಸುವ ಹಂಚಿಕೆ. ದೈವ ಭಕ್ತಿ, ಮಾತಾ-ಪಿತೃ ಭಕ್ತಿ, ಅಣ್ಣನೇ ತಂದೆಯಂತೆ ಎಂಬ ವಿಧೇಯ ಭಾವ ಇವುಗಳ ಜೊತೆಗೆ ಸ್ವಲ್ಪ ದೈವಿಶಕ್ತಿಯ ಆಟ. ಒಟ್ಟಿನಲ್ಲಿ ತಮ್ಮ ಬದುಕಿನ ಏಕತಾನತೆಯಿಂದ ಬೇಸತ್ತ ಜನಗಳಿಗೆ ಮುದನೀಡುವ ಜೊತೆಗೆ ಬಿಜೆಪಿ ಪರಿವಾರ ಸಾರುವ ಕುಟುಂಬ ಮೌಲ್ಯ-ಪರಿವಾರ ಮೌಲ್ಯಗಳ ಉರವಣಿಗೆ. ಸೂರೆ ಹೋಗುವ ಸಿಹಿಯಲ್ಲಿ ಬೆರೆತ ನಿಧಾನ ವಿಷ ಗಮನ ಸೆಳೆಯುವುದೇ ಇಲ್ಲ.

ಸರಸ, ಹಾಸ್ಯ, ಸುಖ ಇವೆಲ್ಲವ ಮನುಷ್ಯನಿಗೆ ಬೇಕು. ಒಳ್ಳೆಯ ತನವಂತೂ ಯಥೇಚ್ಛವಾಗಿ ಬೇಕು. ಆದರೆ ಆಸ್ತಿ, ಲಾಭ ಇವುಗಳಿಂದ ಹುಟ್ಟಿದ ಅಸೂಯೆ, ಹಿಂಸೆಗಳಲ್ಲಿ ನರಳು ಸಮಾಜ ಅದನ್ನು ಪಡೆಯುವುದೆಂತು? ವರದಕ್ಷಿಣೆಗಾಗಿ ಹಿಂಸೆ, ಸಾವುಗಳು, ಆಸ್ತಿಗಾಗಿ ಕಚ್ಚಾಟ, ಬಡಿದಾಟ ಕಹಿ ಮನಸ್ಸುಗಳೊಂದಿಗೆ ವಿಭಜನೆಗಳು, ಒಟ್ಟು ಕುಟುಂಬದ ಆಸ್ತಿಯನ್ನು ಕದಿಯುವ ಅಣ್ಣ ತಮ್ಮಂದಿರು ಅತ್ತಿಗೆ-ನಾದಿನಿಯರು ಇವರ ನಡುವೆ ಕುಟುಂಬ ಮೌಲ್ಯ ಅರಳುವುದೆಂತು? ಹಣ, ಆಸ್ತಿಯೇ ಎಲ್ಲ ಮೌಲ್ಯಗಳ ನೆಲೆಯಾಗಿರುವ ಈ ಸಮಾಜ ವ್ಯವಸ್ಥೆ ಇರುವವರೆಗೂ ಈ ಸುಖದ ಸೂರೆ ಸಾಧ್ಯವೇ? ಆಸ್ತಿ ರಹಿತ, ಸ್ವಾರ್ಥ ರಹಿತ ಹೊಸ ಸಮಾಜದ ಹೊಸ ಮಾನವನ ನಮನ್ವಂತರವೇ ಇಂತಹ ಬದುಕಿಗೆ ದಾರಿ ಮಾಡಿಕೊಡಬಲ್ಲದು. ಆಸ್ತಿ ಎಂಬುದೊಂದು ಇರುವವರೆಗೂ ಇಂತಹ ಬದುಕು ಚಲನಚಿತ್ರಗಳು ಮೂಡಿಸುವ ಇತರೆಲ್ಲ ಭ್ರಮೆಗಳಂತೆ ಒಂದು ಹಗಲುಕನಸಿನ ಭ್ರಮಾಲೋಕ.

ಹಾಲು ಉತ್ಪಾದರ ಮೈಯಲ್ಲಿ ನೆತ್ತರು.....

ಪುಟ 12 ರಿಂದ

ಅಧಿಕಾರಿಗೆ ಯಾವ ಹೋರಾಟವನ್ನೂ ಅದರಲ್ಲೂ ಕಮ್ಯುನಿಸ್ಟ್ ನಾಯಕತ್ವದ ಹೋರಾಟಗಳು ಕಂಡರೆ ಅವರ ಕಣ್ಣು ಕೆಂಪಾಗುತ್ತದೆ. ಒಂದಲ್ಲಾ ಒಂದು ನೆಪ ಹುಡುಕಿ ಚಳುವಳಿಗಾರರನ್ನು ಹೊಡೆಯುವುದೇ ಅವರ ಕಸುಬಾಗಿದೆ.

ಬೇಡಿಕೆಗಳ ಈಡೇರಿಕೆಗಾಗಿ ಅನಿರ್ದಿಷ್ಟ ಧರಣಿ ಮುಂದುವರಿಕೆ

20.12.99 ರಂದು ಮುಗ್ಧ ರೈತ ಹಾಲು ಉತ್ಪಾದಕರ ಮೇಲೆ ನಡೆದ ಪೋಲೀಸರ ಪೈಶಾಚಿಕ ದಾಳಿಯ ಲಾಠಿ ಚಾರ್ಜ್ ಕೃತ್ಯವನ್ನು ಖಂಡಿಸಿ, ಹಾಲು ಉತ್ಪಾದಕರ ಬೇಡಿಕೆಗಳ ಈಡೇರಿಕೆಗೆ ಹಾಗೂ ಲಾಠಿ ಚಾರ್ಜ್‌ಗೆ ಕಾರಣರಾದ ಎಸ್.ಪಿ. ಜಯಪ್ರಕಾಶ್ ವಿ.ನಾಯಕ್‌ರನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕೆಂದು ಒತ್ತಾಯಿಸಿ ಅನಿರ್ದಿಷ್ಟ ಕಾಲ ಧರಣಿಯು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ 21.12.99 ರಿಂದ ಮುಂದುವರೆಯಿತು.

ಈ ಅನಿರ್ದಿಷ್ಟ ಧರಣಿ ಮುಂದುವರೆಯುವುದನ್ನು ತಡೆಯಲು ಪೋಲಿಸ್ ವರಿಷ್ಠಾಧಿಕಾರಿಯವರು ಪರಿಸ್ಥಿತಿ ಉತ್ತಮವಾಗಿಲ್ಲ ತಮ್ಮ ಕಚೇರಿ ಮುಂದೆ ಧರಣಿ ನಡೆಸಲು ಅವಕಾಶ ನೀಡಬಾರದೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದರಿಂದ ಅಲ್ಲಿ ಧರಣಿ ಮುಂದುವರೆಸಲು ಜಿಲ್ಲಾಧಿಕಾರಿ ಅನುಮತಿ ನೀಡಲಿಲ್ಲ. ಇಂತಹ ಪ್ರಜಾಪ್ರಭುತ್ವದ ಹಕ್ಕುಗಳನ್ನು ದಮನ ಮಾಡುವ ನೀತಿ ಮತ್ತು ಪೋಲೀಸರ ಕೃತ್ಯವನ್ನು ಹಾಗೂ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ 24.12.99 ರಂದು ಧರಣಿ ನಡೆಸಿ ಮನವಿ ಪತ್ರಗಳನ್ನು ಸಲ್ಲಿಸಲಾಯಿತು. 24.12.99 ರಿಂದ ಧರಣಿಯ ಸ್ಥಳವನ್ನು ಬದಲಾವಣೆ ಮಾಡಿ ಕೋಲಾರದ ಗಾಂಧಿವನದ ಗಾಂಧಿ ಪ್ರತಿಮೆ ಮುಂದೆ ಅನಿರ್ದಿಷ್ಟ ಧರಣಿಯನ್ನು ಮುಂದುವರಿಸಲಾಯಿತು. ಈ ಧರಣಿಯಲ್ಲಿ ಹಾಲು ಉತ್ಪಾದಕರು ಮತ್ತು ನೌಕರರು ಪ್ರತಿದಿನ ಭಾಗವಹಿಸುವುದರ ಜೊತೆಗೆ ಈ ಧರಣಿಯನ್ನು ಪೂರ್ತಿಯಾಗಿ ಯಶಸ್ವಿ ಮಾಡುವಲ್ಲಿ ಕೋಲಾರ ಜಿಲ್ಲಾ ಎಸ್.ಎಫ್.ಐ., ಡಿವೈಎಫ್‌ಐ, ಸಿಐಟಿಯು, ಎಐಕೆಎಸ್. ಮತ್ತು ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ ಜವಾಬ್ದಾರಿ ಪ್ರಮುಖ ಪಾತ್ರ. ವಹಿಸಿದ್ದನ್ನು ಯಾರೂ ಮರೆಯುವಂತಿರಲಿಲ್ಲ. ಈ ಹೋರಾಟ ಪೂರ್ತಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ನಡೆಯುತ್ತಿದೆ ಎಂಬ ಅಭಿಪ್ರಾಯ ಬರಿ ಪತ್ರಿಕಾ ರಂಗಕ್ಕೆ ಮಾತ್ರ ಸೀಮಿತವಾಗದೆ ಜನಾಭಿಪ್ರಾಯವು ಆಗಿತ್ತು. ಶಿಸ್ತಿನ ಈ ಹೋರಾಟವನ್ನು ಜನತೆ ಮೆಚ್ಚಿದರು.


ವಿವಿಧ ಸಂಘಟನೆಗಳಿಂದ ಧರಣಿ ಮುಂದುವರಿಕೆ

ಅನಿರ್ದಿಷ್ಟ ಧರಣಿಯ ಮುಂದುವರಿಕೆಗೆ ಬೆಂಬಲವಾಗಿ 9ನೇ ದಿನ ಎಸ್.ಎಫ್.ಐ., 10ನೇ ದಿನ ಸಿಐಟಿಯು, 11ನೇ ದಿನ ಎಐಕೆಎಸ್ ಮುಂದುವರಿಸಿತ್ತು. ಮುಂದಿನ ದಿನಗಳಲ್ಲಿ ಅಂಗನವಾಡಿ, ಗ್ರಾಮ ಪಂಚಾಯ್ತಿ, ಡಿವೈಎಫ್‌ಐ ಮತ್ತು ಇತರ ಸಂಘಟನೆ ಬೆಂಬಲ ಸೂಚಿಸಲು ಮುಂದಾಗಿದ್ದವು. 31.12.99 ರಂದು ಸಂಘಗಳ ಪದಾಧಿಕಾರಿಗಳ ಸಭೆ ಸೇರಿ ಮುಂದಿನ ಉಗ್ರ ಹೋರಾಟದ ಬಗ್ಗೆ ಚರ್ಚಿಸಲು ಮುಂದಾಗುತ್ತಿರುವಾಗಲೇ ಅದುವರೆಗೂ ಗಮನ ಕೊಡದ ಸರ್ಕಾರ ವಿಚಾರಿಸಲು ಮುಂದಾಯಿತು.

ದಿನಾಂಕ 31.12.99 ರಂದು ಜಿಲ್ಲಾ ಉಸ್ತುವಾರಿ ಮಂತ್ರಿ ಹಾಗೂ ಕರ್ನಾಟಕ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಖಾತೆಯ ಸಚಿವರಾದ ವಿ.ಮುನಿಯಪ್ಪನವರು ಆಗಮಿಸಿ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಆಶ್ವಾಸನೆ ನೀಡಿದಾಗ ಧರಣಿಯನ್ನು ವಾಪಸ್ಸು ಪಡೆಯಲಾಯಿತು. ಒಂದು ವಾರ ಸಮಯ ತೆಗೆದುಕೊಂಡಿರುವ ಮಂತ್ರಿ ಬೇಡಿಕೆಗಳನ್ನು ಈಡೇರಿಸದಿದ್ದರೆ ಜನವರಿ 13-2000 ಜಿಲ್ಲಾ ಮಟ್ಟದ ಸಭೆ ಸೇರಿ ಮುಂದಿನ ಹೋರಾಟಗಳನ್ನು ರೂಪಿಸುವ ಬಗ್ಗೆ ತೀರ್ಮಾನಿಸಿದೆ.

ಕ್ರಿಸ್‌ಮಸ್‌ಗೂ ದೆವ್ವಗಳ ಕಾಟ

ಈ ಸಹಸ್ರಮಾನದ ಕೊನೆಯ ಹುಣ್ಣಿಮೆಯ ವಿಶೇಷ ಆಗಮನಕ್ಕಾಗಿ ಧಾರ್ಮಿಕ ಮನಸ್ಸುಗಳು ಹಾತೊರೆದು ಕಾಯುತ್ತಲಿದ್ದವು. ಬಳ್ಳಾರಿ ಜಿಲ್ಲೆಯ ಬಹುತೇಕ ಜನರಿಗೆ ಇದು ಫಲಪೂಜೆ ಹುಣ್ಣಿಮೆ ಎನಿಸಿದ್ದು, ಹಂಪೆಯಲ್ಲಿ ಜರುಗಲಿರುವ ಫಲಪೂಜೆಗಾಗಿ ಸಿದ್ಧತೆಗಳು ನಡೆದಿದ್ದವು. ಇನ್ನೊಂದೆಡೆ ಈ ಹುಣ್ಣಿಮೆ, ಕ್ರೈಸ್ತ ಧರ್ಮಿಯರಿಗೂ ಕೂಡ ಮಹತ್ವದ್ದಾಗಿದ್ದು, ಪೌರ್ಣಮಿಯ ಆಗಮನದೊಂದಿಗೆ ಕ್ರಿಸ್‌ಮಸ್ ಹಬ್ಬದ ಸಡಗರಕ್ಕಾಗಿ ಸಕಲ ಧಾರ್ಮಿಕ ಸಿದ್ಧತೆಗಳೊಂದಿಗೆ ಚಾತಕಪಕ್ಷಿಗಳಂತೆ ಕಾದು ಕುಳಿತಿದ್ದರು. ಅತ್ಯಂತ ಪ್ರಕಾಶಮಾನವಾಗಿ ಕಂಗೊಳಿಸುವ ಅಪರೂಪದ ಚಂದ್ರನ ದರ್ಶನಕ್ಕಾಗಿ, ವಿಜ್ಞಾನಿಗಳು ಮತ್ತು ವಿಜ್ಞಾನಾಸಕ್ತರು ಕೂಡಾ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ವೀಕ್ಷಣೆಯಲ್ಲಿ ತೊಡಗಿದ್ದರು. ಈ ಶತಮಾನದ ಕಟ್ಟಕಡೆಯ ಹುಣ್ಣಿಮೆ ಸಮೀಪಿಸುತ್ತಿದ್ದಂತೆ ಎಲ್ಲೆಲ್ಲೂ ಗುಸುಗುಸು ಸುದ್ದಿ. ಭಯಾನಕವಾದ ದೆವ್ವ ಬರುತ್ತದಂತೆ. ರಾತ್ರಿ ಯಾರೂ ಹೊರಗಡೆ ಬರಬಾರದಂತೆ. ಒಂದು ವೇಳೆ ಆ ದೆವ್ವದ ಕೈಗೆ ಸಿಕ್ಕಿಬಿದ್ದರೆ ಕೊಂದು ಹಾಕುತ್ತದಂತೆ ಎಂಬ ವದಂತಿಗಳು, ಬಳ್ಳಾರಿ, ಸಿರುಗುಪ್ಪ, ಸಿಂಧನೂರು, ಹೊಸಪೇಟೆ ಮುಂತಾದ ಪ್ರಮುಖ ಪಟ್ಟಣಗಳಲ್ಲೆಲ್ಲಾ ಹಬ್ಬಿದವು. ಒಂದಕ್ಕೆ ಹತ್ತು, ಹತ್ತಕ್ಕೆ ನೂರು ಕಥೆಗಳು ಹುಟ್ಟಿಕೊಂಡು ಜನ ಭಯಭೀತರಾಗಿ ತತ್ತರಿಸಿ ಹೋದರು. ಕತ್ತಲಾಗುತ್ತಿದ್ದಂತೆ 'ನಾಳೆ ಬಾ' ಅಕ್ಷರಗಳನ್ನು ಬಾಗಿಲ ಮೇಲೆ ಬರೆದು ಭದ್ರವಾಗಿ ಚಿಲಕ ಜಡಿದುಕೊಂಡು, ರಾತ್ರಿಯೆಲ್ಲಾ ದೆವ್ವದ ಧ್ಯಾನದಲ್ಲಿ ಜನರು ಜಾಗರಣೆ ಮಾಡತೊಡಗಿದರು. ಒಂದು ವಾರದವರೆಗೆ ಇದೇ ಪರಿಸ್ಥಿತಿ ಮುಂದುವರಿಯಿತು. ಇದೇ ಸುಸಂಧಿ ಎಂದು ಮನೆಯ ಮುಂದೆ ನಿಲ್ಲಿಸಿದ್ದ ಸೈಕಲ್ಲುಗಳನ್ನು, ದ್ವಿಚಕ್ರ ವಾಹನಗಳನ್ನು, ಕಾರುಗಳನ್ನು ದೆವ್ವದ ಸುದ್ದಿ ಹಬ್ಬಿಸಿದ್ದ ಮಾನವ ದೆವ್ವಗಳು ಅಪಹರಿಸಿದವು.



ನಾನು ಬರುತ್ತೇನೆ ಎಂದು ಈ ದೆವ್ವ ಯಾರಿಗೆ ಹೇಳಿತ್ತು? ಯಾರು ಈ ಸುದ್ದಿಯನ್ನು ಹಬ್ಬಿಸಿದರು. ಹೇಳಿಕೇಳಿ ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿಯೇ ಈ ದೆವ್ವ ಬರುತ್ತೇನೆಂದು ಯಾಕೆ ಹೇಳಿತು? ಈ ದೆವ್ವಕ್ಕೆ ಬೇರೆ ದಿನಗಳು ಬೇಕಾಗಿರಲಿಲ್ಲವೇ? ಎಂದು ಆಲೋಚಿಸಿದಾಗ ಕ್ರಿಸ್‌ಮಸ್ ಹಬ್ಬದ ಈ ದೆವ್ವಕ್ಕೂ ಹಾಲು ಕುಡಿದ ಗಣಪತಿಗೂ ಏನೋ ಸಂಬಂಧವಿದೆ ಎನ್ನಿಸದಿರದು. ಗಣಪತಿ ಹಾಲು ಕುಡಿದ ಎಂಬ ಕಟ್ಟುಕಥೆಯನ್ನು ಹಬ್ಬಿಸಿದವರೇ ಈ ದೆವ್ವದ ಸುದ್ದಿಯನ್ನು ಹಬ್ಬಿಸಿದ್ದಾರೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಜನರ ಧಾರ್ಮಿಕ ಭಾವನೆಗಳನ್ನು, ನಂಬಿಕೆಗಳನ್ನು ದುರುಪಯೋಗಪಡಿಸಿಕೊಂಡರು ಇಂತಹ ಕೋಲಾಹಲವನ್ನು ಸೃಷ್ಟಿಸುತ್ತಿರುವ ವಿಷ ಮನಸ್ಸುಗಳು ಈ ಘಟನೆಯ ಹಿಂದೆ ಕೆಲಸ ಮಾಡುತ್ತಿವೆ. ಪದೇ ಪದೇ ಇಂತಹ ಸುದ್ದಿಗಳನ್ನು ಹಬ್ಬಿಸುವ ಮೂಲಕ ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸಿ, ತಮ್ಮ ಬೇಳೆ ಬೇಯಿಸಿಕೊಳ್ಳಲು ಈ ದುಷ್ಟ ಮನಸ್ಸುಗಳು ಸದಾ ಹೊಂಚು ಹಾಕುತ್ತಿರುತ್ತವೆ. ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿ ಜನರಲ್ಲಿರುವ ಸುಂದರ ಭಾವನೆಗಳನ್ನು ಭಗ್ನಗೊಳಿಸಿ, ಕಲುಷಿತ ವಾತಾವರಣವನ್ನು ನಿರ್ಮಾಣ ಗೊಳಿಸುವುದೇ ಈ ಮತೀಯ ಶಕ್ತಿಗಳ ಹುನ್ನಾರವಾಗಿದೆ. ಗಣಪ ಹಾಲು ಕುಡಿದ ಸುದ್ದಿಯನ್ನು ಏಕಕಾಲಕ್ಕೆ, ವಿಶ್ವದಾದ್ಯಂತ ಪ್ರಚಾರ ಮಾಡಿದ ಈ ಜನ ಇಡೀ ವಿಶ್ವದ ಜನರನ್ನೇ ಮೂರ್ಖರನ್ನಾಗಿ ಮಾಡಿದರು. ಯಾವುದೇ ದ್ರವ ವಸ್ತುವಿಗೆ ಮೇಲ್ಮುಖ ಒತ್ತಡವಿದ್ದು, ಅಂಕುಡೊಂಕಾದ ಘನ ವಸ್ತುವಿನ ಸಮೀಪ ತಂದಾಗ ಆಕರ್ಷಿಸ ಲ್ಪಡುತ್ತದೆ ಎಂಬುದು ವಿಜ್ಞಾನದ ಸಾಮಾನ್ಯ ತಿಳುವಳಿಕೆ ಇರುವವರಿಗೆ ಗೊತ್ತಿರುವ ಸಂಗತಿಯಾಗಿದೆ. ವಿಜ್ಞಾನದ ಈ ಸತ್ಯವನ್ನು ಬಯಲಿಗೆಳೆಯಲು ಡಾ. ನರೇಂದ್ರ ನಾಯಕ್ ರವರು ಬಹಿರಂಗವಾಗಿ ಕಾರ್ಯ ಕ್ರಮವನ್ನು ಹಮ್ಮಿಕೊಂಡಿದ್ದಾಗ ಅವರ ಮೇಲೆ ಮರಣಾಂತಿಕ ಹಲ್ಲೆಯನ್ನು ಮಾಡಲಾಯಿತು.

ಹಾಲು ಕುಡಿದ ಗಣಪ ಮೂರ್ತಿ ವಿಸರ್ಜನೆಯನ್ನು ಏಕೆ ಮಾಡಲಿಲ್ಲ ಎಂದು ಚಂಪಾರವರು ಸವಾಲೆಸೆದಾಗ ಶಾಂತಂ ಪಾಪಂ, ಶಾಂತಂ ಪಾಪಂ ಎಂದು ಕಿವಿಮುಚ್ಚಿ ಕೊಂಡರು ಈ ಮೂರ್ಖ ಜನ. ಕಳೆದ ವರ್ಷದಿಂದ ಕ್ರೈಸ್ತ ಧರ್ಮೀಯರ ಮೇಲೆ ಹಲ್ಲು ಮಸೆಯುತ್ತಿರುವ ಮತೀಯವಾದಿಗಳು ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿಯೇ ಉದ್ದೇಶಪೂರ್ವಕವಾಗಿ ದೆವ್ವ ಬರುತ್ತದೆ ಎಂಬ ಸುಳ್ಳು ವದಂತಿ ಗಳನ್ನು ಹಬ್ಬಿಸುವುದರ ಮೂಲಕ ಹಬ್ಬದಲ್ಲಿ ಬೇರಾರ ಪಾಲ್ಗೊಳ್ಳಬಾರದೆಂಬ ಕುತಂತ್ರದಿಂದ ಹುನ್ನಾರ ನಡೆಸಿದ್ದಾರೆ. ಸುಮಾರು ಒಂದು ವಾರದ ಕಾಲ ಜನರು ಭಯದ ವಾತಾವರಣದಲ್ಲಿ ಬಳಲುವಂತೆ ಮಾಡಿದ್ದಲ್ಲದೆ, ಮೂರ್ಖರನ್ನಾಗಿ ಮಾಡಿದ್ದಾರೆ. ಜನರು ನಂಬಿಕೊಂಡಿರುವ ದೆವ್ವಗಳಿಗಿಂತಲೂ, ದೆವ್ವದ ಹೆಸರಿನಲ್ಲಿ ಜನರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿ ರುವ ಈ ಮತೀಯ ಶಕ್ತಿಗಳೇ ಹೆಚ್ಚು ಅಪಾಯಕಾರಿಯಾಗಿವೆ. ಜನರ ಮನಸ್ಸಿ ನಲ್ಲಿರುವ ಕಾಲ್ಪನಿಕ ದೆವ್ವಗಳಿಗಿಂತ ಮಾನವ ರೂಪದ ಈ ದೆವ್ವಗಳನ್ನು ಮೊದಲು ಸದೆ ಬಡಿಯಬೇಕಾಗಿದೆ. ಹಾಗಾದಾಗ ಮಾತ್ರ ಸಮಾಜದಲ್ಲಿ ಮತೀಯ ಜಾತೀಯ ಗಲಭೆಗಳು ತೊಲಗಿ, ಶಾಂತಿ, ನೆಮ್ಮದಿ ನೆಲೆಸಲು ಸಾಧ್ಯವಾಗುತ್ತದೆ.

- ಹುಲಿಕಟ್ಟಿ ಚನ್ನಬ...

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ...